ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜೂನ್ 2021....ಬೆಲೆ ರೂ. 5/-



ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
(2021,ಜೂನ್ 22 ರಿಂದ 24 ರ ವರೆಗೆ)



ತಿರುಮಲ ತಿರುಪತಿ ದೇವಸ್ಥಾನಗಳು

# ಕಾರ್ವೇಟಿನಗರ ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು

## 2021 ಜೂನ್ 02 ರಿಂದ 10 ರ ವರೆಗೆ

**02-06-2021 ಬುಧವಾರ**

ಹಗಲು: ಧ್ವಜಾರೋಹಣ - ರಾತ್ರಿ: ದೊಡ್ಡಶೇಷವಾಹನ.

**03-06-2021 ಗುರುವಾರ**

ಹಗಲು: ಚಿಕ್ಕಶೇಷವಾಹನ - ರಾತ್ರಿ: ಹಂಸವಾಹನ.

**04-06-2021 ಶುಕ್ರವಾರ**

ಹಗಲು : ಸಿಂಹವಾಹನ - ರಾತ್ರಿ: ಮುತ್ತಿನಚಪ್ಪರವಾಹನ.

**05-06-2021 ಶನಿವಾರ**

ಹಗಲು: ಕಲ್ಪವೃಕ್ಷವಾಹನ - ರಾತ್ರಿ: ಸರ್ವಭೂಪಾಲವಾಹನ

**06-06-2021 ಭಾನುವಾರ**

ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ - ರಾತ್ರಿ: ಗರುಡವಾಹನ.

**07-06-2021 ಸೋಮವಾರ**

ಹಗಲು: ಹನುಮದ್ವಾಹನ - ರಾತ್ರಿ: ಗಜವಾಹನ.

**08-06-2021 ಮಂಗಳವಾರ**

ಹಗಲು: ಸೂರ್ಯಪ್ರಭವಾಹನ - ರಾತ್ರಿ: ಚಂದ್ರಪ್ರಭವಾಹನ.

**09-06-2021 ಬುಧವಾರ**

ಹಗಲು: ರಥೋತ್ಸವ - ರಾತ್ರಿ: ಅಶ್ವವಾಹನ.

**10-06-2021 ಗುರುವಾರ**

ಹಗಲು: ಚಕ್ರಸ್ನಾನ - ರಾತ್ರಿ : ಧ್ವಜಾವರೋಹಣ.

# ಭಗವದ್ಗೀತೆ



ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃಪಿತೃನಥ ಪಿತಾಮಹಾನ್ ।

ಆಚಾರ್ಯಾನ್ ಮಾತುಲಾನ್ ಭ್ರಾತೃನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ।

ಶ್ವಶುರಾನ್ ಸುಹೃದಶ್ಚೈವ ಸೇನೆ ಯೋರು ಭಯೋರಪಿ

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 26)

ಅರ್ಜುನನು ಅಲ್ಲಿ ನಿಂದಿರುವ ಪಿತೃತುಲ್ಯರು, ಅಜ್ಜಂದಿರು, ಗುರುಗಳು ಸೋದರ ಮಾವಂದಿರು, ಅಣ್ಣ ತಮ್ಮಂದಿರು, ಮಕ್ಕಳು, ಮೊಮ್ಮಕ್ಕಳು, ಜತೆಗಾರರು, ಮಾವಂದಿರು, ಸ್ನೇಹಿತರು - ಹೀಗೆ ಎಲ್ಲ ಬಗೆಯ ಬಂಧುಗಳನ್ನು ಎರಡೂ ಕಡೆಯ ದಂಡಿನಲ್ಲಿ ಕಂಡನು.



ಶರಣು ವೆಂಕಟನಾಥ ಪೊರೆನಿಜ ಕರುಣಿ ಖಗವರೂಢ
ನತಜನಕೃತಸರಣಾ ದಿತಿಸುತ ಮಥನನೆ ತವಚರಣಾ
ಸತತ ಎನಗಾಭರಣಾ ಎಂದೆಂಬೆನೊ ಗತರೋಗ ಜರಾಮರಣಾ
ಸನಕಾದಿ ಮುನಿಮಾನ್ಯ ನಿನ್ನವ ರಣುಗನೆನಿಸೋ ಎನ್ನಾ
ಅನುಪಮ ಗುಣರನ್ನಾಒಲಿದು ಕಾಂಚನಗಿರಿವಾಸ ಎನ್ನಾ
ಎನ್ನ ದೋಷಗಳೆಲ್ಲ ನೋಡದಲೆ ಪ್ರಪನ್ನ ಜನರವತ್ಸಲಾ
ಅನ್ನಿಗ ನಾನಲ್ಲ ಶ್ರೀ ಗುರುಜಗನ್ನಾಥವಿಠಲಾ

- ಶ್ರೀ ಗುರುಜಗನ್ನಾಥದಾಸರು

(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಸಕರುಣಲೌಕಿಕಪ್ರಭು ಪರಿಗ್ರಹ ನಿಗ್ರಹಯೋಃ ನಿಯತಿಮುಪಾಧಿಚಕ್ರ ಪರಿವೃತ್ತಿ ಪರಂಪರಯಾ।**

**ವೃಷಭಮಹೀಧರೇಶಕರುಣೇ ವಿತರಂಗಯತಾಂ ಶ್ರುತಿಮಿತಸಂಪದಿ ತ್ವಯಿ ಕಥಂ ಭವಿತಾ ವಶಯಃ ॥ ೫೭॥**

ಹಿಂದಿನ ಪದ್ಯದಲ್ಲಿ ಇತರ ದಯೆಗಳಿಗಿಂತಲೂ ಶ್ರೀನಿವಾಸನ ದಯೆಗಿರುವ ಮೇಲ್ಮೆಯು ನಿರೂಪಿಸಲ್ಪಟ್ಟಿತು. ಅಂತಹ ದಯೆಯಲ್ಲಿ ಪ್ರಪತ್ತಿಯನ್ನು ಮಾಡುವವನಿಗೆ ಸಂಶಯವಿಲ್ಲದಿರುವಿಕೆಯಾ ದೃಢವಾದ ನಂಬಿಕೆಯೂ ಅವಶ್ಯವಾಗಿ ಇರಬೇಕು. ಭಗವಂತನ ದಯಾಸ್ವರೂಪವನ್ನು ಚೆನ್ನಾಗಿ ಪರಿಶೀಲಿಸಿದವರಿಗೆ ಸಂಶಯಕ್ಕೆ ಅವಕಾಶವೇ ಇಲ್ಲವೆಂಬುದನ್ನು ಈ ಪದ್ಯದಲ್ಲಿ ಸ್ಫುಟವಾಗಿ ನಿರೂಪಿಸುತ್ತಾರೆ.

ಈ ಲೋಕದಲ್ಲಿರುವ ಕಾರುಣಿಕನಾದ ಪ್ರಭು ಓರ್ವನು ಆಯಾಯ ದೇಶಕಾಲಗಳಲ್ಲಿ ಒಬ್ಬನನ್ನು ಅನುಗ್ರಹಿಸುವುದಕ್ಕಾಗಲಿ, ನಿಗ್ರಹಿಸುವುದಕ್ಕಾಗಲಿ ಕಾರಣವೇನೆಂದರೆ ಪ್ರಭುವಿನ ವಿಷಯದಲ್ಲಿ ಅವನು ಅನುಕೂಲನಾಗಿಯೂ,ಪ್ರತಿಕೂಲನಾಗಿಯೂ ಇರುವುದೇ. ಅನುಕೂಲನಾಗಿರುವಾಗ ಅನುಗ್ರಹಿಸುವವನು ಮತ್ತು ಪ್ರತಿಕೂಲನಾಗಿರುವಾಗ ನಿಗ್ರಹಿಸುವವನು.ಆದ್ದರಿಂದ ಪ್ರಭುವಿನ ಅನುಗ್ರಹವನ್ನು ಬಯಸಿದರೆ ಅವಶ್ಯವಾಗಿಯೂ ಅನುಕೂಲನಾಗಿರಬೇಕು. ಅನುಕೂಲನಾಗಿದ್ದರೆ ನಿಶ್ಚಯವಾಗಿಯೂ ಅನುಗ್ರಹವುಂಟಾಗುವುದು ಲೌಕಿಕ ಪ್ರಭುವಿನ ವಿಷಯದಲ್ಲಿಯೇ ಈ ನ್ಯಾಯವಿರುವಾಗ,ವೇದಗಳಿಂದ ವಿಶೇಷ ವೈಭವನ್ನುಳ್ಳವಳಾಗಿ ವರ್ಣಿಸಲ್ಪಟ್ಟ ಶ್ರೀನಿವಾಸನ ದಯೆಯ ವಿಷಯದಲ್ಲಿ ಅನುಕೂಲನಾಗಿದ್ದರೆ ಅನುಗ್ರಹವುಂಟಾಗುವುದೆಂಬ ವಿಷಯದಲ್ಲಿ ಸಂದೇಹಕ್ಕೆ ಅವಕಾಶವೆಲ್ಲಿಯದು? ಅನುಕೂಲನಾಗಿದ್ದರೆ ಭಗವಂತನ ದಯೆಯ ಅನುಗ್ರಹವನ್ನು ಅವಶ್ಯವಾಗಿಯೂ ಪಡೆಯಬಹುದು ತಾನು ಮಾಡಿರುವ ಪಾಪಗಳನ್ನು ನೆನೆದು ಸಂಶಯಪಡಬೇಕಾದುದಿಲ್ಲ.ಇದುವರೆಗೂ ಮಹಾಪರಾಧಿಯಾಗಿದ್ದರೂ ಇನ್ನು ಮುಂದೆ ಅನುಕೂಲನಾಗಿರುವೆನೆಂದು ನಿಶ್ಚಯಿಸಿಕೊಂಡು ದೃಢವಾದ ಮುಖ್ಯವಾದ ಅಂಗವು ಹೇಗೆ ಇಲ್ಲಿ ತಿಳಿಸಲ್ಪಡುವುದೋ ಹಾಗೆಯೇ ಅನುಕೂಲ ಸಂಕಲ್ಪ ಪ್ರಾತಿಕೂಲ್ಯ ವರ್ಜನವೆಂಬ ಅಂಗಗಳ ಈ ಪದ್ಯದಲ್ಲಿ ತಿಳಿಸಲ್ಪಟ್ಟವು. ಪ್ರಪತ್ತಿ ಮಾಡುವವನಿಗೆ  ಮುಖ್ಯವಾದ ಈ ಅಂಗಗಳ ಸ್ವರೂಪವೂ, ಇವುಗಳನ್ನು ಪ್ರಪತ್ತಿ ಮಾರ್ಗದಲ್ಲಿ ಉಪಯೋಗಿಸಿಕೊಳ್ಳುವ ರೀತಿಯೂ ಅವಶ್ಯವಾಗಿ ತಿಳಿದಿರಬೇಕಾದುದರಿಂದ ಆಚಾರ್ಯರು ಇವುಗಳನ್ನು ಪ್ರತಿಪಾದಿಸಿರುತ್ತಾರೆ.

ಲೌಕಿಕಪ್ರಭುವಿನ ದೃಷ್ಟಾಂತವನ್ನು ಕೊಟ್ಟಿರುವುದರಿಂದ ಇಲ್ಲಿ ಒಂದು ಪ್ರಶ್ನೆಯು ಹುಟ್ಟಬಹುದು.ಲೌಕಿಕನಾದ ಪ್ರಭುವು ತನಗೆ ಪ್ರತಿಕೂಲನಾಗಿರುವವನನ್ನು ನಿಗ್ರಹಿಸುವಂತೆ ದಯೆಯೂ ತನಗೆ ಪ್ರತಿಕೂಲನಾದವನನ್ನು ನಿಗ್ರಹಿಸುವಳೆಂದು ಹೇಳುವುದು ಸಮಂಜಸವೇ? ಎಂಬುದೇ ಆ ಪ್ರಶ್ನೆ. ಇದಕ್ಕೆ ಸಮಾಧಾನ ರೂಪವಾಗಿ" ವೇದಗಳು ಭಗವಂತನ ಮಹರ್ಷಿಯರನ್ನು ಅಜ್ಞಾತನಿಗ್ರಹೆಯರು (ನಿಗ್ರಹವೆಂಬುವನ್ನೇ ತಿಳಿಯದವರು) ಎಂದು ಘೋಷಿಸುವುದೆಂದೂ" ಇದು - "ಶ್ರುತಿಮಿತಸಂಪದಿ" ಎಂಬ ಪದದಿಂದ ತಿಳಿಯುವುದೆಂದೂ ಕೆಲವರು ಹೇಳುವರು ಅಥವಾ ಎರಡು ವಿಷಯಗಳಲ್ಲಿಯೂ ದೃಷ್ಟಾಂತವನ್ನು ತೆಗೆದುಕೊಂಡರೂ ಬಾಧಕವಿಲ್ಲ. ದಯೆಯ ವಿಷಯದಲ್ಲಿ ಪ್ರತಿಕೂಲರಾಗಿರುವವರಿಗೂ ನಿಗ್ರಹವುಂಟು.ಆದರೆ ದಯಾದೇವಿಯು ಮಾಡುವ ನಿಗ್ರಹಗಳೆಲ್ಲವೂ ಅನುಗ್ರಹ ಪರ್ಯವಸಾಯಿಗಳಾಗಿಯೇ ಇರುವುವು. ತಾತ್ಕಾಲಿಕವಾಗಿ ನಮಗೆ ಅಪ್ರಿಯವಾಗಿಯೂ, ನಿಗ್ರಹವಾಗಿಯೂ ತೋರಿದರೂ ಲಘುವಾದ ಅಂತಹ ಶಿಕ್ಷೆಗಳಿಂದ ಇವನಲ್ಲಿರುವ  ಪ್ರತಿಕೂಲಾಚರಣೆಗೆ ಕಾರಣವಾದ ಪಾಪಗಳನ್ನು ಹೋಗಲಾಡಿಸಿ ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಿ ಕೊನೆಗೆ ಅನುಗ್ರಹವನ್ನೇ ಮಾಡುವಳು. ಈ ರೀತಿಯಾದ ವಿಶೇಷಾರ್ಥವೇ "ಶ್ರುತಿಮಿತಸಂಪದಿ" ಎಂಬ ಪದದಿಂದ ತಿಳಿದು ಬರುವುದೆಂದು ಮತ್ತೆ ಕೆಲವರು ಸಮಾಧಾನವನ್ನು ಹೇಳುವರು.


ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ ವೈಶಾಖ-ಜ್ಯೇಷ್ಠಮಾಸ ಸಂಚಿಕೆ

ಸಂಪುಟ - 52 ಜೂನ್ 2021 ಸಂಚಿಕೆ - 2



**ಗೌರವ ಸಂಪಾದಕರು**
ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ವಟಸಾವಿತ್ರಿ ಹುಣ್ಣಿಮೆ | -ಶ್ರೀಮತಿ. ಬಿ.ಎಸ್ ಪಾರಿಜಾತ | 7 |
| ಏನಾದರೂ ಆಗು ಮೊದಲು ಯೋಗಿಯಾಗೂ | - ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 9 |
| ಗಂಗಾ ಹರಹರ ಗಂಗಾ | -ಶ್ರೀಮತಿ. ಕೆ.ವಿ. ಪದ್ಮಾವತಿ | 12 |
| ವೇದಪುರಾಣಗಳಲ್ಲಿ ಪರಿಸರ ಸಂರಕ್ಷಣೆ | - ಶ್ರೀಮತಿ ಕೆ.ವಿ. ಲತಾ | 15 |
| ಆಳ್ವಾರರ ಭಗವದನುಭವ | - ಡಾ॥ ಸಿ. ಎಸ್. ಊರ್ಮಿಳಾ | 18 |
| ದೊಡ್ಡದಾಳವಟ್ಟದ ಶ್ರೀ ಲಕ್ಷ್ಮೀನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ಆಯುರ್ವೇದ ಮತ್ತು ನಾವು | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 22 |
| ಪುಸ್ತಕಾವಲೋಕನ | - ಬಿ.ಎಸ್.ರಾಮಮೂರ್ತಿ | 23 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎಸ್.ಶ್ರೀನಿವಾಸನ್ | 24 |
| ಶ್ರೀಗೋಪಾಲದಾಸರ ಕೃತಿಗಳಲ್ಲಿ ಭಾಗವತ | - ಡಾ॥ ಮಧುಮತಿ ದೇಶಪಾಂಡೆ | 31 |
| ಸಂಸ್ಕೃತ ಕಲಿಯೋಣ....!! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ | 33 |
| ವೈಕುಂಠ ವರ್ಣನೆ | - ಶ್ರೀಧರ ರಾಯಸಂ | 34 |
| ಗಾಂಧರ್ವ ವಿದ್ಯಾ ಸಂಗೀತ | - ಪಾರುಸುಧಿ | 37 |
| ಕಾಖಂಡಕಿಯ ಶ್ರೀ ಮಹೀಪತಿದಾಸರು | - ಡಾ॥ ರಾಮಚಂದ್ರದಾಸ್ ಸಿ.ಜೆ. | 39 |
| ವೇದಗಳಲ್ಲಿ ವಿಜ್ಞಾನ | - ಡಾ॥ ಟಿ.ವಿ. ಸತ್ಯನಾರಾಯಣ | 42 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 44 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 47 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 49 |
| ನೀತಿಕಥೆ - ಶಿಲ್ಪಿಯ ನ್ಯಾಯಬೋಧನೆ | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರಕಥೆ - ಬಾಲ ಹನುಮಂತ | -ಟಿ.ಶಿವಾಜಿ | 52 |
| ಕ್ವಿಜ್ | | 54 |

ಮುಖಚಿತ್ರ - ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
ಹಿಂಬದಿಚಿತ್ರ - ಜಾಪಾಲಿ ಆಂಜನೇಯಸ್ವಾಮಿ (ತಿರುಮಲೆ)

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ‘ಗಾವೋ ವಿಶ್ವಸ್ಯ ಮಾತರಃ’

ನಮ್ಮ ಪುರಾಣ ಇತಿಹಾಸಗಳಲ್ಲಿ ಗೋಮಾತೆಯ ಪ್ರಾಮುಖ್ಯತೆಯ ಬಗೆಗೆ ಅನೇಕ ದೃಷ್ಟಾಂತಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಕಲ್ಪದ ಆದಿಯಲ್ಲಿ ಕಾಮಧೇನುವಿನಿಂದ ಹಿಡಿದು ಕೃತಯುಗದಲ್ಲಿ ಗುರುದತ್ತಾತ್ರೇಯರ ಹಿಂದೆ ದ್ವಾಪರ ಯುಗದಲ್ಲಿ ಶ್ರೀಕೃಷ್ಣನ ಹಿಂದೆ ದ್ವಾಪರಯುಗದಲ್ಲಿ ಶ್ರೀ ಕೃಷ್ಣನ ಹಿಂದೆ ಇರುವ ಗೋವುಗಳವರೆಗೂ ಹಾಗೆಯೇ ಆಧುನಿಕ ಕಾಲದಲ್ಲೂ ಗೋಸೇವೆಯಿಂದುಂಟಾಗುವ ಫಲ ಅದರ ವಿಶೇಷತೆಯ ಬಗೆಗೆ ಅನೇಕ ವಿವರಗಳು ನಮಗೆ ಕಾಣಸಿಗುತ್ತವೆ.

ಸಾಕ್ಷಾತ್ತು ಶ್ರೀಶ್ರೀನಿವಾಸನು ಹುತ್ತದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಸಂದರ್ಭದಲ್ಲಿ ಬ್ರಹ್ಮರುದ್ರರು ಗೋವು ಮತ್ತು ಕರುವಿನಂತೆ ಬದಲಾಗಿ ಶ್ರೀ ಹರಿಗೆ ಕ್ಷೀರಧಾರೆಯನ್ನು ಸುರಿಸಿದರು.ಇಂದಿನ ಈ ಕಾಲದಲ್ಲಿ ನಮ್ಮ ಜೀವನಶೈಲಿಗಳು ಬದಲಾಗಿ ಗೋ ಸನ್ನಿಧಿಗೆ ದೂರವಾಗುತ್ತಿದ್ದೇವೆ. ಆದರೆ ನಮ್ಮ ಹಿಂದಿನ ಕಾಲದವರು ಈ ಪಶುಸಂಪತ್ತನ್ನು ತಮ್ಮ ಜೀವನಾಧಾರವನನಾಗಿಟ್ಟುಕೊಂಡೇ ಸಿರಿಸಂಪತ್ತನ್ನು ಅಳೆಯುತ್ತಿದ್ದರು. ಅಂದಾಜುಮಾಡುತ್ತಿದ್ದರು. ಅದಕ್ಕೆ ಗೋ ಸಂಪತ್ತು ಹೆಚ್ಚಿಗೆ ಇದ್ದ ಕಾಲದಲ್ಲಿ ಗವ್ಯ ಪದಾರ್ಥಗಳು ಅಂದರೆ, ಗೋವಿನಿಂದ ಲಭಿಸುವ ಹಾಲು ಆದರಿಂದ ತಯಾರಿಸುವ ಮೊಸರು, ತುಪ್ಪ, ಗೋಮೂತ್ರ, ಸಗಣೆಯಂತಹವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು ಅದರ ಮೂಲಕ ಪ್ರಜೆಗಳೆಲ್ಲರಿಗೂ ಒಳ್ಳೆಯ ಪುಷ್ಟಿಕರವಾದ ಆಹಾರ, ಆರೋಗ್ಯ ದೊರೆಯುತ್ತಿತ್ತು.

ಇಂದು ‘ಹಸಿರುಕ್ರಾಂತಿ’ ಹೆಸರಿನಲ್ಲಿ ನಡೆಯುತ್ತಿರುವ ವ್ಯವಸಾಯದ ವಿಧಾನಗಳು ಸರಿಯಾಗಿಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ಇದಕ್ಕೆ “ಗೋ ಆಧಾರಿತ ವ್ಯವಸಾಯವೇ” ಪರಿಹಾರವಾಗಿ ಕಾಣುತ್ತಿದೆ. ಒಂದು ಹಸುವಿನಿಂದ 20 ರಿಂದ 25 ಎಕರೆಗಳ ಭೂಮಿಯನ್ನು ಸಾಗುವಳಿ ಮಾಡಬಹುದೆಂದ ಶಾಸ್ತ್ರಜ್ಞರು ತಿಳಿಸುತ್ತಿದ್ದಾರೆ. ಒಂದು ಗ್ರಾಂ ಹಸುವಿನ ಸಗಣಿ ಭೂಮಿಯಲ್ಲಿ ಬೆರೆತರೆ ಸುಮಾರು 300 ರಿಂದ 500 ಬ್ಯಾಕ್ಟೀರಿಯಾಗಳನ್ನು ಉತ್ಪತ್ತಿ ಮಾಡುತ್ತವೆ. ಇದರಿಂದ ಭೂಮಿಯಲ್ಲಿ ‘ಸೇಂದ್ರೀಯ ಕಾರ್ಬನ್’ ನ ಅಂಶ ಹೆಚ್ಚಾಗಿ ಭೂಮಿ ಆರೋಗ್ಯಕರವಾಗಿ ಬದಲಾಗುತ್ತದೆ.

ಇತರ ಮೂಗಜೀವಗಳೂ ಹಾಯಾಗಿ ಜೀವಿಸುತ್ತವೆ. ಗೋ ಆಧಾರಿತ ಸೇಂದ್ರೀಯ ವ್ಯವಸಾಯದ ಮೂಲಕ ಬೆಳೆಯುವ ಬೆಳೆಗಳಲ್ಲಿ ಪ್ರೋಟಿನ್ ಫೈಬರ್, ವಿಟಮಿನ್‌ಗಳು ಹೇರಳವಾಗಿ ದೊರೆಯುತ್ತವೆ.

ದಶಮಾನಗಳ ಹಿಂದೆ ಶ್ರೀ ಶ್ರೀನಿವಾಸನಿಗೆ ನೈವೇದ್ಯವನ್ನಾಗಿ ನೀಡುವ ಪದಾರ್ಥಗಳನ್ನು ಪ್ರಕೃತಿಪರವಾಗಿ ಬೆಳೆಯುತ್ತಿದ್ದ ಪದಾರ್ಥಗಳಿಂದ ನೈವೇದ್ಯಗಳನ್ನು ತಯಾರಿಸುತ್ತಿದ್ದರು. ಅದರ ಅಂಗವಾಗಿ ಪ್ರಕೃತಿ ಸಂಪತ್ತುಗಳಿಂದ ಸೇಂದ್ರೀಯ ಗೊಬ್ಬರಗಳನ್ನು ಉಪಯೋಗಿಸಿ ಬೆಳೆದ ಬೆಳೆಗಳ ಮೂಲಕ ಅದರಿಂದ ಲಭಿಸಿದ ಧಾನ್ಯಗಳನ್ನು ಉಪಯೋಗಿಸಿ ಗೋವಿಂದನಿಗೆ ನೈವೇದ್ಯವನ್ನು ತಯಾರಿಸಬೇಕೆಂದು ತಿ.ತಿ.ದೇ. ಮೇ 1 ನೇ ತಾರೀಖಿನಿಂದ ನಾಂದಿಹಾಡಿದೆ. ಸ್ವದೇಶಿಯ ಭತ್ತದ ಮೂಲಕ ತಯಾರಾದ ಅಕ್ಕಿಯಿಂದ ಶ್ರೀಹರಿಗೆ ನೈವೇದ್ಯವನ್ನು ತಯಾರಿಸಬೇಕೆಂದು ಸಂಕಲ್ಪಮಾಡಿ ಹತ್ತುದಿನಗಳ ಕಾಲ ಗೋವಿಂದನಿಗೆ ನೈವೇದ್ಯ ಮಾಡುವ ಅನ್ನಪ್ರಸಾದಗಳ ತಯಾರಿಗಾಗಿ 2200 ಕೆ.ಜಿ. ಗಳಷ್ಟು ಅಕ್ಕಿ, ತರಕಾರಿಗಳು, ಬಾಳೆಹಣ್ಣು ಬೆಲ್ಲ, 15 ಕೆ.ಜಿ. ಗಳಷ್ಟು ದೇಶಿಯ ತುಪ್ಪ ಇವುಗಳನ್ನು ವಿನಿಯೋಗಿಸಲಾಯ್ತು.

ತಿ.ತಿ.ದೇ. ಗೋ ಆಧಾರಿತ ವ್ಯವಸಾಯವನ್ನು ಮಾಡುತ್ತಿರುವವರ ಬಳಿ ನೇರವಾಗಿಯೇ, ಪ್ರಸಾದಕ್ಕೆ ಬೇಕಾದ ಪದಾರ್ಥಗಳನ್ನು ಖರೀದಿಸುವುದಕ್ಕೆ ಯೋಜನೆಗಳನ್ನು ಸಿದ್ಧಪಡಿಸಿದ್ದಾರೆ. ಅದರ ಮೂಲಕ ಗೋ ಸಂಪತ್ತನ್ನು ಕಾಪಾಡಿ, ಗೋ ಆಧಾರಿತ ವ್ಯವಸಾಯದ ಮುಖಾಂತರ ಬೆಳೆಗಳನ್ನು ಪುಷ್ಕಳವಾಗಿ ಬೆಳೆಸಿ, ಶ್ರೀ ಶ್ರೀನಿವಾಸನ ನಿತ್ಯ ಸೇವೆಗಳನ್ನು ನಡೆಸಿ, ಸಮಸ್ತ ಮಾನವ ಕುಲಕ್ಕೆ ಆಯುರಾರೋಗ್ಯ ಐಶ್ವರ್ಯಗಳು ಸಂಪತ್ತು ದೊರೆಯಬೇಕೆಂದು ಬ್ರಹ್ಮಾಂಡ ನಾಯಕನನ್ನು ಪ್ರಾರ್ಥಿಸೋಣ...ಬನ್ನಿ... ಎಲ್ಲರೂ ಒಂದಾಗಿ ಕೈ ಜೋಡಿಸಿ.. ಗೋಸಂಪತ್ತು ಕಾಪಾಡೋಣ... ಗೋ ಆಧಾರಿತ ವ್ಯವಸಾಯವನ್ನು ಎಲ್ಲೆಡೆ ಹರಡುವಂತೆ ಮಾಡೋಣ..

**“ಗೌಃ ರಕ್ಷತಿ ರಕ್ಷಿತಾ”**

**ಗೋಮಾತೆಯನ್ನು ರಕ್ಷಿಸೋಣ...**

**ಅದೇ ನಮ್ಮನ್ನು ರಕ್ಷಿಸುವುದು**

**ಗೋವಿಂದಾ ಗೋವಿಂದಾ ಗೋವಿಂದಾ॥”**



# ವಟಸಾವಿತ್ರಿ ಹುಣ್ಣಿಮೆ


-ಶ್ರೀಮತಿ. ಬಿ.ಎಸ್.ಪಾರಿಜಾತ

90083 35689


ಮದುವೆಯಾದ ಮಹಿಳೆಯರು ವಟಸಾವಿತ್ರಿ ವ್ರತವನ್ನು ಕಾರಹುಣ್ಣಿಮೆಯಂದು ಆಚರಿಸುವ ವಾಡಿಕೆ ಇದೆ. ಪತ್ನಿಯು ತನ್ನ ಪತಿಯ ಅಯುಷ್ಯ ವೃದ್ಧಿಗಾಗಿ ಆಚರಿಸುವ ವ್ರತವೇ ವಟಸಾವಿತ್ರಿ ವ್ರತ.ಈ ವ್ರತವನ್ನು ಗುಜರಾತ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಅಲ್ಲದೇ ಇನ್ನೂ ಹಲವಾರು ಕಡೆ ಆಚರಿಸಲಾಗುತ್ತದೆ. ಪೌರಾಣಿಕ ಹಿನ್ನೆಲೆ ಹೊಂದಿರುವ ಈ ವ್ರತವನ್ನು ಸತ್ಯವಾನ ಸಾವಿತ್ರಿಯನ್ನು ನೆನೆದು ಆಚರಿಸಲಾಗುತ್ತದೆ. ಸಾವಿತ್ರಿಯು ತನ್ನ ಪತಿಯನ್ನು ಯಮನಿಂದ ಉಳಿಸಿಕೊಳ್ಳಲು ಈ ವ್ರತ ಆಚರಿಸುತ್ತಾಳೆ. ಇದರಿಂದ ಯಮನು ಸಂತಸಗೊಂಡು ಸತ್ಯವಾನನನ್ನು ಮರಳಿ ಬದುಕಿಸಿದ ಕಥೆ ನಂಬಿಕೆಯಲ್ಲಿದೆ.

ಪೂಜೆಯ ಪದ್ಧತಿ - ಹಿಂದೂ ಧರ್ಮದಲ್ಲಿ ಮಹಿಳೆಯರು ತಮ್ಮ ಗಂಡನ ದೀರ್ಘಾಯುಷ್ಯಕ್ಕಾಗಿ ಉಪವಾಸ ಮಾಡುವ ವ್ರತವನ್ನು ಮಾಡುತ್ತಾರೆ.ಆಲದಮರ ಪೂಜಿಸಿ ಪ್ರದಕ್ಷಿಣೆ ಹಾಕಿ, ಮರಕ್ಕೆ ದಾರವನ್ನು ಸುತ್ತಿ ತಾವು ಅಥವಾ ಯಾವುದಾದರೂ ನ್ಯಾಣವನ್ನಿಟ್ಟು ಪತಿಯ ಆಯುಷ್ಯವೃದ್ಧಿಗೆ ಆಲದ ಮರದಲ್ಲಿ ಬ್ರಹ್ಮ,ವಿಷ್ಣು,ಮಹೇಶ್ವರರು ವಾಸವಾಗಿರುವುದರಿಂದ ಇದನ್ನು ಪೂಜಿಸಿದರೆ ಪತಿಯ ಆಯಸ್ಸು, ಆರೋಗ್ಯ ವೃದ್ಧಿಯಾಗುವುದೆಂಬ ಪ್ರತೀತಿ ಇದೆ.

ಬೆಳಿಗ್ಗೆ ಸ್ತ್ರೀಯರು ಅಂದಿನ ದಿನ ಬೇಗ ಎದ್ದು ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯವನ್ನು ಒಪ್ಪಿಸುತ್ತಾರೆ. ಉಪವಾಸ ವಿದ್ದು ಮಡಿ ಬಟ್ಟೆ ಧರಿಸಿ ಹಣೆಗೆ ಕುಂಕುಮ, ಕೆನ್ನೆಗೆ ಅರಿಷಿಣ, ಮುಡಿಗೆ ಹೂ ಮುಡಿದು ಅಲಂಕಾರ ಮಾಡಿಕೊಂಡು ಪೂಜೆಗೆ ಬೇಕಾದ ಎಲ್ಲ ವಸ್ತುಗಳನ್ನು ಸಂಗ್ರಹಿಸಿ ವಟ ಅಥವಾ ಆಲದ ಮರದ ಕೆಳಗೆ ನೆಲ ಶುದ್ಧ ಮಾಡಿ ವಟಸಾವಿತ್ರಿ ಫೋಟೋ ಅಥವಾ ವಿಗ್ರಹವಿದ್ದರೆ ಇರಿಸಿ ಧೂಪ,ದೀಪ,ಅರಿಷಿಣ, ಕುಂಕುಮ, ನೆನೆದ ಕಡಲೇಕಾಳು, ಮಾಂಗಲ್ಯ, ಹೂವು ಅರ್ಪಿಸಿ ಪೂಜೆ ಮಾಡುತ್ತಾರೆ. ಪೂಜೆಯ ನಂತರ ಆಲದ ಮರಕ್ಕೆ ದಾರದಿಂದ 5, 11, 21,51,10,8 ಬಾರಿ ಸುತ್ತಿ ನಾಣ್ಯ ಇಟ್ಟು ಪೂಜಿಸುತ್ತಾರೆ. ಆಲದ ಅಥವಾ ವಟವೃಕ್ಷದ ಹತ್ತಿರ ಹೋಗಿ ಪೂಜೆ ಮಾಡಲು ಆಗದವರು ಮನೆಯಲ್ಲೇ ಫೋಟೋ ಅಥವಾ ವಿಗ್ರಹಕ್ಕೆ ಪೂಜಿಸಬಹುದು.

ವಿವಾಹಿತರು ಪೂಜಿಸುವಾಗ ಅಲದಮರಕ್ಕೆ ಜೇನು ತುಪ್ಪ ಅರ್ಪಿಸಿದರೆ ಒಳ್ಳೆಯದು.ಸಾವಿತ್ರಿಕಥೆಯನ್ನು ಓದಿ ಇತರರಿಗೆ ಭಿಕ್ಷೆ ನೀಡಿ ಧಾನ್ಯಗಳಿಂದ ತಯಾರಿಸಿದ ಬೆಲ್ಲದ ಪ್ರಸಾದ ಅಲದಮರಕ್ಕೆ ಅರ್ಪಿಸಿ ಮನೆಯ ಹಿರಿಯರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು.

ವೈಜ್ಞಾನಿಕವಾಗಿರುವ ವಿಚಾರ-ವೈಜ್ಞಾನ ನೋಡಿದರೆ ಸತ್ಯವಾನ ಸಾವಿತ್ರಿ ಎಂದರೆ ಭೂಮಿ ಮತ್ತು ಪ್ರಕೃತಿಯನ್ನು ಪ್ರತಿನಿಧಿಸುತ್ತದೆ. ಪ್ರತಿವರ್ಷ ಭೂಮಿ ಒಣಗಿದಾಗ ನಿಸರ್ಗದ ನಿಯಮಾನುಸಾರ ಮಳೆ ಸುರಿದು ಹಸುರಾಗಿ ಜೀವಕಳೆ ಪಡೆಯುತ್ತದೆ. ಹೀಗೆ ಸತ್ತು ಹುಟ್ಟುವ ದೀರ್ಘಾಯುಷಿಯಾಗಿ ಪ್ರಕೃತಿಯನ್ನೇ ಸಾಂಕೇತಿಕವಾಗಿ ವಟಸಾವಿತ್ರಿ ವ್ರತವನ್ನು ಆಚರಿಸುವ ಪದ್ಧತಿ ಬಂದಿರಬಹುದೆಂದು ಕೆಲವರ ಅಭಿಪ್ರಾಯವಿದೆ.

ಆಲದ ಮರದ ಮಹತ್ವ - ವಟವೃಕ್ಷ ಎಂದರೆ ಆಲದ ಮರ. ಆಲದ ಮರದ ಕೆಳಗೆ ಸತ್ಯವಾನನ ದೇಹವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತು ಯಮನನ್ನು ಬೇಡಿದ್ದು ಸಹ ಇಲ್ಲಿಯೇ.ಆಗ ಯಮನು ದೀರ್ಘಾಯುಷ್ಯ ನೀಡಿದ್ದು ಈ ಮರದ ಕೆಳಗೆ. ಆದ್ದರಿಂದ ಆ ದಿನದಂದು ವಟವೃಕ್ಷವನ್ನು ಪೂಜಿಸಲಾಗುತ್ತದೆ. ವೃಕ್ಷವನ್ನು ಎಂಬ ಹೆಸರು ಮರದ ಶ್ರೇಷ್ಟತೆ ವಿಶಿಷ್ಟತೆಯನ್ನು ಈ ವೃಕ್ಷ ಸ್ಪಷ್ಟಪಡಿಸುತ್ತದೆ. ಇದರ ಕೆಳಗೆ ಆಶ್ರಯ ಪಡೆಯುವವರು ಅತ್ಯುತ್ತಮ ಆರೋಗ್ಯ. ಅಪರಿಮಿತ ತೇಜಸ್ಸನ್ನು ಪಡೆದು ದೇವತ ಸ್ವರೂಪದಿಂದ ಕಂಗೊಳಿಸುವರು.

ವ್ರತದಕಥೆ - ಪ್ರಾಚೀನಕಾಲದಲ್ಲಿ ಮುದ್ರಾರಾಜನಾದ ಅಶ್ವಪತಿಯು ಮಕ್ಕಳಿಲ್ಲದ ಸಮಸ್ಯೆಯಿಂದ ಮಕ್ಕಳನ್ನು ಪಡೆಯಲೆಂದು ಸಾವಿತ್ರಿದೇವಿಯ ಕಠಿಣಯಜ್ಞ,ಪೂಜೆಯನ್ನು ಮಾಡುವಲ್ಲಿ ತೊಡ



ಗಿದನು. ಈತನ ಕಠಿಣ ಪೂಜೆಯಿಂದ ಹೆಣ್ಣು ಮಗುವು ಪ್ರಾಪ್ತಿಯಾಗುವುದು. ಆ ಮಗು ತುಂಬಾ ರೂಪವತಿ ಅಲ್ಲದೇ ಸಾವಿತ್ರಿಯ ಪೂಜೆಯಿಂದ ಹುಟ್ಟಿದ ಮಗುವು ಆದ್ದರಿಂದ ಆ ಮಗುವಿಗೆ ರಾಜ ಸಾವಿತ್ರಿ ಎಂದು ನಾಮಕರಣ ಮಾಡುತ್ತಾನೆ. ಸಾವಿತ್ರಿ ಚಿಕ್ಕವಯಸ್ಸಿನವಳಿರುವಾಗಲೇ ಸಾಲ್ವ ದೇಶದ ರಾಜನ ಮಗನಾದ ಸತ್ಯವಾನನನ್ನು ಪ್ರೀತಿಸುತ್ತಾಳೆ.

ಸತ್ಯವಾನನಿಗೂ ಕೂಡಾ ಸಾವಿತ್ರಿಯ ಮೇಲೆ ಮನಸ್ಸಾಗುತ್ತದೆ. ಸಾವಿತ್ರಿ ತಂದೆ ಮಗಳಿಗೆ ಒಂದು ವರನನ್ನು ಹುಡುಕಿ ತರಲು ಮಂತ್ರಿಗಳಲ್ಲಿ ವಿನಂತಿಸುತ್ತಾನೆ. ಸಾವಿತ್ರಿ ಸತ್ಯವಾನನ್ನೇ ಮದುವೆಯಾಗುವುದಾಗಿ ಹೇಳಿದಾಗ ನಾರದರು ರಾಜನಲ್ಲಿಗೆ ಬಂದು ಸತ್ಯವಾನನು ಅಲ್ಪಾಯುಷ್ಯದ ಬಗ್ಗೆ ತಿಳಿಸುತ್ತಾನೆ.

ಸಾವಿತ್ರಿಯು ನಾನು ಮಾನಸಿಕವಾಗಿ ಆತನನ್ನೇ ಪತಿಯೆಂದು ತಿಳಿದಿರುವುದಾಗಿ ತನ್ನ ನಿರ್ಧಾರ ಬದಲಾಯಿಸಲಾರೆನೆಂದು ಹೇಳುತ್ತಾಳೆ. ಆಗ ಸಾವಿತ್ರಿಯ ತಂದೆ ಅವಳ ವಿವಾಹ ಸತ್ಯವಾನನೊಡನೆ ಅರಣ್ಯದಲ್ಲಿ ನೆರವೇರಿಸುತ್ತಾನೆ. ಪತಿ, ಅತ್ತೆ, ಮಾವರೊಡನೆ ಸಾವಿತ್ರಿ ಅರಣ್ಯವಾಸವನ್ನಾರಂಭಿಸುತ್ತಾಳೆ. ಪತಿಯು ಅಲ್ಪಾಯುಷಿಯೆಂದು ಅವನ ಒಳಿತಿಗಾಗಿ ಅನೇಕ ವ್ರತನೇಮ ಆಚರಿಸುತ್ತಾಳೆ.

ಅದೊಂದು ದಿನ ತನ್ನ ಪತ್ನಿಯ ತೊಡೆಯ ಮೇಲೆ ಶಿರವನ್ನಿಟ್ಟು ಮಲಗಿದಾಗ ಯಮಧರ್ಮರಾಜ ಬರುತ್ತಾನೆ. ಸಾವಿತ್ರಿ ತನ್ನ ಸತ್ಯ ಚಾರಿತ್ರ್ಯ, ಚತುರತನದ ಮಾತಿನಿಂದ ಯಮರಾಜನನ್ನು ಒಲೈಸಿ ಯಶಸ್ವಿಯಾಗುತ್ತಾಳೆ. ಯಮರಾಜನು ಆಕೆಯ ಸತ್ಯ,

ಚಾರಿತ್ರ್ಯ, ಸತ್ಯದ ಮಾತಿಗೆ ಒಲಿದು ಮೂರು ವರ ದಯಪಾಲಿಸುತ್ತಾನೆ. ಅಂದಿನಿಂದ ಸತಿ ಶ್ರೇಷ್ಠರಲ್ಲಿ ಸಾವಿತ್ರಿ ತನ್ನ ಸತ್ಯ ಚಾರಿತ್ರ್ಯ, ಚತುರತನದ ಮಾತಿನಿಂದ ಯಮರಾಜನ್ನು ಒಲೈಸಿ ಯಶಸ್ವಿಯಾಗುತ್ತಾಳೆ. ಯಮರಾಜನು ಆಕೆಯ ಸತ್ಯ, ಚಾರಿತ್ರ್ಯ,ಸತ್ಯದ ಮಾತಿಗೆ ಒಲಿದು ಮೂರು ವರ ದಯಪಾಲಿಸುತ್ತಾನೆ. ಅಂದಿನಿಂದ ಸತಿ ಶ್ರೇಷ್ಠರಲ್ಲಿ ಸಾವಿತ್ರಿ ಒಬ್ಬರೆಂದು ಪರಿಗಣಿಸಲಾಗಿದೆ. ಹಿಂದೂ ಧರ್ಮ ಪುರಾಣದಲ್ಲಿ ಇವರ ಹೆಸರು ಇದೆ.


ಇಂತಹ ಸತಿಯನ್ನು ನೆನೆಯಲು ಪ್ರತೀ ವರ್ಷ ಜ್ಯೇಷ್ಠಮಾಸದ ಶುದ್ಧ ಹುಣ್ಣಿಮೆಯಂದು "ವಟ ಪೂರ್ಣಿಮಾ" ವ್ರತ ಆಚರಿಸಲಾಗುತ್ತದೆ. ಈ ವರ್ಷ ಜೂನ್ ತಿಂಗಳು 24 ನೇ ತಾರೀಖು ಗುರುವಾರ ವಟಸಾವಿತ್ರಿಯ ವ್ರತಾಚರಣೆ ಪ್ರಯುಕ್ತ ಸ್ತ್ರೀಯರೆಲ್ಲ ವ್ರತವನ್ನು ಆಚರಿಸಿ ಪತಿಯ ಆಯಸ್ಸು, ಆರೋಗ್ಯವನ್ನು ದಯಪಾಲಿಸಲಿ ಎಂದು ಕೇಳೋಣವಲ್ಲವೇ?


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# ಏನಾದರೂ ಆಗು ಮೊದಲು ಯೋಗಿಯಾಗು




- ಪ್ರಣವ
90356 18076

ಯೋಗ ವಿದ್ಯೆಯು ವಿಶ್ವಕ್ಕೆ ಭರತವರ್ಷವು ನೀಡಿರುವ ಒಂದು ಮಹಾ ಕೊಡುಗೆ. ಅದು ಅತಿ ಪ್ರಾಚೀನವಾಗಿರುವಂತೆಯೇ ಸಮೀಚೀನವೂ ಕೂಡ ಆಗಿದೆ. ವೇದೋಪನಿಷತ್ತುಗಳಲ್ಲಿ,ಶೃತಿ ಶಾಸ್ತ್ರ ಪುರಾಣಗಳಲ್ಲಿ,ಭಗವದ್ಗೀತೆ ಮತ್ತು ಇತಿಹಾಸಗಳಲ್ಲಿ ಕೂಡ ಯೋಗಕ್ಕೆ ಸಂಬಂಧಪಟ್ಟ ಉಲ್ಲೇಖಗಳಿರುವುದನ್ನು ನೋಡಿದರೆ ಇದಕ್ಕೆ ಸುಮಾರು ನಾಲ್ಕೈದು ಸಾವಿರ ವರ್ಷಗಳ ಹಿನ್ನೆಲೆ ಇರುವಂತೆ ಕಾಣುತ್ತದೆ. ಆದರೂ ಈ ಒಂದು ವಿದ್ಯೆಯು ಯಾವುದೇ ಒಂದು ವ್ಯಕ್ತಿಗೆ,ಸಮಾಜಕ್ಕೆ ಪಂಗಡಕ್ಕೆ, ಜಾತಿಗೆ, ಧರ್ಮಕ್ಕೆ ಅಥವಾ ರಾಷ್ಟ್ರಕ್ಕೆ ಸೀಮಿತವಾದುದಿಲ್ಲ. ಇದು ಇಡಿಯ ವಿಶ್ವಕ್ಕೆ ಪ್ರಾಚೀನ ಋಷಿ ಮುನಿಗಳು ನೀಡಿರುವ ಒಂದು ವರಪ್ರಸಾದ. ಹಾಗಾದರೆ ಈ ಮಹಾವಿದ್ಯೆಯು ಎಲ್ಲಿಂದ ಪ್ರಾರಂಭವಾಯ್ತು? ಅದರ ಕರ್ತೃಗಳಾರು? ಅದು ಹೇಗೆ ಬೆಳೆದು ಬಂತು? ಅದರಲ್ಲಿರುವ ಅಂತಹ ಶಕ್ತಿ ಏನು? ಇವೇ ಮೊದಲಾದ ಪ್ರಶ್ನೆಗಳು ಸಾಮಾನ್ಯವಾಗಿ ನಮ್ಮ ಮುಂದೆ ಬರುತ್ತದೆ.

ಪ್ರಾಚೀನ ಮಹರ್ಷಿಗಳು- ಯೋಗೀಶ್ವರಂ ಶಿವಂ ವಂದೇ- ವಂದೇ ಯೋಗೇಶ್ವರಂ ಹರಿಮ್! ಎಂದರು ಎಂದರೆ ಶ್ರೀಮನ್ನಾರಾಯಣನನ್ನು ಮತ್ತು ಶ್ರೀರುದ್ರನನ್ನು (ಶಂಕರನನ್ನು ) ಯೋಗಿಗಳೆಲ್ಲರ ಯೋಗೇಶ್ವರರು ಎಂಬುದಾಗಿಯೂ ಅಲ್ಲದೇ ಇವರೇ ಮೊತ್ತ ಮೊದಲನೆಯ ಯೋಗಾಚಾರ್ಯರೆಂಬುದಾಗಿಯೂ ಮಹರ್ಷಿಗಳೆಲ್ಲರ ಅಭಿಪ್ರಾಯ.ಮೂಲತಃ ಶಂಕರ - ನಾರಾಯಣರಲ್ಲಿ ಯಾವ ಭೇದವಿಲ್ಲದಿದ್ದರೂ ಅನೂಚಾನವಾಗಿ ಇವರೀರ್ವರ ಹೆಸರಿನಲ್ಲೂ ಒಂದೊಂದು ಯೋಗ ಸಂಪ್ರದಾಯವು ನಡೆದುಕೊಂಡು ಬಂದಿರುವುದು ರೂಢಿಯಲ್ಲಿದೆ.ಹೀಗಾಗಿ ಕೆಲವು ಉಪನಿಷತ್ತುಗಳಲ್ಲಿ ಶ್ರೀಮನ್ನಾರಾಯಣನೇ ಯೋಗದ ಮೂಲ ಆಚಾರ್ಯನೆಂದು ಪ್ರತಿಪಾದಿಸಿದ ಇನ್ನು ಕೆಲವು ಉಪನಿಷತ್ತುಗಳಲ್ಲಿ ರುದ್ರನನ್ನೇ ಯೋಗದ ಮೂಲ ಆಚಾರ್ಯನೆಂಬುದಾಗಿ ನಿರೂಪಿಸಲಾಗಿದೆ. ಆದರೂ ಉಪನಿಷತ್ತುಗಳಲ್ಲಿ ವಿಷ್ಣು (ನಾರಾಯಣ) ಮತ್ತು ಶಂಕರರಿಂದಲೇ ಹಿರಣ್ಯಗರ್ಭನೆನ್ನಿಸಿಕೊಂಡಿರುವ ಬ್ರಹ್ಮನಿಗೆ ಯೋಗಉಪದೇಶವಾಯಿತೆಂದೂ ಮತ್ತು ಆತನು ಅನೇಕ ಋಷಿಮಹರ್ಷಿಗಳಾದ ಯೋಗಾಚಾರ್ಯರುಗಳಿಂದ ಆ ಯೋಗವಿದ್ಯೆಯನ್ನು ಪ್ರಚುರಪಡಿಸಿದನೆಂದೂ ತಿಳಿಯುತ್ತದೆ.

ವೇದೋಪನಿಷತ್ತುಗಳ ಕಾಲದಲ್ಲಾಗಲೀ ಅಥವಾ ಪುರಾಣೇತಿಹಾಸ ಕಾಲದಲ್ಲಾಗಲೀ ಗುರು ಶಿಷ್ಯರಲ್ಲಿ ಒಂದು ಆತ್ಮೀಯತೆ ಸಂಬಂಧವಿತ್ತು. ಅಲ್ಲಿ ಕೊಟ್ಟು ತೆಗೆದುಕೊಳ್ಳುವ ವ್ಯಾಪಾರೀ ಮನೋಭಾವವಿರಲಿಲ್ಲ. ಲೋಕಕಲ್ಯಾಣಾಕಾಂಕ್ಷೆಯಿಂದಲೇ ಗುರುಗಳು ಶಿಷ್ಯರಿಗೆ ವಿದ್ಯಾದಾನವನ್ನು ಮಾಡುತ್ತಿದ್ದರು ಶಿಷ್ಯರಾದರೂ ಅದೇ ಭಾವನೆಯಿಂದಲೇ ಕಲಿತು ಸಾಧನೆ ಮಾಡುತ್ತಿದ್ದರು.ಆಗ ಯಾಕೆ - ಇತ್ತೀಚೆಗೆ ಕೆಲವು ದಶಕಗಳ ಹಿಂದಿನವರೆಗೂ ಯೋಗವು ಸಾಗಿಬಂದ ರೀತಿಯನ್ನು ನೋಡಿದರೆ ಈ ಗುರುಶಿಷ್ಯ ಬಾಂಧವ್ಯದಲ್ಲಿ ಒಂದು ಆದರ್ಶವಾದ ಪ್ರೇಮ ಸಂಬಂಧವಿತ್ತು. ಅಲ್ಲೆಲ್ಲೂ ಕೊಟ್ಟುಕೊಳ್ಳುವ ವ್ಯಾಪಾರೀ ಧರ್ಮವು ಇಣಿಕಿ ಹಾಕಿದಂತೆ ಕಾಣುವುದಿಲ್ಲ. ಆದುದರಿಂದಲೇ ನಶಿಸಿಯೇ ಹೋಗಬೇಕಾಗಿದ್ದ ಯೋಗ ವಿದ್ಯೆಯು ಮಾನ್ಯತೆಯನ್ನು ಹೊಂದಿದರೂ ಅದು ಬೇಸಿಗೆಯ ಕ್ಷೀಣ ನದಿಯಂತೆ ಹರಿಯುತ್ತಲೇ ಬಂದಿದೆ. ಈಮಧ್ಯಕಾಲದಲ್ಲೇ ಅದು ಸಮುದ್ರೋಲಂಘನ ಮಾಡಿ ತನ್ನ ಉಜ್ವಲ ಕೀರ್ತಿಯನ್ನು ವಿದೇಶಗಳಲ್ಲೂ ಹರಡಿತ್ತು ಎಂಬುದು ಇಲ್ಲಿ ನೆನಪಿಸಿಕೊಳ್ಳ ತಕ್ಕ ವಿಚಾರ. ಶ್ರೀವಿವೇಕಾನಂದರು, ಶ್ರೀರಾಮತೀರ್ಥರೇ ಮೊದಲಾದ ಸನ್ಯಾಸಿಗಳು ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯನ್ನೂ, ಯೋಗವಿದ್ಯೆಯನ್ನೂ ಪ್ರಚಾರಪಡಿಸುವುದರಲ್ಲಿ ಅತಿ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಇದೇ ಕಾಲದಲ್ಲಿ ತಮ್ಮ ತಮ್ಮ ಕ್ಷೇತ್ರದಲ್ಲಿ ಶ್ರಮಿಸಿದ್ದಾರೆ.ಇದಕ್ಕೆ ವ್ಯಾಪಕವಾದ ಪುನಶ್ಚೇತನವನ್ನಿತ್ತು ಯೋಗವಿದ್ಯೆಯನ್ನೂ ಕೀರ್ತಿಪತಾಕೆ ಯನ್ನು ವಿಶ್ವದಾದ್ಯಂತ ಹಾರಿಸಿದವರೆಂದರೆ ಶ್ರೀರಮಣ ಮಹರ್ಷಿಗಳು ಮತ್ತು ಶ್ರೀಅರವಿಂದರು. ಇವರು ಕ್ಷೀಣಿಸುತ್ತಿದ್ದ ಯೋಗವಿದ್ಯೆಯ ದೀಪಜ್ಯೋತಿಗೆ ತೈಲವನ್ನೆರೆದು ಅದು ಪ್ರಜ್ವಲಿಸಿ ಉರಿಯುವಂತೆ ಮಾಡಿದರು.



ಹೀಗಾಗಿ ವಿದೇಶದ ಆಸ್ತಿಕರನೇಕರು ಭಾರತದ ಕಡೆಗೆ ಆಶಾಭಾವನೆ ಯಿಂದ ನೋಡುವಂತಾಯ್ತು. ಅವರಲ್ಲ ನೇಕರಿಗೆ ಯೋಗವಿದ್ಯೆಯ ಸಂಬಂಧದಲ್ಲಿ ಅದರ ಸಾಧನೆಯ ವಿಚಾರದಲ್ಲಿ ವಿಶೇಷ ಆಸಕ್ತಿ ಯುಂಟಾಯಿತು. ಬಾಹ್ಯ ಸುಖ ಸಂಪತ್ತಿನಲ್ಲಿ ಭೋಗೈಶ್ವರ್ಯಗಳಲ್ಲಿ ಶಾಶ್ವತ ಸುಖಕಾಣದ ಅವರು ಭಾರತೀಯ ಸಂಸ್ಕೃತಿಯಲ್ಲಿ, ಯೋಗ ವಿದ್ಯೆಯಲ್ಲಿ ಆನಂದವನ್ನು ಕಂಡು ಇದಕ್ಕೆ ಮಾರು ಹೋದರು. ಈ ಕಾಲದಲ್ಲೇ ರಾಮಕೃಷ್ಣಮಿಶನ್‌ನವರೂ ಇನ್ನೂ ಕೆಲವು ಆಧ್ಯಾತ್ಮಿಕ ಮಹದ್ವ್ಯಕ್ತಿಗಳೂ ಅಲ್ಲಿ ಅಪಾರ ಕೆಲಸವನ್ನೂ ಮಾಡಿದ್ದುಂಟು.

ಆದರೆ ಇಡೀ ಕಾಳಿನ ಜೊತೆಯಲ್ಲಿ ಜೊಳ್ಳುತೂರಿ ಬಂದಂತೆ ಈ ಕಾಲದಲ್ಲೇ ಅನೇಕ ವ್ಯಾಪಾರೀ ಮನೋಭಾವದ ಯೋಗ ಶಿಕ್ಷಕರು ಕೇವಲ ಹಣಗಳಿಸುವ ದೃಷ್ಟಿಯಿಂದ ವಿದೇಶ ಸಂಚಾರ ಕೈಗೊಂಡು ಯೋಗಶಿಕ್ಷಣದ ನೆಪದಲ್ಲಿ ಧನಸಂಪಾದನೆಗೆ ನಿಂತಿ ರುವುದು ತೀರ ಶೋಚನೀಯವಾದ ವಿಚಾರ. ಅಂತೂ ಯಾವುದೋ ರೀತಿಯಲ್ಲಿ ಇಂದು ಯೋಗವಿದ್ಯೆಯ ಮಾತೃಸ್ಥಾನವಾದ ಭಾರತ ದಲ್ಲಿದ್ದು ನಶಿಸುತ್ತಿದ್ದರೂ ವಿದೇಶಿಗಳಲ್ಲದು ವ್ಯಾಪಕವಾಗಿ ಬೆಳೆಯುತ್ತಿದೆ ಎಂಬುದಂತೂ ತೀರಸತ್ಯ. ಇಂಥಲ್ಲಿ ನಮ್ಮಿಂದಲೇ ಕಲಿತ ಯೋಗ ವಿದ್ಯೆಗೆ ವಿಜ್ಞಾನದ ಲೇಪನವನ್ನಿತ್ತು ತಿರುಗಿ ನಮಗೇ ಮರಳಿಸುವ ಪ್ರಯತ್ನ ನಡೆದಿದೆ... ಅದರಲ್ಲಿಯೇ ಆಗಲೀ ಎಲ್ಲಿಯೇ ಆಗಲಿ ಈ ಹಿಂದಿನ ಗುರುಶಿಷ್ಯ ಬಾಂಧವ್ಯವಳಿದು ಅಲ್ಲಿ ಕೊಟ್ಟು ಕೊಳ್ಳುವ ಮಾರುಕಟ್ಟೆಯ ಧರ್ಮವು ಕಾಣಿಸಿಕೊಂಡಿರುವುದು ತೀರಶೋಚ ನೀಯವೆಂದು ಹೇಳದೆ ವಿಧಿಯಿಲ್ಲ. ಅದೊಂದು ಮುಖ-ಇದೊಂದು ಮುಖ. ಇದು ಪ್ರಾಚೀನಕಾಲದಿಂದ ಯೋಗವು ನಡೆದು ಬಂದ ದಾರಿ. ಇದೇ ಯೋಗದ ವಿರಾಟ್ ಸ್ವರೂಪ.

ವಾಸ್ತವಿಕವಾಗಿ ಯೋಗ ಮಾರ್ಗದಿಂದ ಐಹಿಕಾ ಭ್ಯುದಯ ಮತ್ತು ಆಮುಷ್ಮಿಕಶ್ರೇಯಸ್ಸು ಇವೆರಡನ್ನು ಧಾರಾಳ ವಾಗಿ ಸಾಧಿಸಬಹುದಾಗಿದೆ. ಅಭ್ಯಾಸ ಪ್ರಧಾನವಾದ ಯೋಗ ಮಾರ್ಗದಿಂದ ಅದ್ಭುತ ಮಹಿಮೆಯನ್ನೂ ಮೋಕ್ಷ ಸಾಮ್ರಾಜ್ಯವನ್ನೂ ಸಾಧಿಸಿದ ಅನೇಕ ಮಹಾನುಭಾವರು ಗಳು ಇದ್ದಾರೆ. ಯೋಗಪ್ರಸ್ಥಾನ ಪ್ರಾಚೀನವಾದುದೆಂಬ ಪ್ರತೀತಿಯೂ ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ರಾಮಾಯಣ ದಲ್ಲಿ ಲಕ್ಷ್ಮಣನೂ ಯೋಗಮಾರ್ಗದಿಂದಲೇ ಸ್ವಸ್ಥಾನವಾದ ವೈಕುಂಠವನ್ನು ವಿದುರ ಮೊದಲಾದವರು ಯೋಗಾ ರೂಢ ರಾಗಿಯೇ ಪರಂಧಾಮವನ್ನೈದಿದರೆಂದಿದೆ.

ಯೋಗಶಾಸ್ತ್ರವೆಂಬುದು ಒಂದು ದೇಶಕ್ಕಾಗಲೀ ಒಂದು ಜನಾಂಗಕ್ಕಾಗಲೀ ಅಥವಾ ಒಂದು ಧರ್ಮಕ್ಕಾಗಲಿ ಸಂಬಂಧಪಟ್ಟ ವಿಷಯವಲ್ಲ. ಇದು ಇಡೀ ಜಗತ್ತಿನ ಜನಕ್ಕೆ ಸಂಬಂಧಪಟ್ಟ ವಿಷಯವಾಗಿದ್ದು ಭರತ ಖಂಡದ ಪ್ರಮುಖ ವಿಜ್ಞಾನಗಳಲ್ಲೊಂದಾಗಿದೆ. ಭಾರತದ ವೈದ್ಯ ವಿಜ್ಞಾನವಾದ ಆಯುರ್ವೇದಶಾಸ್ತ್ರವೂ, ಯೋಗಶಾಸ್ತ್ರವೂ ಮೊತ್ತಮೊದಲಿಗೆ ಈ ದೇಶದಲ್ಲೇ ಉತ್ಪತ್ತಿಯಾದುವು ಎಂತಲೂ ಈ ಶಾಸ್ತ್ರ ಗಳ ಪೂರ್ವ ಇತಿಹಾಸವೂ ಇನ್ನಾವ ದೇಶಗಳಲ್ಲಿ ದೊರೆ ಯಲಾರವು ಎಂಬುದು ತಿಳಿದು ಬಂದಿದೆ. ಆದರೆ ಸಹಸ್ರಾರು ವರುಷಗಳ ಹಿಂದೆಯೇ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯೋಗಾಭ್ಯಾಸವು ಪ್ರಚಾರದಲ್ಲಿದ್ದ ಉದಾಹರಣೆಗಳು ದೊರ ಕಿವೆ. ಪ್ರಾಯಶಃ ಕೆಲವು ಸಾವಿರ ವರ್ಷಗಳ ಹಿಂದೆಯೇ ಈ ವಿಜ್ಞಾನವು ಬೇರೆ ಬೇರೆ ರಾಷ್ಟ್ರಗಳಿಗೆ ಹರಡಿರಬಹುದು.

ಪೂರ್ವಕಾಲದಲ್ಲಿ ಸಾಮಾನ್ಯವಾಗಿ ಸನ್ಯಾಸವನ್ನು ಸ್ವೀಕರಿಸಿದ ವ್ಯಕ್ತಿಗಳೆ ಯೋಗಾಭ್ಯಾಸ ಮಾಡಿಕೊಂಡಿದ್ದು ಪ್ರಾಪಂಚಿಕ ವ್ಯವಹಾರಗಳಿಂದ ದೂರವಾಗಿ ಉಳಿಯು ತ್ತಿದ್ದರು. ಇದನ್ನೆಲ್ಲಾ ನೋಡಿದ ಜನಸಾಮಾನ್ಯರು ಯೋಗಾ ಭ್ಯಾಸ ಮಾಡುವುದರಲ್ಲಾಗಲೀ ಈ ಬಗ್ಗೆ ವಿಷಯಗಳನ್ನು ತಿಳಿದುಕೊಳ್ಳುವುದಲ್ಲಾಗಲೀ ಆಸಕ್ತಿ ತೋರಿಸುತ್ತಿರಲಿಲ್ಲ.

ಸುಮಾರು ಐವತ್ತು ವರ್ಷಗಳ ಹಿಂದೆ ಯೋಗ ಶಾಸ್ತ್ರದ ಬಗ್ಗೆ ಮಾತನಾಡುವ ಹಾಗೂ ಅಭ್ಯಾಸ ಮಾಡುವ ಜನ ಅತೀ ವಿರಳವಾಗಿದ್ದರು, ಯೋಗವೆಂಬ ಶಬ್ದ ಕೇಳುತ್ತಲೇ ಜನಸಾಮಾನ್ಯರು ಇದು ಸನ್ಯಾಸಕ್ಕೆ ಸಂಬಂಧಪಟ್ಟ ವಿಷಯವೆಂದು ತಿಳಿದು ದೂರ ಸರಿಯುತ್ತಿದ್ದರು. ಈ ಶಾಸ್ತ್ರ ವನ್ನು ತಿಳಿದು ಅಭ್ಯಾಸದಲ್ಲಿಟ್ಟುಕೊಂಡಿದ್ದ ಅನೇಕರು ಇತರ ರಿಗೆ ಈ ಶಾಸ್ತ್ರದ ಬಗ್ಗೆ ಮಾಹಿತಿ ಕೊಡದೆ ಇದೊಂದು ಗುಪ್ತ

ವಿಜ್ಞಾನವೆಂದುಕೊಂಡು ಈ ಬಗ್ಗೆ ವಿಚಾರಿಸಿದ ಜನರ ಮನಸ್ಸಿನಲ್ಲಿ ಭಯವುಂಟಾಗುವ ರೀತಿಯಲ್ಲಿ ಬೋಧಿಸುತ್ತಿದ್ದರು. ಈ ಅನುಭವವನ್ನು ಪಡೆದವರಲ್ಲಿ ನಾನು ಒಬ್ಬ ಇದರಿಂದಾಗಿ ಸಾಮಾನ್ಯ ಜನರು ಈ ವಿಜ್ಞಾನದಿಂದ ದೂರವಾಗಿರುತ್ತಿದ್ದರು.

ಆಧುನಿಕ ಕಾಲದಲ್ಲಿ ಯೋಗವು ವಿಶ್ವದಲ್ಲೆಲ್ಲಾ ಪ್ರಚಾರವಾಗಿರುವುದನ್ನೂ,ದಿನೇ ದಿನೇ ಈ ವಿಜ್ಞಾನವು ಪ್ರಖ್ಯಾತಿಗೆ ಬರುತ್ತಿರುವುದನ್ನೂ ನೋಡುತ್ತಿದ್ದೇನೆ. ಸೂಕ್ಷ್ಮವಾಗಿ ನೋಡುತ್ತಾ ಹೋದರೆ ಯೋಗದ ಮಾತೃಭೂಮಿಯಾದ ಭಾರತದಲ್ಲಿ ಇರುವುದಕ್ಕಿಂತ ಹೆಚ್ಚು ಯೋಗ ಪ್ರಚಾರ ಅಭ್ಯಾಸಗಳನ್ನು ಇತರ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೋಡಬಹುದು. ಅಲ್ಲದೆ ಅನೇಕ ಕಡೆಗಳಲ್ಲಿ ಬೃಹದ್ ಯೋಗ ಸಮ್ಮೇಳನಗಳಾಗುತ್ತಿರುವುದೂ ಕಂಡು ಬರುತ್ತಿದೆ.

ಆಫ್ರಿಕಾ, ಸ್ವಿಜರ್‌ಲ್ಯಾಂಡ್, ಜರ್ಮನಿ, ಇಟಲಿ, ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಅನೇಕ ಯೋಗಕೇಂದ್ರಗಳನ್ನೂ, ಕೆಲವು ಆಸ್ಪತ್ರೆಗಳಲ್ಲಿ ನಡೆಸಲ್ಪಡುತ್ತಿರುವ ಯೋಗ ಚಿಕಿತ್ಸೆಗಳನ್ನೂ,ನೂರಾರು ಯೋಗ ಆಧ್ಯಾಪಕರುಗಳನ್ನೂ ಮತ್ತು ಸಾವಿರಾರು ಯೋಗ ವಿದ್ಯಾರ್ಥಿಗಳನ್ನು ಕಂಡ ನನಗೆ ಆತ್ಯಾಶ್ಚರ್ಯವಾಗಿದೆ. ಇದೇ ರೀತಿಯಲ್ಲಿ ಮುಂದೋತ್ತಿದ್ದ ಅನೇಕ ಪಾಶ್ಚಾತ್ಯ ದೇಶಗಳಲ್ಲೂ ಸಾಕಷ್ಟು ಯೋಗಕೇಂದ್ರಗಳಿವೆ ಎಂಬುದನ್ನು ತಿಳಿದಿದ್ದೇನೆ.

ಭಾರತದಲ್ಲಿ ಮಾನವನು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕ್ರಮಬದ್ಧವಾಗಿ ಹೊಂದಿರಬೇಕಾದ ಅಗತ್ಯಗಳ ಬಗ್ಗೆ ಅನೇಕ ಸಾವಿರ ವರ್ಷಗಳ ಹಿಂದೆಯೇ ಆಯುರ್ವೇದ ಮತ್ತು ಯೋಗಶಾಸ್ತ್ರಗಳು ಬೋಧಿಸಿದ ವಿಚಾರಗಳು ಇಂದಿಗೂ ಅನ್ವಯಿಸುತ್ತಿವೆ. ಮನುಷ್ಯನು ನಿರೋಗಿಯಾಗಿ ಬಾಳಬೇಕಾದರೆ ಕೇವಲ ಐಶ್ವರ್ಯ ಉನ್ನತ ಅಧಿಕಾರ ಎಲ್ಲಾ ತರದ ಸೌಕರ್ಯಗಳಿಂದ ಕೂಡಿರುವುದು ಇವು ಯಾವುದೂ ಸಾಲದೆಂಬುದು ಖಚಿತ. ದೇಹದ ಸ್ಥಿತಿಗತಿಗಳು ಸಮವಾಗಿದ್ದು ಅಗ್ನಿಯು ಕ್ರಮವಾಗಿ ತಿಂದ ಆಹಾರಗಳನ್ನು ಜೀರ್ಣಿಸಿ ಮಲಮೂತ್ರಗಳ ವಿಸರ್ಜನೆಗಳು ಕ್ರಮವಾಗಿ ನಡೆಯುತ್ತಿದ್ದು, ದೇಹದ ಧಾತುಗಳು ಸುಸೂತ್ರವಾಗಿದ್ದು ಮನಸ್ಸು ಪ್ರಫುಲ್ಲವಾಗಿದ್ದರೆ ಮಾತ್ರ ಮನುಷ್ಯನು ಸುಖಿಯೂ ಆರೋಗ್ಯವಂತನೂ ಎಂತ ಎನ್ನಿಸಿಕೊಳ್ಳುವನು.

ಈ ರೀತಿಯ ಆರೋಗ್ಯ ಮತ್ತು ಮನಃ ಸಂತೋಷವನ್ನುಂಟು ಮಾಡಿಕೊಳ್ಳಬೇಕಾದಲ್ಲಿ ಆಯುರ್ವೇದಶಾಸ್ತ್ರದಲ್ಲಿ ವಿವರಿಸಿದ "ಸ್ವಸ್ಥವೃತ್ತ" ತತ್ತ್ವವನ್ನೂ ಯೋಗಶಾಸ್ತ್ರದಲ್ಲಿ ವಿವರಿಸಿದ ತತ್ತ್ವಗಳನ್ನೂ ಪರಿಪಾಲಿಸಿದಲ್ಲಿ ಮಾತ್ರ ಸಾಧ್ಯ.

ಇಂದಿನ ಕಾಲದಲ್ಲಿ ಪ್ರಪಂಚದಲ್ಲೆಲ್ಲಾ ಬಹುಭಾಗ ಜನರು ಕೃತಕ ಜೀವನಗಳನ್ನೇ ನಡೆಸುತ್ತಿರುವುದು ಕಂಡು ಬರುತ್ತದೆ. ಭಾರತದಲ್ಲಂತೂ ಕೋಟ್ಯಾಂತರ ಜನಸಮೂಹ ಆಹಾರ ಬಟ್ಟೆ ಮತ್ತು ಇನ್ನಿತರ ಸೌಕರ್ಯಗಳಿಲ್ಲದೆ ನರಳುತ್ತಿದ್ದರೂ ಸಾವಿರಾರು ಜನರು ತುಂಬಿದ ಐಶ್ವರ್ಯದಿಂದ ಕೂಡಿದ್ದು ಜಗತ್ತನ್ನೇ ಮರೆತಿರುವುದೂ ಕಂಡುಬರುತ್ತಿದೆ. ಈ ಮೇಲೆ ವಿವರಿಸಿದ ಕಾರಣಗಳಿಂದಾಗಿ ಬಹುಭಾಗ ಜನರಲ್ಲಿ ಶಿಸ್ತಿನ ಜೀವನದ ಅಭ್ಯಾಸವೇ ಕುಂಠಿತವಾಗಿದೆ. ಇದರಿಂದಾಗಿ ಜನರು ಅನಗತ್ಯವಾದ ಅಭ್ಯಾಸಗಳಿಗೆ ಬಲಿಬಿದ್ದು ರೋಗ ಪೀಡಿತರಾಗಿ ನರಳುತ್ತಿರುವುದನ್ನೂ ಎಲ್ಲೆಲ್ಲೂ ನೋಡಬಹುದಾಗಿದೆ.

ವಿಜ್ಞಾನಯುಗವೆಂತ ಕರೆಯಲ್ಪಡುತ್ತಿರುವ ಈ ಆಧುನಿಕ ಕಾಲದಲ್ಲಿ ಮಾನವನು ದುರಭ್ಯಾಸಗಳಿಂದ ದೂರಸರಿದು ಸುಖಿಯಾಗಿ ಬಾಳಬೇಕಾದರೆ 'ಯೋಗಾಭ್ಯಾಸ' ಒಂದೇ ದಾರಿ ಎಂದರೆ ಅತಿಶಯೋಕ್ತಿಯಾಗಲಾರದು. ಯೋಗದಲ್ಲಿ ಹೇಳಿರುವ ಅಷ್ಟ ಅಂಗಗಳ ಪೈಕಿ ಪ್ರಪ್ರಥಮದ ನಾಲ್ಕು ಭಾಗಗಳನ್ನು ಶಿಸ್ತಿನಿಂದ ಅಭ್ಯಾಸ ಮಾಡುತ್ತಾ ಬಂದಲ್ಲಿ ಸುಖಿಯಾಗಿ ಬಾಳ ಬಹುದೆಂಬುದು ನಿಃಸಂಶಯ.

ವಿವೇಕಾನಂದರು ಹೇಳಿದ್ದಾರೆ. **"Yoga is not competition but -co-operation"** ಇಲ್ಲಿ ಸಮನ್ವಯ ತರುವುದು ಹೇಗೆ? ಅದಕ್ಕೆ ಒಂದು ತಂಡವನ್ನು ರಚನೆ ಮಾಡುವುದು, ಅದರಲ್ಲಿ ಎಲ್ಲ ವಯೋಮಾನದವರು ಇರಬೇಕು. (ಸಣ್ಣವರು, ದೊಡ್ಡವರು, ಹೆಣ್ಣು ಗಂಡು). ಹೀಗೆ ತಂಡಗಳನ್ನು ಮಾಡಿ ಯೋಗದ ಪ್ರದರ್ಶನಮಾಡಬೇಕು. ನಂತರ ಸ್ಪರ್ಧೆಯ ಮೂಲಕ ತಾಲ್ಲೂಕು, ಜಿಲ್ಲೆ ಹೀಗೆ ಬೇರೆ ಬೇರೆ ಹಂತಗಳವರೆಗೂ ಹೋಗಬೇಕು. ಹೀಗೆ ವಿಶ್ವ ಯೋಗದಿನವೂ ಹಳ್ಳಿ ಹಳ್ಳಿಗಳಿಗೂ ಹೋಗಿ ತಲುಪಬೇಕು. ಇದರಲ್ಲಿ ತಂಡದ ಕಾರ್ಯಕ್ಕೂ ಅಂಕಗಳಿರುತ್ತವೆ ಮತ್ತು ಈ ಒಂದು ತಂಡದಲ್ಲಿ ಎಲ್ಲ ವಯೋಮಾನದವರು ಇರುವ ಕಾರಣದಿಂದ ಅನ್ಯೋನ್ಯತೆ ಮತ್ತು ಒಗ್ಗಟ್ಟು ಎರಡು ಇರುತ್ತದೆ. ಈ ವಿಶ್ವಯೋಗ ದಿನಾಚರಣೆಗೆ ಪ್ರಧಾನಿ ಮೋದಿಯವರು ತುಂಬಾ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಈ ಒಂದು ದಿನ ವಿಶ್ವದಲ್ಲೇ ಯೋಗವನ್ನು ಹರಡಲು ಇದೊಂದು ಸದವಕಾಶ....



# ಗಂಗಾ ಹರಹರ ಗಂಗಾ

- ಕೆ.ವಿ. ಪದ್ಮಾವತಿ
99722 22791

ಜ್ಯೇಷ್ಠ ಶುದ್ಧ ದಶಮಿಯಂದು ಗಂಗಾದೇವಿಯು ಶಿವನ ಜಡೆಯಿಂದ ಭಗೀರಥನಿಗಾಗಿ ಧರೆಗಿಳಿದು ಹರಿದಿರುವುದರಿಂದ ಪ್ರತಿ ವರ್ಷ ಗಂಗಾದಶಹರಾದ ಕೊನೆಯ ದಿನವಾದ ಜ್ಯೇಷ್ಠ ಶುದ್ಧ ದಶಮಿ ಈ ಬಾರಿ ಜೂನ್ ರಂದು “ಭಾಗೀರಥಿ” (ಗಂಗಾ) ಜಯಂತಿಯನ್ನು ಬಹು ವಿಜೃಂಭಣೆಯಿಂದ ಎಲ್ಲೆಡೆ ಆಚರಿಸಲಾಗುತ್ತದೆ. ನೀರಿನ ಸದ್ಬಳಕೆ, ನೀರಿನ ಪಾವಿತ್ರ್ಯದ ಅರಿಯುವಿಕೆ ಮತ್ತು ನೀರಿನ ಪೋಲು ಮಾಡುವಿಕೆಗೆ ಅಂತ್ಯ ಹಾಡುವಿಕೆ ದಿಸೆಯಲ್ಲಿ ಪ್ರತಿಯೊಬ್ಬರಲ್ಲೂ ಅರಿವು ಮೂಡಿದರೆ ಅದುವೇ ಭಾಗೀರಥಿ ಜಯಂತಿ ಆಚರಣೆಗೊಂದು ಅರ್ಥಪೂರ್ಣತೆ.

ಈ ಲೋಕದಲ್ಲಿ ಜರುಗುವ ವಿವಿಧ ಪೂಜೆಗಳು ವಿದ್ಯುಕ್ತವಾಗಿ ನೆರವೇರಲು ಪವಿತ್ರವಾದ ಜಲವೇ ಮೊದಲು. ದೇವಾನುದೇವತೆಗಳ ಪೂಜೆ,ಈಶ್ವರನ ಅಭಿಷೇಕ, ಲಿಂಗಾರ್ಚನೆ, ಗುರು,ಲಿಂಗ ಜಂಗಮರ ಪಾದ ಪೂಜೆ, ನೈವೇದ್ಯ ಸಮರ್ಪಣೆ ಮುಂತಾದ ವಿಧಿಗಳು ನೀರಿಲ್ಲದೇ ನೆರವೇರಲಾರವು. ನೀರಿನಿಂದಲೇ ಮೊದಲು ಶುಚಿತ್ವಗೊಳಿಸಿ ಪೂಜಿಸ ಬೇಕಾದ ಶ್ರುತಿಮತ ಸಮ್ಮೃತವಾದ ಆಚರಣೆ ಅಸ್ತಿತ್ವದಲ್ಲಿದೆ.

ಭಾರತೀಯರ ಮನೆ - ಮನೆಗಳಲ್ಲಿರುವ “ಜಗುಲಿ”ಯ ಮೇಲೆ ತುಂಬಿದ ತಂಬಿಗೆಯೊಂದನಿಟ್ಟು ಅದರ ಮೇಲೆ ತೆಂಗನ್ನಿಟ್ಟು ಪ್ರತಿನಿತ್ಯ ಬೆಳಗು ಮುಂಜಾನೆ ಪೂಜಿಸುವ ಸತ್ಸಾಸಂಪ್ರದಾಯವು ಇಂದಿಗೂ ಪ್ರಚಲಿತವಿದೆ. ಪ್ರಾಚೀನ ಕಾಲದ ಋಷಿಮುನಿಗಳ ಕಮಂಡಲಗಳು ಪವಿತ್ರಜಲದಿಂದ ತುಂಬಿರುತ್ತಿದ್ದವು. ಮದುವೆ - ಮುಂಜಿ ಮುಂತಾದ ಸಮಾರಂಭಗಳಲ್ಲಿ ತುಂಬಿದ ಕಲಶ ಹೊತ್ತು ಮನೆಗೆ ತರುವುದು, ಪೂಜಿಸುವುದು ಸರ್ವೇ ಸಾಮಾನ್ಯ, ಪ್ರತಿಯೊಂದು ಗ್ರಾಮದಲ್ಲಿ ಜರುಗುವ ಗ್ರಾಮ ದೇವತೆಗಳ ಉತ್ಸವ, ಜಾತ್ರಾ ಮಹೋತ್ಸವ, ದೇವರ ಮೂರ್ತಿ ಪ್ರತಿಷ್ಠಾಪನೆ, ಮಹಾತ್ಮರ ಪುಣ್ಯಾರಾಧನೆ, ಗದ್ದುಗೆಯ ಅಭಿಷೇಕ ಮುಂತಾದ ಸಂದರ್ಭಗಳಲ್ಲಿ ಕುಂಭಮೇಳದೊಂದಿಗೆ ಸುಮಂಗಲೆಯರು ಮೆರವಣಿಗೆಯ ಮೂಲಕ ಹೊತ್ತು ತಂದ ಕಲಶಗಳಿಂದ ಅಭಿಷೇಕ ಮಾಡಿ ಮಹಾ ಪೂಜೆ ಸಲ್ಲಿಸುವುದು ನಮ್ಮ ಧಾರ್ಮಿಕ ಪರಂಪರೆಯಾಗಿದೆ.

ಕಲಶ ಸ್ಥಾಪನೆ ಮಾಡಿ ಮದುವೆಯ ಮುಹೂರ್ತದೊಂದಿಗೆ ಜಗುಲಿ ಮುಂದಿನ ಅಕ್ಷತೆಯಿಂದ ಸ್ವ-ಗೃಹದಲ್ಲಿ ಅಕ್ಷತಾರೋಪಣವನ್ನು ಮಾಡುವುದು. ಪ್ರತಿವರ್ಷ ನಾಗ ಪಂಚಮಿಯಲ್ಲಿ ಮುತ್ತೈದೆಯರು ನದಿ ಅಥವಾ ಸಮೀಪವಿರುವ ಕೆರೆಗೆ ಪೂಜಿಸುವುದು,ಬಾಣಂತಿಯರು ಗಂಡನ ಮನೆಗೆ ಹೋಗುವ ಮುನ್ನ ಹೊಳೆ ಪೂಜಿಸುವುದು, ನದಿ ದಾಟುವಾಗ ನಾಣ್ಯ ಎಸೆದು ಕೈ ಮುಗಿಯುವುದು, ಹಬ್ಬ-ಹರಿದಿನಗಳಲ್ಲಿ ಮನೆಯಲ್ಲಿ ಮಾಡಿದ ಪಂಚ ಪಕ್ವಾನ್ನಗಳ ಎಡೆಯೊಂದಿಗೆ ಹೊಳಿ ಗಂಗವ್ವನ ಪೂಜಿಸಿ ಕಣಕದ ಹಣತೆಗಳಲ್ಲಿ ದೀಪವನ್ನು ಹಚ್ಚಿ ಬಾಳೆ ಎಲೆ ಅಥವಾ ತೆಪ್ಪದಲ್ಲಿರಿಸಿ ನದಿಯಲ್ಲಿ ತೇಲಿ ಬಿಡುವುದು. ಮಳೆಗಾಲದಲ್ಲಿ ಸುರಿದ ಮಳೆಯಿಂದ ನದಿ, ಕೆರೆ, ಅಣೆ ಕಟ್ಟುಗಳ ಜಲಾಶಯಗಳು ತುಂಬಿ ಭರ್ತಿಯಾಗಲೂ ಹಿಂದಿನ ಕಾಲದ ರಾಜ-ಮಹಾರಾಜರೂ ಸಹಿತ ವಿದ್ಯುಕ್ತವಾಗಿ ಪೂಜೆ ಸಲ್ಲಿಸಿ ಬಾಗೀನು ಸಮರ್ಪಿಸುತ್ತಲಿದ್ದರು.

ನಮ್ಮ ನಾಡಿನ ದೊರೆ ಮತ್ತು ಸಚಿವರಾದಿಯಾಗಿ ಪ್ರಜಾಕೋಟಿಗೆ ಸಕಲ ಸಮೃದ್ಧಿ ಸುಖ ಶಾಂತಿಯನ್ನು ಕೋರಿ ಬಾಗೀನು ಸಮರ್ಪಿಸುವ ಸತ್ಸಾಸಂಪ್ರದಾಯವು ಇಂದಿಗೂ ಪ್ರಚಲಿತವಿದೆ. ಗಂಗಾ ಸ್ನಾನ ಮಾಡುವುದರಿಂದ ಹತ್ತು ವಿಧವಾದ ಪಾತಕಗಳು ಪರಿಹಾರವಾಗುವುವು. ಆದ್ದರಿಂದ “ಗಂಗಾದೇವಿಗೆ ‘ದಶಹರಾ’ಎಂಬ ಹೆಸರಿದೆ. ಯಾರೋ ಒಬ್ಬರು ಯಾವುದೋ ಸ್ಥಳದಲ್ಲಿ ಯಾವುದೇ ನೀರಿನಲ್ಲಿ ಸ್ನಾನ ಮಾಡುತ್ತಿರುವಾಗ “ಗಂಗಾ ಗಂಗಾ” “ಹರಹರ ಗಂಗಾ” ಎಂದು ನುಡಿದವನು ಸರ್ವಪಾಪಗಳಿಂದ ಮುಕ್ತನಾಗಿ ಸದ್ಗತಿ ಹೊಂದುವನು ಎಂಬ ಪ್ರತೀತಿ ಇದೆ.

## ಪಾಪನಿವಾರಿಣಿ ದೇವಗಂಗೆ

ಪ್ರಪಂಚದ ನಾಗರೀಕತೆಗಳೆಲ್ಲ ನದಿತೀರದಲ್ಲೇ ಬೆಳೆದಂಥವು. ಹೀಗಾಗಿ ನಾಗರೀಕರ ಜನಜೀವನದಲ್ಲಿ ನದಿಗಳಿಗೆ ಪ್ರಮುಖ ಸ್ಥಾನವಿದೆ.ಭಾರತೀಯ ಪರಂಪರೆಯಲ್ಲಂತೂ ನದಿಗಳನ್ನೂ ದೇವರೆಂದೇ ಪೂಜಿಸಲಾಗುತ್ತದೆ.ಭಾರತದ ನದಿಗಳಲ್ಲೆಲ್ಲ ಗಂಗಾನದಿಗೆ ಪ್ರಮುಖವೂ ವಿಶೇಷವೂ ಆದ ಸ್ಥಾನವಿದೆ. ಹಿಮಾಲಯದ ನಾಲ್ಕು ಧಾಮಗಳಲ್ಲಿ ಒಂದಾದ ಗಂಗೋತ್ರಿಯೇ ಈ ನದಿಯ ಉಗಮಸ್ಥಾನ.

ಭಾರತದ ಪುರಾಣ ಮತ್ತು ಮಹಾಕಾವ್ಯಗಳಲ್ಲಿ ಗಂಗಾನದಿಯು ‘ದೇವನದಿ’ಎಂದೇ ಬಣ್ಣಿಸಲ್ಪಟ್ಟಿದೆ.ಹಿಂದೂ ಧರ್ಮಿಯರು ಗಂಗಾನದಿಯನ್ನು ಮಾತೃದೇವತೆಯ ರೂಪದಲ್ಲಿ ಪೂಜಿಸುತ್ತಾರೆ. ಗಂಗಾಮಾತೆ ಶಿವನ ಪತ್ನಿಯೂ ಹೌದು. ಶಿವ


ಆಕೆಗೆ ತನ್ನ ಜಟೆಯಲ್ಲೇ ಸ್ಥಾನ ನೀಡಿದ್ದಾನೆ. ಪ್ರತಿದಿನ ಸ್ನಾನ ಮಾಡುವ ಸಂದರ್ಭದಲ್ಲಿ 'ಹೇ ಗಂಗಾ,ಯಮುನಾ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು,ಕಾವೇರಿ ನದಿಗಳೇ, ನೀವೆಲ್ಲ ನನ್ನ ಸ್ನಾನದ ನೀರಿನಲ್ಲಿ ಬಂದು ಸೇರುವವರಾಗಿ (ಗಂಗಾನದಿ ಚ ಯಮುನೇ ಚೈವ ಗೋದಾವರಿ ಸರಸ್ವತಿ ನರ್ಮದೆ ಸಿಂಧುಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು) ಎಂದು ಪ್ರಾರ್ಥಿಸಿಕೊಳ್ಳಲಾಗುತ್ತದೆ. ಈ ಪ್ರಾರ್ಥನೆಯ ಹಿಂದೆ ತೀರ್ಥಕ್ಷೇತ್ರ, ತೀರ್ಥಸ್ನಾನಗಳಿಂದ ಲಭಿಸುವ ಪುಣ್ಯದ ಪರಿಕಲ್ಪನೆಯ ಹಿನ್ನೆಲೆಯೂ ಇದ್ದಿತು.

### ದೇವಗಂಗೆ ಭೂಮಿಗೆ ಬಂದ್ದದ್ದು ಹೇಗೆ?

ಇಂಥ ದೇವಗಂಗೆಯನ್ನು ಭೂಮಿಗೆ ತಂದವನು ಭಗೀರಥ ('ಭಗೀರಥ ಪ್ರಯತ್ನ' ಎಂದೇ ಕರೆಯಲ್ಪಟ್ಟ ಇವನ ಅಸೀಮ ಸಾಹಸವು ಸಾಹಸಗಳಿಗೊಂದು ಅನ್ವರ್ಥಕವೂ ಆಯಿತು. ಇವನಿಂದಲೇ ಗಂಗೆಯು 'ಭಾಗೀರಥಿ' ಎಂಬ ಅಭಿದಾನಕ್ಕೂ ಪಾತ್ರಳಾದಳು). ಇಕ್ಷ್ವಾಕುವಂಶದ ಸಗರನೆಂಬ ಚಕ್ರವರ್ತಿಯು ಅಶ್ವಮೇಧಯಾಗಕ್ಕಾಗಿ ಕುದುರೆಯನ್ನು ಬಿಟ್ಟಿದ್ದ. ಆ ಯಾಗ ಮುಗಿದರೆ ತನ್ನ ಪದವಿ ಹೋಗುವುದೆಂಬ ಭಯದಿಂದ ದೇವೇಂದ್ರ ಯಾಗದ ಕುದುರೆಯನ್ನು ಕದ್ದು ಕಪಿಲಮುನಿಯ ಆಶ್ರಮದಲ್ಲಿ ಕಟ್ಟಿದ್ದ. ತಮ್ಮ ಕುದುರೆಯನ್ನು ಹುಡುಕುತ್ತ ಸಗರನ ಅರವತ್ತು ಸಾವಿರ ಪುತ್ರರು ಅಲ್ಲಿಗೆ ಬಂದರು. ಕಪಿಲಮುನಿಯೇ ಕುದುರೆಯನ್ನು ಕದ್ದವನೆಂದು ಭಾವಿಸಿ ಆತನಿಗೆ ತೊಂದರೆ ಉಂಟು ಮಾಡಿದರು. ಇದರಿಂದ ಕಪಿಲಮುನಿ ಕೋಪಗೊಂಡು ತನ್ನ ತಪಶ್ಶಕ್ತಿಯಿಂದ ಎಲ್ಲರನ್ನೂ ಸುಟ್ಟು ಬೂದಿಯಾಗಿಸಿ ಬಿಟ್ಟನು. ಇದರಿಂದಾಗಿ ಮುಕ್ತಿ ಹೊಂದದ ಅವರ ಆತ್ಮಗಳು ಅತಂತ್ರವಾಗಿ ಅಲೆಯತೊಡಗಿದವು.

ಸಗರನ ಮೊಮ್ಮಗ ಅಂಶುಮಾನನು ತಂದೆ ಮತ್ತು ಚಿಕ್ಕಪ್ಪಂದಿರನ್ನು ಹುಡುಕುತ್ತ ಕಪಿಲಮುನಿಯ ಆಶ್ರಮದ ಬಳಿ ಬಂದ. ಸ್ವರ್ಗದಲ್ಲಿರುವ ಗಂಗೆಯ ನೀರಿನಿಂದ ಪ್ರೋಕ್ಷಿಸುವುದೊಂದೇ ಅವರ ಆತ್ಮಗಳಿಗೆ ಮುಕ್ತಿ ದೊರೆಯುವ ಮಾರ್ಗ ಎಂದು ಕಪಿಲಮುನಿಯಿಂದ ತಿಳಿಯಿತು. ಈ ಕಠಿಣ ಸಾಧನೆಯು ಅವನಿಂದ ಸಾಧ್ಯವಾಗದಿದ್ದರೂ ಅವನ ವಂಶಸ್ಥ ಭಗೀರಥ ಕಠೋರ ತಪಸ್ಸನ್ನು ಮಾಡಿ ಗಂಗೆಯ ಮನವೊಲಿಸಿದ. ಆದರೆ ಗಂಗೆಯು ಸ್ವರ್ಗದಿಂದ ಒಮ್ಮೆಲ್ಲೇ ಭೂಮಿಗೆ ಧುಮುಕಿದರೆ ಭೂಮಿಯು ಕೊಚ್ಚಿ ಹೋಗುತ್ತಿತ್ತು. ಹೀಗಾಗಿ ಭಗೀರಥ ಶಿವನ ಮೊರೆಹೋದ. ಶಿವನು ರಭಸದಿಂದ ಧುಮುಕುವ ತೀವ್ರತೆಯನ್ನು ತನ್ನ ಜಟೆಯ ಮೂಲಕ ತಡೆದು ನಿಧಾನವಾಗಿ ಹರಿಯುವಂತೆ ಮಾಡಿದ. ಆ ರೀತಿಯಾಗಿ ಧರೆಗಿಳಿದ ಗಂಗೆ ಭಗೀರಥನನ್ನು ಹಿಂಬಾಲಿಸುತ್ತ ಬೂದಿಯಾಗಿದ್ದ ಸಗರನ ಅರವತ್ತು ಸಾವಿರ ಪುತ್ರರ ಮೇಲೆ ಹರಿದು ಶಾಪ ವಿಮೋಚನೆ ಮಾಡಿದಳು.

ಜ್ಯೇಷ್ಠಮಾಸದ ಶುಕ್ಲಪಕ್ಷದ ದಶಮಿಯನ್ನು 'ಭಾಗೀ ರಥಿ ಜಯಂತಿ' ಎಂದು ಆಚರಿಸಲಾಗುತ್ತದೆ. ಭಗೀರಥನ ತಪ ಸ್ಸಿಗೆ ಮೆಚ್ಚಿ ಗಂಗಾನದಿಯು ಸ್ವರ್ಗದಿಂದ ಭೂಮಿಗೆ ಇಳಿದ ದಿನವಿದು. ಇದಕ್ಕೆ 'ದಶಹರ' (ಹತ್ತು ರೀತಿಯ ಪಾಪಗಳ



ವಿನಾಶಿನಿ) ಎಂದೂ ಕರೆಯಲಾಗುತ್ತದೆ. ಹಿಂದಿನ ಹತ್ತು ಜನ್ಮ ಗಳಲ್ಲಿ ಸಂಗ್ರಹವಾದ ಮಹಾಪಾಪಗಳೂ ಗಂಗಾಸ್ನಾನ ಮಾತ್ರದಿಂದಲೇ ನಾಶವಾಗುವುದರಿಂದ ಕೂಡ ಇದನ್ನು 'ದಶಹರಾ' ಎಂದು ಕರೆಯಲಾಗಿದೆ. ಗಂಗಾನದಿಯು ಭಗೀರಥಿ ಜಯಂತಿಯ ದಿನ ಮಂಗಳವಾರ, ಹಸ್ತಾನಕ್ಷತ್ರ ವೃತೀಪಾತ ಯೋಗ ಇವುಗಳೆಲ್ಲ ಸೇರಿ ಮಹಾಯೋಗ ಸಂಭವಿಸುತ್ತದೆ. ಈ ದಿನ ದಶಾಶ್ವಮೇದ ಘಾಟ್‌ನಲ್ಲಿ ಮಾಡಿದ ಸ್ನಾನವು ಶರೀರ-ಮಾತು-ಮನಸ್ಸುಗಳಿಂದ ಉಂಟಾದ ಹತ್ತು ವಿಧದ ಪಾಪಗಳನ್ನು ನಾಶ ಮಾಡುತ್ತದೆ ಎಂಬ ನಂಬಿಕೆ ಇದೆ.

### ಹತ್ತು ವಿಧದ ಪಾಪಗಳು ಯಾವುದು?

ಪರರಿಗೆ ಏನನ್ನೂ ಕೊಡದೆ ಕೇವಲ ಅವರಿಂದ ಸ್ವೀಕರಿಸುವುದು ಹಿಂಸೆ ಮಾಡುವುದು ಪರ ಸ್ತ್ರೀ ಸಂಗ ಇವು ಮೂರು ಶರೀರದಿಂದ ಸಂಭವಿಸುವ ಪಾಪಗಳು ಕಠೋರವಾಗಿ ಮಾತಾಡುವುದು, ಸುಳ್ಳು ಹೇಳುವುದು, ಚಾಡಿ ಹೇಳುವುದು, ಅಸಂಬದ್ಧವಾಗಿ ಮಾತಾಡುವುದು - ಈ ನಾಲ್ಕು ಮಾತಿನಿಂದುಂಟಾಗುವ ಪಾಪಗಳು. ಪರರ ಸಂಪತ್ತನ್ನು ಅಪಹರಿಸಲು ಯೋಚಿಸುವುದು ಬೇರೆಯವರಿಗೆ ಕೆಟ್ಟದ್ದಾಗಲೆಂದು ಬಯಸುವುದು ವ್ಯರ್ಥವಾಗಿ ಮನಸ್ಸಿನ ಆವೇಶ ಹೊಂದುವುದು - ಇವು ಮೂರು ಮಾನಸಿಕ ಪಾಪಗಳು. ಈ ಹತ್ತು ವಿಧವಾದ ಪಾಪಗಳ ನಿವಾರಣೆಗಾಗಿ ನದೀಸ್ನಾನ, ತಿಲ ತರ್ಪಣ, ಗಂಗಾಪೂಜಾದಿಗಳನ್ನು ಮಾಡಬೇಕು.

'ಸಾವಿರಾರು ಯೋಜನೆಗಳಷ್ಟು ದೂರದಿಂದ ಯಾರು "ಗಂಗಾ ಗಂಗಾ" ಎಂದು ಗಂಗೆಯ ಸ್ಮರಿಸುತ್ತಾನೆಯೋ ಅಂಥವರು ಎಲ್ಲ ಪಾಪಗಳಿಂದ ಮುಕ್ತರಾಗಿ ವೈಕುಂಠಲೋಕಕ್ಕೆ ಹೋಗುತ್ತಾರೆ. (ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ॥) ಛಲದಂಕಮಲ್ಲನಂತೆ ಗಂಗೆಯ ಬೆನ್ನು ಹತ್ತಿದ ಭಗೀರಥ. ದೇವಲೋಕದಿಂದ ಆಕೆಯನ್ನೇನ್ನೋ ಧರೆಗೆ ತರಲು ಸಫಲವಾಗಿರುತ್ತದೆ. ಭಗೀರಥನ ಉದ್ದೇಶ ಮನುಕುಲದ ಕಲ್ಯಾಣವಾಗಿರುತ್ತದೆ. ದೇವಗಂಗೆಯ ಸ್ಪರ್ಷ ಮಾತ್ರದಿಂದಲೇ ಹುಲು ಮಾನವರಿಗೂ ಪುಣ್ಯ ಸಂಚಯ ಮಾಡಿಸುವ ಉದ್ದೇಶವಿರುತ್ತದೆ.

ಭಗೀರಥನದು ಲೋಕ ಕಲ್ಯಾಣವಾದರೆ ನಮ್ಮದು ಸ್ವಾರ್ಥ ಕಲ್ಯಾಣದ ದೃಷ್ಟಿ ದೈವ ನಿರ್ಮಿತ ಪರಿಸರಕ್ಕೆ ಕೊಡಲಿ ಯೇಟು ಹಾಕಿ ಕಾಂಕ್ರೀಟ್ ಕೋಟೆಗಳನ್ನು ಕಟ್ಟುವ ಹುನ್ನಾರ ನಮ್ಮದು. ಸ್ವಾರ್ಥದ ಕಾರಣ ನದಿ,ಕೊಳಗಳು ಬತ್ತಿವೆ. ಅಂತ ರ್ಜಲ ಕಾಣದಾಗಿದೆ. ಪವಿತ್ರಳಾದ ಗಂಗೆ, ಯಮುನೆಯರೂ ಕಲುಷಿತರಾಗಿ ದ್ದಾರೆ.ಇಂದಿನ ದುಸ್ಥಿತಿಯನ್ನು ಭಗೀರಥನೇ ನಾದರೂ ಕಂಡಿದ್ದರೆ ಆತನ ಕಣ್ಣೀರೇ ಮತ್ತೊಂದು ನದಿಯ ಹುಟ್ಟಿಗೆ ಕಾರಣ ವಾಗುತ್ತಿತ್ತೋ ಏನೋ? ಗಂಗೋತ್ರಿಯ ಗೋಮುಖದಲ್ಲಿ ಜನಿ ಸುವ ಗಂಗೆ ಒಟ್ಟು 2,525 ಕಿ.ಮೀ ದೂರ ಸಂಚರಿಸುತ್ತಾಳೆ. ಗಂಗೆ ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ ಮತ್ತು ಪಶ್ಚಿಮಬಂಗಾಳವನ್ನು ಹಾದು ಬಂಗಾಳಕೊಲ್ಲಿ ಸಮುದ್ರ ವನ್ನು ಸೇರುತ್ತಾಳೆ.ಬಾಂಗ್ಲಾ ಮತ್ತು ಭಾರತದ ನಡುವೆ ಬಾಂಧವ್ಯ ಬೆಸೆಯುತ್ತಾಳೆ. ಬಾಂಗ್ಲಾದೇಶದಲ್ಲಿ ಆಕೆ ಪದ್ಮನಾಮಾಂಕಿತ ಳಾಗುತ್ತಾಳೆ.

ಹೀಗೆ ಗಂಗಾ ನದಿಯ ಸುದೀರ್ಘ ಪಯಣದೊಂದಿಗೆ ಯಮುನಾ, ರಾಮಗಂಗಾ, ಘಾಘ್ರ, ಗಂಡಕ್, ಕೋಶಿ ಮತ್ತು ಮಹಾನಂದ ನದಿಗಳು ಸೇರ್ಪಡೆಯಾಗುತ್ತದೆ.ಆ ಕಾರಣ ದಿಂದಲೇ ಗಂಗೆ ಮಹಾನದಿ.ಜೀವನದಿಯಾದ ಕಾರಣ ಗಂಗಾ ಜಯಂತಿಯ ಆಚರಣೆ.ಗಂಗಾಜಯಂತಿ ಉಲ್ಲೇಖ ಪದ್ಮ ಪುರಾಣ.ಬ್ರಹ್ಮಪುರಾಣ ಮತ್ತು ನಾರದ ಪುರಾಣದಲ್ಲಿದೆ.

ರಭಸದಿಂದ ಹರಿಯುತ್ತಿದ್ದ ಗಂಗೆಯ ರೋಷವನ್ನು ಕಡಿಮೆ ಮಾಡಿ ಆಕೆಯ ಅಹಂಕಾರವನ್ನು ಮುರಿದದ್ದೇ ಜಹ್ನು ಮುನಿಗಳು.ಜಹ್ನು ಮುನಿಗಳು ಗಂಗೆಯನ್ನೇ ಅಪೋಶನ ತೆಗೆದುಕೊಂಡ ಮಹಸಂತ. ಗಂಗೆಗಾಗಿ ಭಗೀರಥ ಮಹಾ ಮುನಿಯ ಪರಿಪರಿ ಪ್ರಾರ್ಥನೆ. ಭಗೀರಥನ ಪ್ರಾರ್ಥನೆಗೆ ಒಲಿದ ಜಹ್ನು ಮುನಿ.ತನ್ನ ಕಿವಿಯಿಂದ ಆಕೆ ಹೊರಗೆ ಬರುವಂತೆ ಮಾಡುತ್ತಾನೆ. ಹೀಗೆ ಗಂಗೆ ಜಾಹ್ನವಿಯಾಗುತ್ತಾಳೆ. ಭಗೀರಥನ ಪ್ರಯತ್ನದಿಂದ ಬಂದ ಕಾರಣ ಭಾಗೀರಥಿಯಾಗುತ್ತಾಳೆ.

### ಭಗೀರಥನ ತಪಕೆ ಮೆಚ್ಚಿ ಭೂಲೋಕಕ್ಕೆ ಬಂದ ಗಂಗೆ

ಗಂಗಾ ನದಿಯ ಪೂಜೆ, ಆರತಿಗೆ ಉತ್ತರ ಭಾರತದಲ್ಲಿ ಹೆಚ್ಚು ಪ್ರಾಮುಖ್ಯತೆ ಕಂಡರೂ ದಕ್ಷಿಣ ಭಾರತದಲ್ಲಿ ಅಂದು ಗಂಗಾ ತಾಳಿಯನ್ನು ಇಟ್ಟು ಗಂಗಮ್ಮ ದೇವಿಯ ಪೂಜೆಗೆ ವಿಶೇಷ ಆದ್ಯತೆ.ಕೆಲವೆಡೆ ಗಂಗಮ್ಮದೇವಿಯ ಉತ್ಸವಗಳು ನಡೆಯುತ್ತವೆ.

ಇಳಿದು ಬಾ ತಾಯೇ ಇಳಿದು ಬಾ... ಹಾಡಿನ ಸಾಲು ಗಳು ನಿಮಗೆ ನೆನಪಿರಬಹುದು. ಭಗೀರಥನ ಪ್ರಯತ್ನದ ಕಾರಣ ಧವಳ ಗಂಗೆ ಇಳಿದ ಕಥೆಯ ಹಿಂದಿನ ಸಾಲುಗಳವು.ಸಪ್ತ ಪವಿತ್ರ ನದಿಗಳಲ್ಲಿ ಗಂಗೆಯೂ ಒಂದು. ಆದಾಗ್ಯೂ ದೇವತಾ ರಾಧನೆ, ಪುಣ್ಯಾಹಾರ್ಚನೆ, ಕಲಶಪೂಜೆ ಸೇರಿದಂತೆ ಯಾವ ಆರಾಧನೆಯಲ್ಲೂ ಗಂಗೆಗೇ ಮೊದಲ ಆದ್ಯತೆ .ಮೃತ ಜೀವಿಯ ಮೋಕ್ಷಕ್ಕೂ ಗಂಗೆಯೇ ಕಾರಣೀಭೂತ.

ವೈಜ್ಞಾನಿಕ ದೃಷ್ಟಿಯಲ್ಲಿ ಸಪ್ತನದಿಗಳ ಹರಿವಿನ (ಗಂಗಾ ನದಿ 2,525ಕಿ.ಮೀ. ಉದ್ದಗಲ ಹರಿದರೆ, ಹಿಮಾಲಯದ ತಪ್ಪ ಲಲ್ಲಿ ಯಮುನೆಯ ಹರಿವು ಅಂದಾಜು 2 ಕಿ.ಮೀ. ಗೋದಾವರಿ 1,465 ಕಿ.ಮೀ. ನರ್ಮದೆ 1312 ಕಿ.ಮೀ. ಸಿಂಧು 80,075 ಕಿ.ಮೀ. ಕಾವೇರಿ 765 ಕಿ.ಮೀ. ಸರಸ್ವತಿ ಗುಪ್ತಗಾಮಿನಿ) ಲೆಕ್ಕಾಚಾರವನ್ನು ಹಾಕಿದರೂ ಸಹ ಗಂಗೆಯೇ ಜೀವದಾತ. ಸಾಕಷ್ಟು ಕೃಷಿಕರ ಆರಾಧ್ಯದೇವತೆ.ವೇದಸೂಕ್ತಗಳಲ್ಲಿ ಗಂಗಾ ಮತ್ತು ಯಮುನೆಯರಿಗೆ ಆದ್ಯತೆ.

ಹರನ ಜಟೆಯಿಂದ ಧರೆಗೆ ಇಳಿದ ಗಂಗೆಯ ನೆನಹಿನಲ್ಲಿ ನಡೆಯುವ ಆಚರಣೆಯೇ 'ಗಂಗಾ ಜಯಂತಿ' ಗಂಗಾ ನದಿಯ ಹರಿವ ಪ್ರದೇಶಗಳೆಲ್ಲೆಲ್ಲಾ ಅಂದು ಜೀವದಾತ ಗಂಗಾಮಾಯಿಗೆ ಭಕ್ತಿಯಲ್ಲಿ ಪೂಜೆ, ಬಾಗಿನ ಸಲ್ಲಿಸಿ ಧನ್ಯತೆ ಅರ್ಪಿಸುವ ದಿನ. ಅಂದಹಾಗೆ ಗಂಗಾಮಾಯಿಯ ಪೂಜೆಯನ್ನು ಯಾವಾಗ ಅಂದರೆ ಆಗ ಮಾಡುವುದಿಲ್ಲ. ಅದಕ್ಕೂ ಒಂದು ಕ್ರಮವಿದೆ. ಅದರ ಹಿಂದೊಂದು ಧನ್ಯತಾ ಭಾವವಿದೆ. ಗಂಗಾ ನದಿಗೆ ಆರತಿ ಎತ್ತುವ ಸುಮಂಗಲೆಯರು ಹೂವುವನ್ನು ಹಾಕಿ ಪೂಜಿ ಸುತ್ತಾರೆ. ವಾರಣಾಸಿಯ ದಶಾಶ್ವಮೇಧ ಘಾಟ್‌ನಲ್ಲಿ ನಡೆಯುವ ಆರತಿಯ ವೈಭವ ನೋಡಲು ಎರಡು ಕಣ್ಣು ಸಾಲದು.

ಕೆಲವೆಡೆ ದೀಪದಾನ ಮಾಡುವ ವಾಡಿಕೆಯಿದೆ. ಹೀಗೆ ದಾನವಾಗಿ ಪಡೆದ ಹಣತೆಯಲ್ಲಿ ತುಪ್ಪದ ದೀಪ ಹಚ್ಚಿ ಗಂಗಾ ನದಿಗೆ ತೇಲಿ ಬಿಡುತ್ತಾರೆ. ಗಂಗಾ ನದಿ ತೀರದಲ್ಲಿ ಅಂದು ಗಂಗಾ ಉತ್ಸವ ಜಾತ್ರೆಯ ಮಾದರಿಯಲ್ಲೇ ನಡೆಯುತ್ತದೆ ಗಂಗಾ ಆರತಿ ಸಂದರ್ಭದಲ್ಲಿ ಗಂಗಾಷ್ಟಕ, ಗಂಗಾ ಸೂಕ್ತ, ಗಂಗಾ ಸಹಸ್ರ ನಾಮ ಸ್ತೋತ್ರ, ಗಂಗಾ ಗಾಯತ್ರಿ ಮಂತ್ರ ಪಠಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಗಂಗೆಯನ್ನು ಪೂಜಿಸಿ ಆಕೆಯ ಮಡಿಲಲ್ಲಿ ಮುಳುಗೇಳುವುದರಿಂದ ಜಾತಕದಲ್ಲಿರುವ ಮಂಗಳಿಕ ಅಥವಾ ಕುಜದೋಷ ನಿವಾರಣೆಯಾಗುತ್ತದೆ ಎಂದು ಹೇಳು ತ್ತಾರೆ.

### ದಿವ್ಯತೆಯ ಹರಿವು ಗಂಗಾ

ಗಂಗೆ ಭಾರತೀಯರ ಪಾಲಿಗೆ ಹೆಮ್ಮೆಯಾದಳು. ಈಕೆಯೆ ಡೆಗಿನ ಶ್ರದ್ಧೆಯನ್ನು ಕಂಡು ವಿದೇಶಿಯರು ನಿಬ್ಬೆರಗಾದರು, ಅಧ್ಯಯನ ವಸ್ತುವಾದಳು.ಗಂಗೆ ಕೇವಲ ನದಿಯಲ್ಲ.ಅದು ಸಂಸ್ಕೃತಿಯ ನಿರಂತರತೆ. ದಿವ್ಯತೆಯ ಹರಿವು ಹಾಗೂ ಶ್ರದ್ಧಾ ವಂತಿಕೆಯಾದ ಧಾರೆ.ಗಂಗೆ ಭಾರತೀಯರ ಪಾಲಿಗೆ ನದೀ ದೇವತೆ.

ವಿಷ್ಣುವಿನ ಪಾದಗಳೆಡೆಯಿಂದ ಹುಟ್ಟಿ ಬಂದ ಈಕೆಯನ್ನು ಹರಿ ಪುತ್ರಿಯೆಂದೂ ಹರನ ಜಟೆಗಳಲ್ಲಿ ಬಂಧಿಯಾಗಿ, ಅವನನ್ನು ವರಿಸಿದ್ದರಿಂದ ಹರ ಪತ್ನಿಯೆಂದೂ ಈಕೆ ಪೂಜಿಸಲ್ಪಡುತ್ತಾಳೆ. ಈ ಎರಡು ಗುರುತುಗಳ ಹೊರತಾಗಿಯೂ ಗಂಗೆಗೆ ತನ್ನದೇ ಆದ ಛಾಪು ಮತ್ತು ಮನ್ನಣೆಗಳು ಇವೆ.

ಪೌರಾಣಿಕ ನಂಬುಗೆಯ ಪ್ರಕಾರ, ಸಗರ ರಾಜನ ಮಕ್ಕಳ ಮುಕ್ತಿಗಾಗಿಯೇ ಸ್ವರ್ಗಲೋಕದಿಂದ ಗಂಗೆಯನ್ನು ಭೂಮಿಗೆ ಕರೆಸಿದ್ದು,ಭಗೀರಥ ಸಾವಿರಾರು ವರ್ಷಕಾಲ ತಪಶ್ಚ ರಣೆ ನಡೆಸಿ ಗಂಗೆಯನ್ನು ಭೂಮಿಗೆ ತಂದ. ಧುಮ್ಮಿಕ್ಕಿ ಹರಿದ ಗಂಗೆಯ ವೇಗವನ್ನು ತಡೆಯಲು ಶಿವ ಜಟೆ ಬಿಚ್ಚಿನಿಂತ. ಆಗ ಗಂಗೆ ಅಲ್ಲಿ ಬಂಧಿಯಾದಳು.ಪುನಃ ಭಗೀರಥ ಶಿವನನ್ನು ಒಲಿಸಿಕೊಂಡು ಆಕೆಯನ್ನು ಭೂಮಿಯುದ್ಧಕ್ಕೂ ಕರೆತಂದ. ಹೀಗೆ ಭೂಮಿಗಿಳಿದ ಗಂಗೆ.ತಾನು ಹರಿದ ನೆಲದ ಇಕ್ಕೆಲ್ಲಗಳನ್ನೂ ಹಸಿರಿನಿಂದ ತುಂಬಿ ನಂದನವನವಾಗಿಸಿದಳು.

# ವೇದಪುರಾಣಗಳಲ್ಲಿ ಪರಿಸರ ಸಂರಕ್ಷಣೆ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621



ವೇದಗಳು ಇಂದು ಯಾವುದೇ ಒಂದು ಗುಂಪಿನ ಸ್ವತ್ತಾಗಿಲ್ಲ. ಪ್ರಪಂಚದಾದ್ಯಂತ ವಿದ್ವಾಂಸರುಗಳು ಅವುಗಳ ಆಂತರ್ಯವನ್ನು ಭೇದಿಸಲು ಪ್ರಯತ್ನಪಟ್ಟಿದ್ದಾರೆ. ವೇದಗಳಲ್ಲಿರುವ ವೈಜ್ಞಾನಿಕ ವಿಷಯಗಳನ್ನು ಆಧುನಿಕ ವಿಜ್ಞಾನ ವಿಷಯಗಳ ದೃಷ್ಟಿಯಿಂದ ವಿಶ್ಲೇಷಿಸಿ ಅವನ್ನು ಒರೆಗಳಿಗೆ ಹಚ್ಚಲಾಗಿದೆ.

ನಾವು ಭಾರತೀಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ,ಇಲ್ಲಿಯ ಮೂಲ ಜನಾಂಗಗಳು,ಸಸ್ಯ ಹಾಗೂ ಪ್ರಾಣಿಸಂಪತ್ತು,ಜನರ ಚಲನವಲನಗಳು, ಶಿಲಾಯುಗದ ಕಾಲದಿಂದ ಇಲ್ಲಿಯವರೆಗಾಗಿರುವ ಸಾಮಾಜಿಕ ವಿಕಾಸ, ವಿಭಿನ್ನ ಭಾಷಾ ಸಂಸ್ಕೃತಿಗಳು ವೈದಿಕ ನಾಗರಿಕತೆ, ಜೈನ, ಬೌದ್ಧ ಧರ್ಮದ ಕಾಣಿಕೆಗಳು, ಹೊಸಧರ್ಮಗಳ ಪ್ರಭಾವ - ಇವೆಲ್ಲವುಗಳ ಕಡೆ ಗಮನ ಹರಿಸಬೇಕು. ಎಷ್ಟೋ ಭಿನ್ನತೆ ವೈವಿಧ್ಯತೆಗಳಿದ್ದರೂ ಭಾರತೀಯ ಸಂಸ್ಕೃತಿಯಲ್ಲಿ ಇನ್ನೂ ಏಕತೆ ಉಳಿದುಕೊಂಡಿದೆ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ.

ವೇದಗಳ ಕಾಲದಿಂದ ಇಲ್ಲಿಯವರೆಗೂ ಭಾರತದ ಬಹುಪಾಲು ಜನರು ಕೃಷಿಕರೇ. ಗೋವು ಮತ್ತಿತರ ಸಾಕು ಪ್ರಾಣಿಗಳು ಇನ್ನೂ ಕೃಷಿ ಚಟುವಟಿಕೆಗಳಿಗೆ ಬಳಕೆಯಾಗುತ್ತಿವೆ. ಆಧ್ಯಾತ್ಮ ಭಾರತದ ಹೃದಯವಾಗಿದೆ. ಶ್ರೀಸಾಮಾನ್ಯನ ಜೀವನ ಧರ್ಮ ಹಾಗೂ ಜಾನಪದದಲ್ಲಿ ವೇದೋಪನಿಷತ್ತುಗಳ ಪರಿಮಳವಿದೆ. (ಯಕ್ಷಗಾನ, ಬಯಲು ನಾಟಕ, ಹರಿಕಥೆಗಳು, ತೀರ್ಥಯಾತ್ರೆಗಳು, ಅತಿಥಿ ಸತ್ಕಾರ,ಸಂಪ್ರದಾಯಗಳು, ನಂಬಿಕೆಗಳು ಗಾಥೆಗಳು ಇತ್ಯಾದಿ) ಯಾವುದೇ ದೇವರಿಗೆ ಮಾಡಿದ ಪೂಜೆಯಾಗಲಿ ಅದು ಒಂದೇ ದೇವರಿಗೆ ಸಲ್ಲುತ್ತದೆಂಬ ನಂಬಿಕೆ. ವೇದಘೋಷಗಳು ಇಂದೂ ಅಲ್ಲಲ್ಲಿ ಕೇಳಿಬರುತ್ತವೆ.ವೃಕ್ಷಪೂಜೆ, ವೃಕ್ಷ ಜಾನಪದಗಳು ಇಂದಿಗೂ ಜೀವಂತವಾಗಿವೆ.''ನಮ್ಮ ಸಂಸ್ಕೃತಿಯ ಮೂಲ ನಮ್ಮ ಅಮೃತಮಯವಾದ, ಅಜೇಯ ತತ್ವವಾದ ವೇದಗಳು. ನಮ್ಮ ಸಂಸ್ಕೃತಿಯ ಬೆಳವಣಿಗೆ ಬಂದಿರುವುದು ವೇದಗಳ ನೀತಿಯಲ್ಲಿ ಜೀವಿಸಿದ ನಮ್ಮ ದೇಶದ ಮಹಾನುಭಾವರುಗಳ ಮಹಿಮೆಯಿಂದ.''

ವೇದಗಳಲ್ಲಿ ಯಾವುದೇ ಜಾತಿಭೇದಗಳಿಲ್ಲ. ಸ್ತ್ರೀ ಸಮಾನತೆಗೆ ಇವು ಹೆಸರಾಗಿದೆ. 'ಏಕದೈವತ್ವವನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿರುವುವು ವೇದಗಳು.ಇಲ್ಲಿ ಕಾಡಿನ ದೇವತೆ 'ಅರಣ್ಯಾನಿ'. ಮರಗಳಿಂದ ಹಿಡಿದು ಜೀವಿಗಳಲ್ಲೂ ದೈವತ್ವವನ್ನು ಕಾಣುವ ಪ್ರಯತ್ನಇಲ್ಲಿದೆ.ಪ್ರಾರ್ಥನೆಗಳಲ್ಲಿ ಎಲ್ಲರಿಗೂ ಒಳ್ಳೆಯದಾಗಲಿ ಎಂಬುದಿದೆಯೇ ಹೊರತು ಸ್ವಾರ್ಥವಿಲ್ಲ. (ಅಥರ್ವವೇದದ ಕಾಲಕ್ಕೆ ಬಂದಾಗ ಅನೇಕ ಜಾನಪದ ಬದಲಾವಣೆಗಳಿವೆ.)

ವೃಕ್ಷಪೂಜಾ ಪದ್ಧತಿ, ಮಾನವ ಸಮಾಜದಲ್ಲಿ ಹೇಗೆ ಪ್ರಾರಂಭವಾಯಿತೆಂಬುದನ್ನು ಸರಿಯಾಗಿ ಊಹಿಸುವುದು ಕಷ್ಟವಾಗುತ್ತದೆ. ದೇವಾಲಯಗಳ ಮುಂದೆ ಬೆಳೆಸಿಕೊಂಡವು ಪವಿತ್ರ ವೃಕ್ಷಗಳಾದವೇ? ಪಿತೃ ಸಮಾಧಿಗಳ ಮೇಲೆ ಬೆಳೆಸಿಕೊಂಡವು ಪವಿತ್ರ ವೃಕ್ಷಗಳಾದವೇ? ಅಥವಾ ಆದಿಮಾನವನಿಗೆ ಆಶ್ರಯ,ಹಣ್ಣು ಹಂಪಲುಗಳನ್ನು ಪೂರೈಸಿದ್ದುದರಿಂದಲೋ ಅಥವಾ ಅವುಗಳ ಹೆದರಿಕೆಯಾಗುವಷ್ಟು ಬೃಹದಾಕಾರಗಳು ಅವುಗಳಲ್ಲಿ ದೈವವನ್ನು ಕಾಣಲು ಪ್ರಯತ್ನಿಸುವಂತೆ ಪ್ರೇರೇಪಿಸಿತೋ - ಹೇಳುವುದು ಕಷ್ಟ. ಇವುಗಳ ಬಗ್ಗೆ ಹೆಚ್ಚು ಚರ್ಚಿಸಬಹುದೇ ಹೊರತು, ತೀರ್ಮಾನಗಳನ್ನು ಕೊಡುವುದು ಸುಲಭವಲ್ಲ.

ಒಟ್ಟಿನಲ್ಲಿ ವೇದಗಳ ಕಾಲದಿಂದ ಇಲ್ಲಿಯವರೆಗೂ ಮರಗಳು ಮತ್ತು ಅವುಗಳ ಉತ್ಪನ್ನಗಳು ನಮ್ಮ ಜೀವನ ಹಾಗೂ ಜಾನಪದದಲ್ಲಿ ಹಾಸುಹೊಕ್ಕಾಗಿವೆ.ಇಂದಿನ ಜಾಗತಿಕ ಉಷ್ಣೀಕರಣ ಹಾಗೂ ಸಸ್ಯಾಗಾರ ಪರಿಣಾಮಕ್ಕೆ ಕಾಡುಗಳು ಹಾಗೂ ಮರಗಳ ವಿನಾಶವೂ ಒಂದು ಕಾರಣ.ವೇದಗಳ ಕಾಲದಿಂದ ಇಲ್ಲಿಯವರೆಗೂ ಜಾತಕರ್ಮ, ಉಪನಯನ, ವಿವಾಹ, ಅಂತ್ಯಸಂಸ್ಕಾರ ಮೊದಲಾದ ಕರ್ಮಗಳಿಗೆ ಮರಗಳ ಭಾಗಗಳು ಮತ್ತು ಅವುಗಳ ಉತ್ಪನ್ನಗಳು ಬೇಕೇಬೇಕು. ವೇದಗಳ ಕಾಲದಲ್ಲಿ ಮನೆ ಕಟ್ಟುವ ಜಾಗದಲ್ಲಿ ಅರಳಿಮರವಿರಬಾರದೆಂಬುದಿತ್ತು. ಗೃಹಪ್ರವೇಶವಿತ್ತು. ಋಗ್ವೇದದಲ್ಲಿ 30 ಜಾನಪದ ಕಲೆಗಳನ್ನು



**ವೇದಗಳಲ್ಲಿ ಅನೇಕ ಲೌಕಿಕ ಜಾನಪದ ವಿಷಯಗಳಿರುವುದು ವಿದ್ವಾಂಸರ ಗಮನ ಸೆಳೆದಿಲ್ಲ. ಇವುಗಳ ಪೈಕಿ ಜುಜೂ ಒಂದು.**

ಹೆಸರಿಸಲಾಗಿದೆ. (ಹಾಡು , ಕವಿತೆ, ನೃತ್ಯ, ಗೀತ, ಕೊಳಲೂದುವುದು, ಕೊಂಬು ಊದುವುದು, ಶಂಖನಾದ, ನಗಾರಿ ಬಾರಿಸುವುದು ಕೋಲಾಟ, ವಾಸ್ತುಶಿಲ್ಪ ಇವು ಮುಖ್ಯವಾದವು (ಹನುಮಂತರಾವ್ , 1947) ನೇಯ್ಗೆ, ಒಡವೆ ತಯಾರಿಕೆ, ಕಸೂತಿ ಕೆಲಸ,ಹೂ ಕಟ್ಟುವುದು. ರಥಗಳ ತಯಾರಿಕೆ, ಹಗ್ಗ ತಯಾರಿಸುವುದು,ಕಮ್ಮಾರ,ಚಮ್ಮಾರ ಹಾಗೂ ಕುಂಬಾರರ ಕಲೆಗಳು, ಬಿಲ್ಲು ತಯಾರಿಸುವುದು (ತಾಳೆಮರ ಇಲ್ಲವೇ ಬಿದಿರಿನಿಂದ),ಸಂಗೀತ (ಮೃದಂಗ ಕೊಳಲು ಮತ್ತು ಕರ್ಕರಿ ಎಂಬ (ತಂತಿವಾದ್ಯ) ಕೊಳಲು - ಬಿದಿರಿನ ವಾಟೆಯಿಂದ, ಮೃದಂಗ ಮರಗಳಿಂದ ತಯಾರಾಗುತ್ತಿತ್ತು,ಯುದ್ಧ ಕಲೆಗಳಲ್ಲಿ ಬಿಲ್ಲು ತಯಾರಿಸುವುದು, ಕುದುರೆ ಪಳಗಿಸುವುದು, ಯಾಗ ಕಾಲದಲ್ಲಿ ಕಥೆಗಳನ್ನು ಹೇಳುತ್ತಿ ದ್ದುದು,ವಿವಾಹ ಕಾಲದಲ್ಲಿ ನೃತ್ಯ, ಸಂಗೀತ ಗೂಡಾರ್ಥವಿರುವ ಮಂತ್ರ ಗಳು, ಬ್ರಹ್ಮೋದ್ಯವೆಂಬ ಒಗಟುಗಳು ಇವೆಲ್ಲಾ ಜಾನಪದ ಅಂಶಗಳೇ,.ನಾಟ್ಯ ಮಾಡುವ ಗಂಡಸರು 'ನೃತ್ಯರು' ಹೆಂಗಸರು 'ನೃತ್ಯಗಳು ಹಾಸ್ಯರೂಪದ ನೃತ್ಯವೂ (ಹನುಮಂತರಾವ್, 1947) ಒಂದು ಜಾನಪದ ವಿಶೇಷತೆ (ಋ.10.18.3) ಮರಗಳಿಂದ ಪಡೆದ ಸುರೆಯಪಾನ, ಸೋಮರಸದ ವಿಷಯಗಳು ಸಸ್ಯ ಜಾನಪದ ಅಂಶಗಳೇ. ಇಂದ್ರ ಅತಿ ಪಾನಿ, ಶಿವ ಸಾವಿರ ಔಷಧಗಳನ್ನು ಬಲ್ಲ 'ಭೇಷಜ'.

ಅಂತ್ಯಕ್ರಿಯೆಯಲ್ಲಿ ಗಾಲಿಗಳಿಲ್ಲದ ರಥ (ಚಟ್ಟ) ಉಪಯೋಗಗೊಳ್ಳು ತ್ತಿತ್ತು. ಇದು ಬದಿರಿನಗಳುಗಳಿಂದ ತಯಾರಾಗುತ್ತಿದ್ದವು. ಇಂದಿಗೂ ಈ ಜಾನಪದ ಅಂಶ ಮುಂದುವರೆದಿದೆ.

ಮರಗಳಲ್ಲಿ ದೈವತ್ವವನ್ನು ಕಾಣುವ, ಅವನ್ನು ಪವಿತ್ರ ವೃಕ್ಷಗಳನ್ನಾಗಿ ಕಾಣುವ ಸಂಪ್ರದಾಯ ಇನ್ನೂ ಇದೆ. ದೇವರ ಕಾಡುಗಳೂ ಇದೆ. ಮರಗಳ ಜೈವಿಕ ವೈವಿಧ್ಯ ಕಾಪಾಡುವಲ್ಲಿ ಇವು ಮಹತ್ವದ ಪಾತ್ರವಹಿಸಿವೆ. ಮೇಲಿನ ವಿಷಯಗಳನ್ನೆಲ್ಲಾ ಗಮನಿಸಿದರೆ ನಮ್ಮ ಸಂಸ್ಕೃತಿ,ಸಸ್ಯ ಸಂಸ್ಕೃತಿಯಾ ಗಿದೆ. ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಅಂಡಗಿ ಬಳಿಯ ಕ್ಯಾದಗಿ ಕೊಪ್ಪದಲ್ಲಿ ಪ್ರತಿ ಅಮಾವಾಸ್ಯೆ ಜಾತ್ರೆಯಾಗುತ್ತದೆ.ಭಕ್ತರು ಕಾಡಿನ ಮರ ಗಳಿಗೆ ಸೀರೆ, ರವಿಕೆ, ಬಳೆಗಳನ್ನು ಇಲ್ಲಿರುವ ನಾಮಾಧಾರಿ ಮಠದವರ ಮೂಲಕ ತೊಡಿಸುತ್ತಾರೆ. ವೃಕ್ಷಗಳನ್ನು ಪೂಜಿಸುತ್ತಾರೆ. ಇಲ್ಲಿ ಎಲ್ಲಾ ಮರ ಗಳೂ ಬಟ್ಟೆ ಧರಿಸಿ ನವ ಸ್ತ್ರೀಯರಂತೆ ಕಾಣುತ್ತವೆ.(ಸಂಧ್ಯಾ ಹೆಗಡೆ, ಪ್ರಜಾ ವಾಣಿ 24-4-12).ನಮ್ಮ ಹತ್ತಿರವಿರುವ ಮರಗಳೊಡನೆ ನಮಗೆ ತಿಳಿಯ ದಂತೆ ನಂಟು ಬೆಳೆದಿರುತ್ತದೆ. ತೋರುದತ್ ಎಂಬ ಕವನವನ್ನು ಸರ್ವೆ ಮರದ ಮೇಲೆ ಕವಿತೆ ಬರೆದಿದ್ದಾರೆ.ಅರಳಿಕಟ್ಟೆ, ಬೇವಿನ ಕಟ್ಟೆಗಳಿಲ್ಲದಿರುವ ಹಳ್ಳಿಯನ್ನು ಹುಡುಕು ವುದೇ ನಮಗೆ ಕಷ್ಟವಾಗುತ್ತದೆ. ದೇವಾಲಯಗಳ ಹತ್ತಿರ ಬಿಲ್ವಪತ್ರೆ ಮರ, ಪಾರಿಜಾತ ಬನ್ನಿ ಮರಗ ಳಿರುತ್ತವೆ.

ವೇದಗಳಲ್ಲಿ ಅನೇಕ ಲೌಕಿಕ ಜಾನಪದ ವಿಷಯಗಳಿರುವುದು ವಿದ್ವಾಂಸರ ಗಮನ ಸೆಳೆದಿಲ್ಲ. ಇವುಗಳ ಪೈಕಿ ಜುಜೂ ಒಂದು. ಪ್ರಾಚೀನ ಜೂಜಾಟ ಪಗಡೆ (ಅಕ್ಷ) ತಯಾರಿಸುತ್ತಿದ್ದುದು ವಿಭೀತಕ (ತಾರೆ ಮರ) ದ ಮರದಿಂದ, ಜೂಜುಗಾರನ ಜೀವನ ಚಿತ್ರಕ್ಕೆ ಒಂದು ಸುಂದರ ಕಾವ್ಯದ ಸೂಕ್ತ 'ಅಕ್ಷ ಸೂಕ್ತ' ಋಗ್ವೇದದಲ್ಲಿದೆ.

ಇಲ್ಲಿ ಯಾವ ದೇವರ ಸ್ತೋತ್ರವೂ ಇಲ್ಲ. ಜೂಜುಗಾರನ ದೈನಂದಿನ ಜೀವನದ ಹಾಗೂ ಅವನ ಪಶ್ಚಾತ್ತಾಪದ ನೈಜ ಚಿತ್ರಣವಿದೆ. ಜೂಜಾಡ ಬೇಡ ಜೀವನ ಹಾಳು ಮಾಡಿಕೊಳ್ಳಬೇಡ. ಕೃಷಿ ಮಾಡು' ಎಂಬ ಸಂದೇಶವಿದೆ.

ವೇದಗಳಲ್ಲಿ ಶಾಶ್ವತ ಮೌಲ್ಯಗಳು ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟಂತೆ ಮಾತ್ರ ವಲ್ಲ. ಅನೇಕ ವೃತ್ತಿಗಳು (ಉದಾ: ಲೋಹಕಾರರು, ಬಡಗಿ,ಕೃಷಿಕಾರ,ಚರ್ಮಹದಮಾಡುವವ, ನೇಯಿಗೆ ಯವ, ಕಾಳು ಬೀಸುವುದು, ರಥಕಾರ, ನಾವಿಕ, ನಟ,ಜೂಜುಗಾರ,ಸೌದೆತರುವವ,ಕ್ಷೌರಿಕ ಪುರೋ ಹಿತ,ಸೈನಿಕ) ಪ್ರಸ್ತಾವಗೊಂಡಿದೆ. ಇಲ್ಲಿ ಯಾವುದೂ ನಿಕೃಷ್ಟವಲ್ಲ. ಆಯುರ್ವೇದ ಅಥರ್ವವೇದದ ಉಪವೇದವಾದ್ದರಿಂದ ಮರಗಳ ಅನೇಕ ಔಷಧೋ ಪಯೋಗಗಳು ಮತ್ತು ಜಾನಪದ ಪದ್ಧತಿಗಳು ಆ ಕಾಲದ ಜನರಿಗೆ ಗೊತ್ತಿತ್ತು.

ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ಮಹಾಕಾವ್ಯಗಳಲ್ಲೆಲ್ಲಾ ತರುಲತೆಗಳು ಹಾಗೂ ವನಸ್ಪತಿಗಳ ಬಗ್ಗೆ ಪ್ರಸ್ತಾಪಗಳಿವೆ. ಋಗ್ವೇದ ದಲ್ಲಿ ಮರಗಳಿಗೆ ಉಪಯೋಗಿಸಿರುವ ಪದ 'ವೃಕ್ಷ', ಸಸ್ಯಗಳಿಗೆ ಉಪಯೋಗಿಸಿರುವ ಸಾಮಾನ್ಯ ಹೆಸರು 'ವಿರುಧ',ಕಾಯಿಲೆ ಗುಣಪಡಿಸುವ ಶಕ್ತಿಯುಳ್ಳ ಸಸ್ಯ ಗಳನ್ನು 'ಔಷಧಿ' ಎಂದು ಕರೆಯಲಾಗಿದೆ.

ಋಗ್ವೇದದ ಕಾಲದಲ್ಲಿ ಮರದ ನೇಗಿಲು ಗಳನ್ನು, ರಥಗಳನ್ನು ಉಪಯೋಗಿಸುತ್ತಿದ್ದರು.

## ಓಲಗ

*ತೋಮಾಲೆ ಸೇವೆಯ ನಂತರ ಪ್ರತಿದಿನ ಬಂಗಾರದ (ಚಿನ್ನದ) ಬಾಗಿಲ ಒಳಗಿರುವ ಸ್ನಪನ ಮಂಡಪದಲ್ಲಿ ಬಂಗಾರದ ಸಿಂಹಾಸನದ ಮೇಲೆ ಓಲಗ ಶ್ರೀನಿವಾಸಮೂರ್ತಿಗೆ ಓಲಗ ನಡೆಯುತ್ತದೆ. ಆ ಸಮಯ ದಲ್ಲಿ ಆ ದಿವಸ ತಿಥಿವಾರ ನಕ್ಷತ್ರಗಳ ವಿವರಣೆಯ ಪಂಚಾಂಗ, ಅನ್ನದಾತರ ಹೆಸರು - ಎಲ್ಲಾ ಸ್ವಾಮಿಗೆ ತಿಳಿಸು ತ್ತಾರೆ. ನಂತರ ಓಲಗ ಶ್ರೀನಿವಾಸ ಮೂರ್ತಿಗೆ ಬೆಲ್ಲ ದೊಂದಿಗೆ ಕಲೆಸಿದ ಎಳ್ಳಿನ ಹಿಟ್ಟು ನಿವೇದಿಸುತ್ತಾರೆ. ಬ್ರಹ್ಮೋ ತ್ಸವದಲ್ಲಿ ಮೊದಲನೆ ದಿನ ಧ್ವಜಾರೋಹಣೆ ನಡೆಯುವ ದಿನದಂದು ಈ "ಆಸ್ಥಾನ್" ಬಂಗಾರದ ಬಾಗಿಲ ಮುಂದೆ ನಡೆಯುತ್ತದೆ.*

*ಪ್ರತಿದಿನ "ಆಸ್ಥಾನ್" ಶ್ರೀನಿವಾಸನಿಗೆ ಅರ್ಚಕರು "ತಂಡುಲ ದಾನ್" ವನ್ನು ಮಾಡುತ್ತಾರೆ. ದಕ್ಷಿಣೆಯಿಂದ ಕೂಡಿದ ಅಕ್ಕಿಯನ್ನು ದಾನ ಮಾಡುತ್ತಾರೆ.*

*ಈ ಓಲಗ ಪೂರ್ತಿಯಾಗಿ ಏಕಾಂತವಾಗಿ ನಡೆಯುತ್ತದೆ.*

ಯಜ್ಞಯಾಗಾದಿಗಳಿಗೆ ಬೇಕಾದ ಪಾತ್ರೆಗಳನ್ನು (ಸೃಕ್, ಸ್ರುವ, ದರ್ವಿ,ಆಕರ್ಷಫಲಕ, ಪ್ರಣೀತಾ, ಪ್ರೋಕ್ಷಿಣೀ,ಶಮ್ಯಾ, ಉಲೂಖಲ, ಮುಸಲ, ಶೂರ್ಪ, ದೃಷ್ಟಿ,ಪಾತ್ರೀ,ಶಡವಟ್ಟಪಾತ್ರಂ, ಪ್ರಾಶಿತ್ರ ಅಜ್ಞಿ, ವಿಘನ ಅಧಿಶವಣಫಲಕ,ದ್ರೋಣಕಲಶ, ಪರಿಪ್ಲೂ, ಗ್ರಹಸ್, ಚಮಸಗಳು, ಯೂಪ, ವಸೋರ್ಧಾರ ಉಪಯ ಮನೀ,ಶಫೌ,ಧಾವಿತ್ರಾನಿ ಮುಂತಾದವು) ಮರಗ ಳಿಂದಲೇ ಮಾಡುತ್ತಿದ್ದರು.

ಋಗ್ವೇದ ಕಾಲದಲ್ಲಿ ಮರಗಳ ಬುಡಕ್ಕೆ 'ಸ್ಕಂಧ' ಎಂದೂ, ಬೇರುಗಳಿಗೆ 'ಮೂಲ' ಎಂದೂ ಕಾಂಡಕ್ಕೆ 'ಕಾಂಡ'ವೆಂದೂ ಟೊಂಗೆಗೆ 'ವಲ್ಸಾ' ಎಂದೂ ಕವಲುಗಳಿಗೆ 'ಶಾಖ' ಎಂದೂ ಎಲೆಗಳಿಗೆ 'ಪರ್ಣ'ಗಳೆಂದೂ, ಹೂಗಳಿಗೆ 'ಪುಷ್ಪ' ಗಳೆಂದೂ ಹಣ್ಣುಗಳಿಗೆ 'ಫಲ'ಗಳೆಂದೂ ಕರೆಯಲಾಗಿದೆ.

ಸಸ್ಯಗಳನ್ನು, ವೃಕ್ಷಗಳು (ಮರಗಳು,) ಔಷಧಿ (ಗಿಡಗಳು)ಲತೆಗಳು (ವೀರತ್) ಹೂಬಿಡುವ (ಪುಷ್ಪವತಿ),ಫಲಬಿಡುವ (ಫಲವತಿ) ಹಾಗೂ ಫಲ ಬಿಡದ ಸಸ್ಯಗಳನ್ನಾಗಿ ವರ್ಗೀಕರಿಸುತ್ತಿದ್ದರು.

ಮರಗಳ ಪ್ರಾಮುಖ್ಯದ ಬಗ್ಗೆ ವೇದಗಳಲ್ಲಿ ಸವಿಸ್ತಾರವಾದ ವರ್ಣನೆಗಳಿವೆ. ಮರಗಿಡಗಳು ಮತ್ತು ಕಾಡುಗಳು ಮಾನವನಿಗೆ ದೇವರ ವರ ಪ್ರಸಾದ ಇವುಗಳಲ್ಲದೆ ಮಾನವನ ಉಳಿವು ಕಷ್ಟ (ಋ.9,12,17,; ಅ.ವೇ.20.761) ಅಥರ್ವವೇದದ ಪ್ರಕಾರ ದೈವಿಶಕ್ತಿ ಮರಗಿಡಗಳಲ್ಲಿದೆ. ಮರಗಳು ಮಾನವನಿಗೆ ರಕ್ಷಣೆ ಮತ್ತು ಜೀವಶಕ್ತಿಯನ್ನೇ ಕೊಡುತ್ತವೆ. ಮಾಲಿನ್ಯವನ್ನು ಕಡಿಮೆ ಮಾಡುತ್ತವೆ.

ಋಗ್ವೇದದಲ್ಲಿ ಮಾನವನ ಉಳಿವಿಗೆ ಮರಗಳು ಅಗತ್ಯ ನಮ್ಮಿಂದ ದೂರವಾಗಬಾರದೆಂದು ಅವುಗಳನ್ನು ಕುರಿತು ಪ್ರಾರ್ಥಿಸಲಾಗಿದೆ. (ಋ.3.5.3.20;5,41,11;6.2.1.9) ನಮ್ಮ ಗೃಹಾಭ್ಯುದಯಕ್ಕೆ ಅವುಗಳ ಅಗತ್ಯವಿದೆ. ಅವುಗಳ ನಾಶ ಮಾನವನ ಅಳಿವಿಗೆ ಕಾರಣ. ವಾಸ್ತೋಶ್ಪತಿ ಮನೆಕಟ್ಟುವ ಜಾಗದ ಅಧಿಪತಿ.

ಯಜುರ್ವೇದದ ಪ್ರಕಾರ (ಯ.ವೇ 28.2) ಮರಗಳು ಮಧುರ ಫಲಗಳನ್ನು ಕೊಡುತ್ತವೆ. ಮಳೆ ಮೋಡಗಳನ್ನು ಆಕರ್ಷಿಸಿ ಮಳೆ ಬೀಳಲು ಕಾರಣವಾಗುತ್ತವೆ.

ಯಜುರ್ವೇದ ತರುಲತೆಗಳನ್ನು ಕಡಿಯುವುದನ್ನು ನಿಷೇಧಿಸುತ್ತದೆ ಈ ಬಗ್ಗೆ ಋಗ್ವೇದದಲ್ಲಿ (ಋ 6.48. 17) ಪ್ರಸ್ತಾಪವಿದೆ. 'ಅವು ಮಾಲಿನ್ಯ ಪರಿಹಾರಕಗಳಾದ್ದರಿಂದ ಅವನ್ನು ಕಡಿದುರುಳಿಸಬಾರದು.

ಮರಗಳ ಜೊತೆಗಿನ ಸಾಮರಸ್ಯ ಪೂರ್ಣ ಜೀವನವನ್ನು ಋಗ್ವೇದ ಪ್ರತಿಪಾದಿಸುತ್ತದೆ. "ಮರಗಳು ಬೆಳೆಯಲಿ, ಹೂ, ಹಣ್ಣುಗಳನ್ನು ಬಿಡಲಿ ಇದರಿಂದಾಗಿ ನಾವು ಬದುಕುಳಿಯಬಹುದು (ಋ. 3.8.11) ನಾವು ಅರಣ್ಯಗಳನ್ನು ನಿರ್ಲಕ್ಷಿಸಬಾರದು. (ಋ.5.8.11) ಮರಗಳು ನಮ್ಮ ಸ್ನೇಹಿ ತರಿದ್ದಂತೆ. ಅವನ್ನು ಸರಿಯಾಗಿ ಬೆಳಸಿ ರಕ್ಷಿಸೋಣ (ಋ 6,47,26) ಮೇಲಿನ ವಾಕ್ಯಗಳಿಂದ ನಮಗೆ ಗೊತ್ತಾಗುವುದೆಂದರೆ ಋಗ್ವೇದದ ಕಾಲದಲ್ಲೇ ಪರಿಸರದ ಬಗ್ಗೆ ಉತ್ತಮ ತಿಳುವಳಿಕೆ ಇದ್ದಿತು. ಆ ಕಾಲದಲ್ಲಿ ಭೂರಮೆ, ಸಸ್ಯಶ್ಯಾಮಲೆಯಾಗಿದ್ದರೂ,ದಟ್ಟವಾದ ಅಡವಿಗಳಿದ್ದರೂ ಅಪಾರ ವೃಕ್ಷ ಸಂಪತ್ತಿದ್ದರೂ, ಕಾಡು ಹಾಗೂ ವನಸ್ಪತಿಗಳ ಬಗ್ಗೆ ಅವರಿಗಿ ರುವ ಪವಿತ್ರ ಭಾವನೆ ಅವುಗಳಿಗೆ ಅವರು ಕೊಡುತ್ತಿದ್ದ ಪ್ರಾಮುಖ್ಯ, ಅವುಗಳ ರಕ್ಷಣೆಯ ಬಗ್ಗೆ ಅವರಿಗಿದ್ದ ಆಸಕ್ತಿ ಇವು ಪ್ರಶಂಸನೀಯವಾದವುಗಳು.

(- ಸಶೇಷ)

# ಆಳ್ವಾರರ ಭಗವದನುಭವ

**ಧಾರಾವಾಹಿ - 1**


ಡಾ॥ ಸಿ. ಎಸ್. ಊರ್ಮಿಳಾ
93804 26830

## ದೇವರು ಇದ್ದಾನೆಯೇ ? ಇಲ್ಲವೇ?

ದೇವರು ಇದ್ದಾನೆಯೇ? ಇಲ್ಲವೇ? ಅವನು ಇದ್ದರೆ ಎಲ್ಲಿದ್ದಾನೆ. ಹೇಗಿದ್ದಾನೆ!.. ನಮ್ಮ ಕಣ್ಣಿಗೆ ಕಾಣಿಸುವುದೇ ಇಲ್ಲವಲ್ಲಾ ಭಗವಂತ ಎನ್ನುವವನು ಇದ್ದರೆ ಅವನು ನಮ್ಮೆಲ್ಲರನ್ನು ಕಾಪಾಡಬೇಕಲ್ಲವೇ? ಹಾಗಲ್ಲದೆ ನಮ್ಮನ್ನು ಯಾಕೆ ಕಷ್ಟದಲ್ಲಿ ಸಿಲುಕಿಸುತ್ತಾನೆ? ಕಷ್ಟದಲ್ಲಿ ಇದ್ದಾಗ ನಮ್ಮನ್ನು ನಡು ನೀರಿನಲ್ಲಿ ಬಿಟ್ಟು ಬಿಡುತ್ತಾನಲ್ಲಾ : ಇಷ್ಟೆಲ್ಲಾ ಇರಲಿ. ಅವನು ನಮಗೆ ಕಷ್ಟವನ್ನು ಕೊಡುವುದೇಕೆ? ಅದನ್ನು ಬಿಡಿಸುವುದೇಕೆ? ನಮ್ಮ ಪಾಡಿಗೆ ನಾವು ಇರುತ್ತೇವೆ ಅಲ್ಲವಾ. ಹೀಗೆ ಅನೇಕ ಪ್ರಶ್ನೆಗಳು ನಮ್ಮೆಲ್ಲರಲ್ಲಿ ಹುಟ್ಟುವುದು ಸಹಜ ಅದಕ್ಕೆಲ್ಲಾ ಉತ್ತರವನ್ನು ಪಡೆಯದೆ ಪರಿತಪಿಸುತ್ತಿರುವುದೂ ಸಹಜ. ಇದಕ್ಕೆಲ್ಲಾ ಖಂಡಿತ ಉತ್ತರ ಸಿಗುವುದು. ಪ್ರಯತ್ನ ಬೇಕಷ್ಟೇ? ಅದು ಯಾವುದರಿಂದ-ವೇದ- ವೇದಾಂತ, ಉಪನಿಷತ್ತು ಶ್ರುತಿಪುರಾಣ, ಇತಿಹಾಸ,ಪೂರ್ವಾಚಾರ್ಯರ ಜೀವನ ಚರಿತ್ರೆಗಳಿಂದ ಅವರ ಸಿದ್ಧಾಂತಗಳಿಂದ ನಾವು ಕಂಡುಕೊಳ್ಳಬಹುದು. ಇದಕ್ಕೆಲ್ಲಾ ನಮ್ಮೆಲ್ಲ ಹಿರಿಯ ವೇದಾಂತಿಗಳು, ಆಳ್ವಾರರು, ಆಚಾರ್ಯರು,ನಾಯನ್‌ಮಾರರು,ದಾಸರು ವಚನಕಾರರು ಕಂಡು ಕೊಂಡಿದ್ದಾರೆ. ಭಗವಂತನದೇ ಈ ಜಗತ್‌ಸೃಷ್ಟಿ. ಅವನ ನಿಯಮದಂತೆ ಸಕಲ ಜೀವರಾಶಿಗಳು ನೆಲೆಸಿವೆ ಎಂಬುದನ್ನೂ ಸಹ ತಿಳಿದಿದ್ದಾರೆ. ಬಹುಮುಖ್ಯವಾದ ಸಂಗತಿ ಎಂದರೆ. ದೇವರ ಅಸ್ತಿತ್ವವು ಸುಲಭವಾಗಿ ವೇದ್ಯವಾಗುವುದಿಲ್ಲ. ನಿರಂತರ ಧ್ಯಾನ ಈ ಸಂಕೀರ್ತನ, ಸಮರ್ಪಣಾ ಭಾವಗಳಿದ್ದರೆ ಮಾತ್ರ ಸಾಧ್ಯ. ಇದು ಅನುಭವಕ್ಕೆ ವೇದ್ಯವಾದುದು ಎಂಬುದರಲ್ಲಿ ಸಂಶಯವಿಲ್ಲ. ಕೆಲವರು ತಾವೇ ವೈಜ್ಞಾನಿಕ ರೀತಿಯಲ್ಲಿದ್ದರೆ ಎಲ್ಲವನ್ನೂ ಒಪ್ಪಿಕೊಳ್ಳುತ್ತೇವೆ ಎಂದು ಹೇಳುವ ಅಲ್ಪ ವಿದ್ಯಾಮಹಾಗರ್ವಿಗಳು.



ಗರ್ವಿಗಳು ಭಗವಂತನ ಅಸ್ತಿತ್ವವನ್ನು ಒಪ್ಪುವುದಿಲ್ಲ. ಆದರೆ ಅಂತಹವರ ಬಗ್ಗೆ ನಾವು ಏನೂ ಹೇಳಬೇಕಾದ ಅವಶ್ಯಕತೆ ಇಲ್ಲ. ವಿದ್ವಾಂಸರಾಗಲಿ, ವಿಜ್ಞಾನಿಗಳಾಗಲಿ, ವೈದ್ಯರಾಗಲಿ,ಭೂಸಂಶೋಧಕರಾಗಲಿ, ಗಗನಗಾಮಿಗಳಾಗಲಿ, ಜಲಾಂತರ್ಗಾಮಿಗಳಾಗಲಿ ಎಲ್ಲರು ದೇವರು ಇದ್ದಾನೆಂದು, ಇದು ಶತಷಃ ಸತ್ಯ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಈ ಪ್ರಪಂಚದಲ್ಲಿ ಯಾವ ವಸ್ತುವೂ ನಮ್ಮ ಸ್ವಂತದಲ್ಲಿ ನೀರು,ವಾಯು, ಮಣ್ಣು, ಆಕಾಶ, ಸೂರ್ಯನ ಕಿರಣ- ಯಾವುದೇ ಆಗಲಿ ನಮ್ಮದಲ್ಲ. ಪ್ರತಿ





ಯೊಂದು ದೈವೀಕ ಸೃಷ್ಟಿ. ಮೂಲ ಭೂತ ವಸ್ತುಗಳನ್ನು ಇಟ್ಟುಕೊಂಡು ವೈಜ್ಞಾನಿಕವಾಗಿ ಅನೇಕ ಸಂಶೋಧನೆಗಳನ್ನು ಮಾನವ ಮಾಡುತ್ತಾನೆಯೇ ಹೊರತು. ಅದಕ್ಕೆ ಅವನು ಹೊಸ ಹೊಸ ರೂಪಗಳನ್ನು ಕೊಡುತ್ತಾನೆಯೇ ಹೊರತು ಯಾವುದನ್ನು ಸ್ವಂತವಾಗಿ ಸೃಷ್ಟಿಸಲಾರ. ಅವನು ನೀರನ್ನು ಸೃಷ್ಟಿಸಲು ಸಾಧ್ಯವೇ? ವಾಯುವನ್ನು ಸೃಷ್ಟಿಸಲು ಸಾಧ್ಯವೇ?ಸಕಲ ಜೀವರಾಶಿಗಳಿಗೂ ಅಗತ್ಯವಾದ ರಕ್ತವನ್ನು ಸೃಷ್ಟಿಸಲು ಸಾಧ್ಯವೇ? ಏನೋ ಹೃದಯದ ಆಪರೇಷನ್ ಮಾಡಿ ಈಗಲೇ ಸಾಯುವವನ್ನು ಇನ್ನಷ್ಟು ವರ್ಷಗಳ ಕಾಲ ಬದುಕಲು ನೆರವಾಗುತ್ತಾನೆಯೇ ಹೊರತು ಅವನನ್ನು ಚಿರಂಜೀವಿಯನ್ನಾಗಿ ಮಾಡಲು ಸಾಧ್ಯವೇ? "ಜಾತಸ್ಯ ಮರಣಂ ಧ್ರುವಂ ಧ್ರುವಂ ಜನ್ಮ ಮೃತ ಸ್ಯಚ" ಎಂದು ಶ್ರೀ ಕೃಷ್ಣನ ಮಾತನ್ನು ಕೇಳಿ ಹೇಳಿದರೆ ಒಪ್ಪಿಕೊಂಡರೆ ಸರಿ. "ತೇನವಿನಾ ತೃಣಮಪಿ ನ ಚಲತಿ" - ಎಂಬ ಸತ್ಯಾಂಶವನ್ನು ತಿಳಿದುಕೊಂಡರೆ ಅವನ ಬದುಕು ಸಾರ್ಥಕ ಇರಲಿ. ಈಗ ದೇವರ ಅಸ್ತಿತ್ವವನ್ನು ಆಳ್ವಾರರು ಹೇಗೆ ಅನುಭವಿಸಿ ಆನಂದಿಸಿದ್ದಾರೆ. ಆ ಅನುಭವಾಮೃತವನ್ನು ನಮ್ಮಂತಹ ಹುಲುಮಾನವರಿಗೆ ಹೇಗೆ ಹಂಚಿದ್ದಾರೆ ಎಂಬುದನ್ನು ತಿಳಿಯೋಣ. ಅದಕ್ಕಿಂತಲೂ ಮೊದಲು ದ್ವಾಪರ ಯುಗಾಂತ್ಯ ಕಲಿಯುಗದ ಆರಂಭದಲ್ಲಿ ದ್ರಮಿಡೇಶುಚ ಭೂರಿಷಃಎಂಬಂತೆ ಹನ್ನೆರಡು ಮಂದಿ ವೈಷ್ಣವ ಆಳ್ವಾರರು ಇವರಿ ಗಿಂತಲೂ ಮುಂಚೆ ಮಾಣಿಕ್ಕವಾಚಕರ್,ತಿರುಜ್ಞಾನ ಸಂಬಂದರ್ ಮುಂತಾದ 60 ಮಂದಿ ಶೈವನಾಯನ್‌ಮಾರ್‌ರು ಭಾವೈಕ್ಯಕ್ಕಾಗಿ ನಾಮಭೇದದಿಂದಷ್ಟೇ ತಮಿಳ್ ದಿವ್ಯವಾಙ್ಮಯ ಪೂರವನ್ನೇ ಹರಿಸಿ ಈ ಕಲಿಯುಗವನ್ನು ಪವಿತ್ರವನ್ನಾಗಿ ಮಾಡಿದ ಕೀರ್ತಿಸಲ್ಲುತ್ತದೆ. ನಂತರ ಸುಮಾರು 700 ವರ್ಷಗಳ ನಂತರ ಜೈನ ಬೌದ್ಧಾದಿಗಳ ನೀತಿ ದರ್ಶನಕ್ಕೂ ಇವರೇ ಮೂಲ ಕಾರಣರಾದರು. ಹೀಗಾಗಿ ಈ ಭಕ್ತಿ ಸ್ತೋತ್ರ ಇಡೀ ಭಾರತದಲ್ಲಿ ಹರಿಯಿತು ಎಂಬುದರಲ್ಲಿ ಅಚ್ಚರಿಯೇನಲ್ಲ.

ಈಗಾಗಲೇ ಹೇಳಿದಂತೆ ದ್ವಾಪರಾಂತ್ಯದಲ್ಲಿ ಕಲಿಯುಗದ ಆರಂಭದಲ್ಲಿ ಮೂರು ಆಳ್ವಾರರು ದೇವರ ಹೆಸರನ್ನೇ ಹೇಳದೆ ಅಧ್ಯಾತ್ಮ ರಹಸ್ಯಗಳನ್ನು ತಿಳಿಸಲು ಆರಂಭಿಸಿದರು.ಅವರೇ ಪೊಯ್‌ಗೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್ ಎಂಬುವವರು. ಈ ಮೂವರೂ ಬೇರೆ ಬೇರೆ ದಿವ್ಯ ದೇಶಗಳಲ್ಲಿ ಕಾಣಿಸಿಕೊಂಡ ಅಯೋನಿಜರು. ಅವರಿಗೆ ಭಗವಂತನ ಗುಣಗಾನ ಮಾಡುವುದು ಸಕಲರ ಲೇಸನ್ನು ಬಯಸುವುದೇ ಜೀವನದ ಗುರಿಯಾಗಿದ್ದಿತು.

## ಪೂಲಂಗಿಸೇವೆ

*ಪ್ರತಿ ಗುರುವಾರ ಸಾಯಂಕಾಲ ಶ್ರೀಸ್ವಾಮಿಗೆ ನಡೆಯುವ ತೋಮಾಲೆ ಸೇವೆಯನ್ನು "ಪೂಲಂಗಿಸೇವೆ" ಎನ್ನುತ್ತಾರೆ. ಆದರೆ ಈ ಸೇವೆ ಮಾತ್ರ ಪೂರ್ತಿಯಾಗಿ ಏಕಾಂತದಲ್ಲಿ ನಡೆಯುತ್ತದೆ. ಜಿಯ್ಯರ್ ಅವರು ಕೊಡುವ ಹೂವಿನ ಮಾಲೆಯಿಂದ ಅರ್ಚಕರು ಸ್ವಾಮಿಯನ್ನು ಅಲಂಕರಿಸುವರು. ಹೂವಿನ ಅಂಗಿಯನ್ನು ಧರಿಸಿದಂತೆ ಕಾಣುವರು. ಪೂಲಂಗಿ ಸೇವೆಯ ಅಲಂಕರಣದ ನಂತರ ಪ್ರತಿ ಗುರುವಾರ ರಾತ್ರಿ ಯಾತ್ರಿಕರು ಪೂಲಂಗಿ ಅಲಂಕರಣದಲ್ಲಿ ಇರುವ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ನಯನಾನಂದವಾಗಿ ದರ್ಶನ ಪಡೆದು ಪುಲಕಿತರಾಗುತ್ತಾರೆ. ಸುವಾಸನೆ ಹೊರಚಿಮ್ಮುವ ಪೂಲಂಗಿ ಸೇವೆಯಲ್ಲಿ ಇರುವ ಸ್ವಾಮಿಯ ದರ್ಶನ ಪಡೆದರೆ ಅನೇಕ ಜನ್ಮದಲ್ಲಿ ಮಾಡಿದ ಪಾಪಗಳೆಲ್ಲ,ಆ ಜನ್ಮಾಂತರ ದೋಷಗಳೆಲ್ಲಾ ನಾಶವಾಗುತ್ತದೆ.*





ಕರ್ನಾಟಕದ ವೈಷ್ಣವ ದೇವಾಲಯಗಳು

# ದೊಡ್ಡದಾಳವಟ್ಟದ ಶ್ರೀಲಕ್ಷ್ಮೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
9448386886

ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದಾದ ನರಸಿಂಹನ ಆರಾಧನೆಯು ಕರ್ನಾಟಕದಲ್ಲಿ ಬಹುಹಿಂದಿನಿಂದಲೂ ಪ್ರಚಲಿತದಲ್ಲಿದೆ.

ಶ್ರೀಮನ್ ಮಹಾವಿಷ್ಣುವು ಲೋಕ ಕಂಟಕನಾದ ಹಿರಣ್ಯಕಶ್ಯಪುವನ್ನು ಸಂಹ ರಿಸಲು ತನ್ನ ಭಕ್ತನಾದ ಪ್ರಹ್ಲಾದನ ಕೋರಿಕೆಯಂತೆ ಕಂಬವನ್ನು ಸೀಳಿ ರಕ್ಕಸನನ್ನು ಸಂಹರಿಸಿ ಲೋಕಕಲ್ಯಾಣ ವನ್ನು ಉಂಟು ಮಾಡಿದನೆಂದು ಪುರಾಣ ಗಳು ತಿಳಿಸುತ್ತದೆ.

ಬೆಳಗಾವಿ ಜಿಲ್ಲೆಯ ಹಲಸಿಯಲ್ಲಿ ರುವ ನರಸಿಂಹಮೂರ್ತಿ ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿರುವ ಗುರು ನರ ಸಿಂಹ, ಉತ್ತರ ಕನ್ನಡ ಜಿಲ್ಲೆಯ ಬನ ವಾಸಿಯ ನರಸಿಂಹ, ಶಿವಮೊಗ್ಗ ಜಿಲ್ಲೆ ಕುಬಟೂರು, ಕುಪ್ಪಗದ್ದೆ ಹಾಗೂ ಕೂಡಲಿ ಮುಂತಾದ ಕಡೆಗಳಲ್ಲಿ ಸುಮಾರು 4,5 ನೇ ಶತಮಾನಕ್ಕೆ ಸೇರುವ ಪ್ರಾಚೀನ ನರ ಸಿಂಹನ ಶಿಲ್ಪಗಳಿವೆ.

ಹೊಯ್ಸಳರ ಕಾಲದಲ್ಲಿ ಅನೇಕ ವೈವಿಧ್ಯಮಯ ನರಸಿಂಹನ ದೇವಾಲಯ ಗಳು ನಿರ್ಮಾಣವಾದವು. ಹೊಯ್ಸಳರ ತ್ರಿಕೂಟಾಚಲ ವೈಷ್ಣವ ದೇವಾಲಯಗಳಲ್ಲಿ ನಾರಾಯಣ, ವೇಣುಗೋಪಾಲ ಹಾಗೂ ನರಸಿಂಹನ ಮೂರ್ತಿಗಳಿರುವುದು ಕಂಡು ಬರುತ್ತದೆ.ಉದಾ:ಹೊಸ ಹೊಳಲಿನ ಲಕ್ಷ್ಮೀನರಸಿಂಹ ದೇವಾಲಯ ಜಾವಗಲ್ ಹಾರನಹಳ್ಳಿ, ಜಾವಗಲ್,ಬೆಳವಾಡಿಯ ದೇವಾಲಯಗಳು.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡದಾಳವಟ್ಟವು ಕೂಡ ಕರ್ನಾಟಕದ ಒಂದು ಪ್ರಸಿದ್ಧ ನಾರಸಿಂಹ ಕ್ಷೇತ್ರವಾಗಿರುತ್ತದೆ.

ದೊಡ್ಡದಾಳವಟ್ಟದ ನರಸಿಂಹನನ್ನು ದಳಮಹಾಮುನಿಗಳು ಪೂಜಿಸುತ್ತಿದ್ದ ರೆಂದೂ, ಅದಕ್ಕೆ ಈ ಗ್ರಾಮಕ್ಕೆ ದಾಳವಟ್ಟವೆಂದು ಹೆಸರು ಬಂದಿರುವುದೆಂದು ಹೇಳ ಲಾಗಿದೆ. ನರಸಿಂಹ ದೇವಾಲಯವು ಗರ್ಭಗೃಹ. ಅಂತರಾಳ , ನವರಂಗ, ಮುಖ ಮಂಟಪನನ್ನು ಹೊಂದಿದ್ದು ದೇವಾಲಯಕ್ಕೆ ಹೊಂದಿಕೊಂಡಂತೆ ಲಕ್ಷ್ಮೀ ದೇವಾಲಯ ವಿದೆ. ಮುಖಮಂಟಪದಲ್ಲಿ 6 ಕಂಬಗಳಿದ್ದು ಅವುಗಳ ಮೇಲೆ ಕೃಷ್ಣನ ಬಾಲಲೀಲೆ ಗಳನ್ನೂ, ನರಸಿಂಹನ ವಿವಿಧ ರೂಪಗಳನ್ನೂ ಆಕರ್ಷಕವಾಗಿ ಚಿತ್ರಿಸಲಾಗಿದೆ. ನವರಂಗದ ಬಾಗಿಲುವಾಡದಲ್ಲಿ ಗಜಲಕ್ಷ್ಮಿಯನ್ನು ಚಿತ್ರಿಸಿದ್ದು ಎರಡೂ ಬದಿಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ.

ಶ್ರೀಲಕ್ಷ್ಮೀ ದೇವಾಲಯವು ನರಸಿಂಹ ದೇವಾಲಯದ ಬಲಬದಿಯಲ್ಲಿದ್ದು ನರಸಿಂಹನನ್ನು ದರ್ಶಿಸಿ ನಂತರ ಶ್ರೀಲಕ್ಷ್ಮೀದೇವಾಲಯವನ್ನು ಪ್ರವೇಶಿಸಲು ದ್ವಾರವಿದೆ. ನವರಂಗದಲ್ಲಿ ಆಳ್ವಾರುಗಳು, ಸೂರ್ಯ ಹಾಗೂ ವೀರಭದ್ರನ ಶಿಲ್ಪಗಳನ್ನು ಇರಿಸಲಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಮೂಲದೇವರು ನಿರಾಕಾರ ಸಾಲಿಗ್ರಾಮ ಶಿಲೆಯಾಗಿರುತ್ತದೆ. ಇತ್ತೀಚೆಗೆ ಅಂದರೆ ಕ್ರಿ.ಶ. 1975 ರಲ್ಲಿ ಶ್ರೀಲಕ್ಷ್ಮೀ ನರಸಿಂಹನ ವಿಗ್ರಹವನ್ನು ಭಕ್ತಾದಿಗಳು ಪ್ರತಿಷ್ಠಾಪಿಸಿರುತ್ತಾರೆ.

ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ಸುತ್ತಲೂ ಭಕ್ತಾದಿಗಳು ತಂಗಲು ಮಂಟಪಗಳನ್ನು ನಿರ್ಮಿಸಲಾಗಿದೆ ಹಾಗೂ ದೇವಾಲಯ ವನ್ನು ಪ್ರವೇಶಿಸಲು ಎತ್ತರವಾದ ಪ್ರವೇಶದ್ವಾರವಿದ್ದು ಅಂದವಾದ ರಾಜಗೋಪುರ ವಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರ ತಾಲ್ಲೂಕಿನ ಉಪ್ಪಾಡಿಹಳ್ಳಿ ಯಲ್ಲಿ ದೊರೆತಿರುವ ಶಾಸನದಲ್ಲಿ ವಿಜಯನಗರಸರ ಕಾಲದಲ್ಲಿ ಸ್ಥಳೀಯ ನಾಯಕ ನಾದ ಊಳಿಗದ ಎಲ್ಲೆಯ ಎಂಬ ನಾಯಕನು ತನ್ನ ದೊರೆ ಶ್ರೀಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಕ್ರಿ.ಶ. 1512ರಲ್ಲಿ ದೊಟ್ಟದಾಳವಟ್ಟದ ನರಸಿಂಹ ದೇವರ ದೀಪಾರಾಧನೆಯು ನಿರಂತರವಾಗಿ ನಡೆಯಲು ವ್ಯವಸ್ಥೆ ಮಾಡಿರುವ ಸಂಗತಿ ದೊರೆಯುತ್ತದೆ. ಹೀಗಾಗಿ ದೇವಾಲಯವು ವಿಜಯನಗರಸರ ಕಾಲದಲ್ಲಿ ಸುಮಾರು ಐನೂರು ವರ್ಷಗಳ ಹಿಂದೆ ನಿರ್ಮಿತವಾಗಿದೆ ಎಂದು ಖಚಿತವಾಗಿ ಹೇಳಬಹುದು. ಶಾಸನ ದಲ್ಲಿ ದಾಳವಟ್ಟದ ನರಸಿಂಹನಿಗೆ ಅಹೋ ಬಲ ನರಸಿಂಹನಿಂತಲೂ ಹೆಸರಿದ್ದುದು ತಿಳಿದು ಬರುವುದು. ಮಧುಗಿರಿ ಮಹಾನಾಡ ಪ್ರಭುಗಳು ದೇವಾಲಯವನ್ನು ವಿಸ್ತರಿಸಿರು ವರು. ಶಿಥಿಲಗೊಂಡ ರಾಜಗೋಪುರವನ್ನು ಹಾಗೂ ಶಿಖರಗಳನ್ನು ಭಕ್ತಾದಿಗಳು ಪುನರ್ ನಿರ್ಮಿಸಿರುತ್ತಾರೆ. ಈ ದೇವಾಲಯದ ಕೆಲವು ಗಂಟೆಗಳು, ಲೋಹದ ವಸ್ತುಗಳನ್ನು ದಾನಿ ಗಳು ಮಾಡಿಸಿಕೊಟ್ಟಿರುವುದಕ್ಕೆ ಶಾಸನ ಗಳಿವೆ. ಮಧುಗಿರಿಯ ಮಹಾನಾಡ ಪ್ರಭುಗಳ







ಚರಿತ್ರೆಯ ಸುರುಳಿಗಳಲ್ಲಿ ಈ ದೇವಾಲಯದ ಪೂಜಾ ಕಾರ್ಯಕ್ಕೆ ಹಲವಾರು ದತ್ತಿಗಳನ್ನು ಬಿಟ್ಟಿರುವ ಉಲ್ಲೇಖವು ದೊರೆಯುತ್ತದೆ.

ದೊಡ್ಡದಾಳವಟ್ಟದ ಶ್ರೀಲಕ್ಷ್ಮೀನರಸಿಂಹ ದೇವಾಲಯದ ನಿರ್ಮಾಣದ ಬಗ್ಗೆ ಒಂದು ಐತಿಹ್ಯವಿದೆ. ಹಿಂದೆ ವ್ಯಾಪಾರ ನಿಮಿತ್ತ ವರ್ತಕರು ಒಂದು ಊರಿನಿಂದ ಒಂದು ಊರಿಗೆ ಪ್ರಯಾಣ ಮಾಡುತ್ತಿದ್ದರು. ಅದೇ ರೀತಿ ವರ್ತಕರ ಒಂದು ತಂಡವು ದಾಳವಟ್ಟದಲ್ಲಿ ರಾತ್ರಿ ತಂಗಿರುತ್ತದೆ. ರಾತ್ರಿ ಅಡುಗೆಯನ್ನು ತಯಾರಿಸಲು ಒಲೆಯನ್ನು ಹೂಡಲು ಅಲ್ಲಿ ದೊರೆತ ಕಲ್ಲೊಂದನ್ನು ತಂದು ಒಲೆಯನ್ನು ತಯಾರಿಸಿ ಬೆಂಕಿ ಹಚ್ಚಿಸಿ ಅಡುಗೆಯನ್ನು ಪ್ರಾರಂಭಿಸುತ್ತಾರೆ. ಆಗ ಅಡುಗೆಯು ರಕ್ತವರ್ಣವನ್ನು ತಾಳುತ್ತದೆ ಮತ್ತೆ ಮತ್ತೆ ಪ್ರಯತ್ನಿಸಿದರೂ ಅದೇ ರಕ್ತವರ್ಣವನ್ನು ತಾಳುತ್ತದೆ. ಆಗ ವರ್ತಕರಿಗೆ ತಮ್ಮ ತಪ್ಪಿನ ಅರಿವಾಗಿ ಶಿಲೆಯನ್ನು ಅಲ್ಲಿಯೇ ಪ್ರತಿಷ್ಠಾಪಿಸಿದರೆಂದು ಐತಿಹ್ಯವಿದೆ.

ಹಿರಣ್ಯಕಶ್ಯಪುವಿನ ಮೇಲೆ ದಾಳಿ ಮಾಡಿದ ನರಸಿಂಹ ಸ್ವಾಮಿಯು ನಂತರ ಇಲ್ಲಿ ಬಂದು ಶಾಂತ ಮೂರ್ತಿಯಾದನೆಂದು ಅದಕ್ಕೆ ಸ್ವಾಮಿಗೆ ದಾಳಿ ನರಸಿಂಹನೆಂಬ ಹೆಸರು ಬಂದಿರುವುದೆಂತಲೂ ಹೇಳುವರು. ದೊಡ್ಡದಾಳವಟ್ಟದ ನರಸಿಂಹ ಸ್ವಾಮಿಯನ್ನು ಋಣಭಾರ ಪರಿಹಾರಕ ನರಸಿಂಹನೆಂತಲೂ ಕರೆಯುವರು. ಈ ದೇವಾಲಯಕ್ಕೆ ಬಂದು ಸ್ವಾಮಿಯ ಸೇವೆಯನ್ನು ಮಾಡಿದರೆ ಸಾಲಗಳ ಬಾಧೆಯಿಂದ ಮುಕ್ತರಾಗುವರೆಂಬ ನಂಬಿಕೆ ಇಲ್ಲಿಯ ಭಕ್ತಾದಿಗಳಿಗಿದೆ.

ದೊಡ್ಡದಾಳವಟ್ಟದ ಆ ನರಸಿಂಹಸ್ವಾಮಿಗೆ ಪಾಂಚರಾತ್ರಾಗಮರೀತ್ಯಾ ಆಷಾಢ ಶುದ್ಧ ದ್ವಾದಶಿಯಂದು ಬ್ರಹ್ಮ ರಥೋತ್ಸವವು ಬಹಳ ಅದ್ದೂರಿಯಾಗಿ ಸಹಸ್ರಾರು ಭಕ್ತಾದಿಗಳ ಸಮ್ಮುಖ ವೈಭವವಾಗಿ ಜರುಗುವುದು. ನಾಲ್ಕು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ಏಕಾದಶಿಯ ದಿನ ಧ್ವಜಾವರೋಹಣ ಹಾಗೂ ಕಲ್ಯಾಣೋತ್ಸವ, ದ್ವಾದಶಿಯ ದಿನ ಬ್ರಹ್ಮ ರಥೋತ್ಸವ, ತ್ರಯೋದಶಿಯ ದಿನ, ಪಾರಾಟೋತ್ಸವ, ಚತುರ್ದಶಿಯ ದಿನ ವಸಂತೋತ್ಸವ ಹಾಗೂ ಧ್ವಜಾವರೋಹಣದೊಂದಿಗೆ ಉತ್ಸವಕ್ಕೆ ತೆರೆ ಬೀಳುವುದು.

ಪ್ರತಿತಿಂಗಳ ಸ್ವಾತಿ ನಕ್ಷತ್ರದಲ್ಲಿ ವಿಶೇಷ ಪಂಚಾಮೃತ ಅಭಿಷೇಕ, ತೋಮಾಲೆಸೇವೆ, ಸುದರ್ಶನ ನಾರಸಿಂಹ ಹೋಮ, ಅನ್ನಸಂತರ್ಪಣೆ ಏರ್ಪಡಿಸಲಾಗುತ್ತದೆ. ಶ್ರೀ ಲಕ್ಷ್ಮೀನರಸಿಂಹ ಜಯಂತಿಯಂದು ಸ್ವಾಮಿಗೆ ಅಷ್ಟೋತ್ತರ ಕಳಶಾಭಿಷೇಕ ಹಾಗೂ ಉತ್ಸವಗಳು ಬಹು ಪಾಂಗಿತವಾಗಿ ನೆರವೇರುತ್ತದೆ.

ದಾಳವಟ್ಟದ ನರಸಿಂಹ ಸ್ವಾಮಿಯ ರಥೋತ್ಸವದ ದಿನವೇ ಸಮೀಪದ ಕೊಡಿಗೇನ ಹಳ್ಳಿಯಲ್ಲಿರುವ ನರಸಿಂಹ ದೇವಾಲಯದಲ್ಲಿ ರಥೋತ್ಸವವಿರುತ್ತದೆ. ನರಸಿಂಹ ದರ್ಶನ ಪಡೆದ ಭಕ್ತರು ನಂತರ ಕೊಡಿಗೇನ ಹಳ್ಳಿಗೂ ಹೋಗಿ ಅಲ್ಲಿರುವ ದೇವರನ್ನು ದರ್ಶಿಸುವ ವಾಡಿಕೆ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ದೊಡ್ಡದಾಳವಟ್ಟದ ನರಸಿಂಹಸ್ವಾಮಿಗೆ ಹಿಂದೂಪುರ, ಮಧುಗಿರಿ, ಕೋಲಾರ, ಗೌರಿಬಿದನೂರು, ತುಮಕೂರು, ಚಿಕ್ಕಬಳ್ಳಾಪುರ, ಮುಂತಾದ ಊರುಗಳಲ್ಲಿ ಭಕ್ತಾದಿಗಳಿರುವರಲ್ಲದೆ ಬೆಂಗಳೂರಿನಲ್ಲೂ ಸಾವಿರಾರು ಭಕ್ತರಿರುವುದು ವಿಶೇಷ.

ದೇವಾಲಯವು ಅಭಿವೃದ್ಧಿಯತ್ತ ತನ್ನ ದಾಪುಗಾಲು ಇಡುತ್ತಿದೆ. ದೇವಾಲಯದ ಪ್ರಾಕಾರದ ಸುತ್ತಲೂ ಭಕ್ತಾದಿಗಳು ಇಳಿದುಕೊಳ್ಳಲು ಕೊಠಡಿಗಳನ್ನು ನಿರ್ಮಿಸಿರುತ್ತಾರೆ. ಈ ದೇವಾಲಯದ ಸಮೀಪ ಇತ್ತೀಚೆಗೆ ಒಂದು ಸುಸಜ್ಜಿತವಾದ ಛತ್ರವನ್ನು ಭಕ್ತಮಂಡಳಿಯವರು ನಿರ್ಮಿಸಿರುತ್ತಾರೆ.

ದೊಡ್ಡದಾಳವಟ್ಟ ನರಸಿಂಹಸ್ವಾಮಿಯ ದೇವಾಲಯವು ಪ್ರತಿದಿನ ಬೆಳಗ್ಗೆ 7-30 ರಿಂದ 12-30 ಗಂಟೆಯವರೆಗೂ ಹಾಗೂ ಸಂಜೆ 4-00 ರಿಂದ 6-00 ಗಂಟೆಯವರೆಗೂ ತೆರೆದಿರುತ್ತದೆ. ಅಲ್ಲದೇ ಶನಿವಾರ, ಭಾನುವಾರ ಹಾಗೂ ವಿಶೇಷ ದಿನಗಳಲ್ಲಿ ಬೆಳಗ್ಗೆ 7-30 ರಿಂದ ಸಂಜೆ 6-00 ಗಂಟೆಯ ವರೆಗೂ ತೆರೆದಿರುವುದು.

**ಹೀಗೆ ಬನ್ನಿ:**

ಮಧುಗಿರಿ - ಹಿಂದೂಪುರ ರಸ್ತೆಯಲ್ಲಿ ಸುಮಾರು 9 ಕಿ.ಮೀ. ಬಂದರೆ ಪುರವರ ಸಿಗುತ್ತದೆ. ಪುರವರದಿಂದ ಎಡಕ್ಕೆ ಇಟಕ ದಿಬ್ಬನ ಹಳ್ಳಿಯ ಕಡೆಗೆ (ಐ.ಡಿ.ಹಳ್ಳಿ) ತಿರುಗಿ (ದೂರ 18 ಕಿ.ಮೀ.) ನಂತರ ಬಲಕ್ಕೆ ತಿರುಗಿ 5 ಕಿ.ಮೀ ದೂರ ಕ್ರಮಿಸಿದರೆ ದೊಡ್ಡದಾಳವಟ್ಟವು ದೊರೆಯುತ್ತದೆ. ಮಧುಗಿರಿಯಿಂದ ದೊಡ್ಡದಾಳವಟ್ಟವು ಸುಮಾರು 32 ಕಿ.ಮೀ. ಆಗುತ್ತದೆ.

ಹಿಂದೂಪುರದ ಕಡೆಯಿಂದ ಬರುವವರು ಅದೇ ಹಿಂದೂಪುರ - ಮಧುಗಿರಿ ರಸ್ತೆಯಲ್ಲಿ ಮುದ್ದೇನಹಳ್ಳಿ ಗೇಟಿಗೆ ಬಂದು ಬಲಕ್ಕೆ ತಿರುಗಿ ಮುದ್ದೇನಹಳ್ಳಿ-ಚಿಕ್ಕದಾಳವಟ್ಟದ ಮೂಲಕ ದೇವಾಲಯವನ್ನು ತಲುಪಬಹುದು. (ಒಟ್ಟು ದೂರ ಸುಮಾರು 15 ಕಿ.ಮೀ.)



# ಆಯುರ್ವೇದ ಮತ್ತು ನಾವು

## ಭಾಗ - ೧

- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

ಆಯುರ್ವೇದ ಎಂದರೆ ನಾಲ್ಕು ವೇದಗಳಲ್ಲಿ ಒಂದಾದ ಅಥರ್ವಣವೇದದ ಉಪವೇದ ಎಂದು ತಿಳಿಯಲಾಗಿದೆ. ಇದು ಬ್ರಹ್ಮನಿಂದಲೇ ಬಂದುದೆಂಬುದು ನಮ್ಮ ಪ್ರಾಚೀನರ ನಂಬಿಕೆಯಾಗಿತ್ತು. ಆದ್ದರಿಂದ ಆಯುರ್ವೇದವು ವೇದದಷ್ಟೇ ಪ್ರಾಚೀನ ಮತ್ತು ಅದರಂತೆ ಅಪೌರುಷೇಯ. ದಕ್ಷ, ಪ್ರಜಾಪತಿ, ಅಶ್ವಿನಿ ದೇವತೆಗಳು. ಇಂದ್ರ. ಹೀಗೆ ಇವರೆಲ್ಲರಿಗೆ ಪರಂಪರಾಗತವಾಗಿ ಬಂದ ಈ ವಿದ್ಯೆ ಅನಂತರ ಇಂದ್ರನಿಂದ ಭರದ್ವಾಜನಿಗೂ ಅವನಿಂದ ಇತರ ಋಷಿಗಳಿಗೂ ಉಪದೇಶಿಸಲ್ಪಟ್ಟಿದೆ.

ಭಾರತೀಯ ವೈದ್ಯಶಾಸ್ತ್ರವೇ ಆಯುರ್ವೇದ. ನಮ್ಮ ಕಣ್ಣಿಗೆ ಕಾಣಿಸುವ ಎಲ್ಲ ದ್ರವ್ಯಗಳೂ ಪಂಚಮಹಾಭೂತಗಳು ಸಂಘಟನೆಯಾಗಿದೆ. ಪಂಚಮಹಾಭೂತಗಳೆಂದರೆ ಪೃಥ್ವಿ, ನೀರೂ ತೇಜ, ವಾಯು ಮತ್ತು ಆಕಾಶ ಚೇತನಾ ದ್ರವ್ಯವೆನಿಸಿದ ಆತ್ಮನ ಸಂಯೋಗದಿಂದ ಮನುಷ್ಯನು ಪಂಚಭೂತ ಮತ್ತು ಆತ್ಮ ಸೇರಿ ಆಗಿರುವ ಪ್ರಾಣಜೀವಿ. ಇತರ ಪ್ರಾಣಿಗಳು ಸಸ್ಯ ,ಖನಿಜ, ಗಾಳಿ, ನೀರು, ಬೆಳಕು, ಭೂಮಿ, ಮುಂತಾದುವುಗಳನ್ನು ಯುಕ್ತಿಯಿಂದ ಉಪಯೋಗಿಸಿಕೊಳ್ಳುತ್ತ ಮನುಷ್ಯ ತನ್ನ ಜೀವನವನ್ನು ಸಾಗಿಸುತ್ತಾನೆ.

ಬದುಕಲು ಆರೋಗ್ಯ ಮುಖ್ಯ ಆರೋಗ್ಯವೆಂದರೆ ರೋಗವಿಲ್ಲದಂತೆ ನೋಡಿಕೊಳ್ಳುವುದು.ಆರೋಗ್ಯ ರಕ್ಷಣೆಯೆಂದರೆ ಸಾಧನ ಚತುಷ್ಟಯಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಆಧಾರವಾಗಿರುವ ಶರೀರವನ್ನು ಯಾವ ಬಾಧೆಯಾ ಇಲ್ಲದಂತೆ ಬಹು ದಿನಗಳ ಕಾಲ ಕಾಪಾಡುವುದೇ ಆಗಿದೆ.

ಆರೋಗ್ಯವೆಂದರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ನೆಮ್ಮದಿಯಿಂದಿರುವುದು. ಇದನ್ನೇ ಹಿರಿಯರು “ಸಂಸ್ಕಾರ” ಎಂದಿದ್ದಾರೆ. ಈ ಆರೋಗ್ಯವು ಆಹಾರ ದೇಶ, ಕಾಲ, ನಿದ್ರೆ, ಬ್ರಹ್ಮಚರ್ಯ ನಡೆವಳಿಕೆ ಮೊದಲಾದವುಗಳನ್ನು ಅವಲಂಭಿಸಿದೆ ಇವುಗಳಲ್ಲಿ ವ್ಯತ್ಯಾಸವಾದರೆ ಆರೋಗ್ಯ ಹಾಳಾಗುತ್ತದೆ. ಈ ಹಾಳಾಗುವಿಕೆಯನ್ನು “ರೋಗ” ಎನ್ನುತ್ತಾರೆ.

ದೇಹವು ಆರೋಗ್ಯದಿಂದಲೀ ಅಥವಾ ಅನಾರೋಗ್ಯದಿಂದಿರಲಿ, ಅದಕ್ಕೆ ಪಂಚಭೂತಗಳೇ ಕಾರಣ ಶರೀರ ಮತ್ತು ಮಾನಸ್ಸಿನ ಪ್ರತಿಕೂಲ ಪರಿಸ್ಥಿತಿಯೇ ಅನಾರೋಗ್ಯ. ಪಂಚೇಕೃತವಾದ ಭೌತಿಕ ದ್ರವ್ಯಗಳಲ್ಲಿ ಪ್ರಧಾನವಾದುವುಗಳೆಂದರೆ ವಾಯು ಅಗ್ನಿ ಮತ್ತು ನೀರು. ಇವು ಶರೀರದಲ್ಲಿ ವಾತ, ಪಿತ್ತ ಮತ್ತು ಕಫದ ರೂಪದಲ್ಲಿರುತ್ತದೆ. ಇದನ್ನೇ ತ್ರಿದೋಷಗಳು ಎನ್ನುತ್ತಾರೆ.

ತ್ರಿದೋಷಗಳ ಗುಣಕರ್ಮಗಳು ಶರೀರದ ಅವಯವಗಳಿಗೆ ಪೂರಕವೂ ಸಮಾನವೂ ಆಗಿದ್ದರೆ ದೇಹ ಪೋಷಣೆಯನ್ನು ವಿಷಮವಾಗಿದ್ದರೆ ರೋಗ, ತನ್ಮೂಲಕ ಮರಣವನ್ನು ಉಂಟು ಮಾಡಬಲ್ಲವು. ನಿತ್ಯ ಜೀವನದಲ್ಲಿ ಆಹಾರಾದಿಗಳ ವ್ಯತ್ಯಾಸವಾಗುತ್ತಿದ್ದು ವಾತ. ಪಿತ್ತ ಮತ್ತು ಕಫಗಳ ಹೆಚ್ಚು ಕಡಿಮೆಯಾಗಿ ಧಾತುಗಳನ್ನು ದೋಷಿಸುವುದರಿಂದ ಇವುಗಳಿಗೆ ದೋಷಗಳೆಂದು ಕರೆಯುತ್ತಾರೆ.

ಧಾತುಗಳು ಬಲಿಷ್ಠವಾಗಿರುವವರೆಗೂ ಆಹಾರಾದಿಗಳ ಹೆಚ್ಚು ಕಡಿಮೆಯಿಂದ ಯಾವ ದೇಹ ತೊಂದರೆಯೂ ಆಗಲಾರದು. ಧಾತುಗಳು ಬಲಿಷ್ಟವಾಗಿರುವಾಗ ದೋಷಗಳ ಬಲ ಕಡಿಮೆಯಾಗಿರುವುದು. ಆದರೆ ಧಾತುಗಳು ಬಲಹೀನವಾಗಿದ್ದರೆ ದೋಷಗಳು ವಿಜೃಂಭಿಸುವುವು ಈ ದೋಷಗಳು ರೋಗಕ್ಕೆ ಕಾರಣವಾಗುತ್ತವೆ. ವ್ಯಾಯಾಮ, ಚಿಂತನೆ, ಸಮತೂಕದ ಆಹಾರ, ವಿಶ್ರಾಂತಿ ಹಸಿವು ನೆಮ್ಮದಿ, ಧ್ಯಾನ, ನಿರ್ಮಲತೆ ಇವು ಮನುಷ್ಯನ ಆರೋಗ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಇವು ಸಹಾ ಹಿತಮಿತವಾಗಿರಬೇಕು. ನಮಗೆ ಏನುಬೇಕು, ಎಷ್ಟು ಬೇಕು, ಏಕೆ ಬೇಕು ಎಂಬುದನ್ನು ತಿಳಿದಷ್ಟು ನಾವು ಆರೋಗ್ಯವಂತರಾಗಿರಬಹುದು.ಇದೇ ಆಯುರ್ವೇದದ ಮುಖ್ಯಸೂತ್ರ.

# ಪುಸ್ತಕ ವಿಮರ್ಶೆ




**ಪುಸ್ತಕದ ಹೆಸರು :** ದೇವರಾಯನ ದುರ್ಗ ದಿವ್ಯದರ್ಶನ

**ಲೇಖಕರು :** ಡಾ॥ ಕೆ.ಜಿ.ಲಕ್ಷ್ಮೀನಾರಾಯಣಪ್ಪ

**ದೂರವಾಣಿಸಂಖ್ಯೆ:** 9845757544

**ಪುಟಗಳು :** 416

**ಬೆಲೆ :** ರೂ. 500/-

**ಮುದ್ರಣ:** ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ಕಲ್ಯಾಣೋತ್ಸವ ಸಮಿತಿ (ರಿ) ಚಾಮರಾಜ ಪೇಟೆ. ಬೆಂಗಳೂರು

ವಿಭಿನ್ನ ವೃತ್ತಿ-ಪ್ರವೃತ್ತಿಯ ಲಕ್ಷ್ಮೀನಾರಾ ಯಣಪ್ಪನವರು ಈ ಕೃತಿಯಲ್ಲಿ ದೇವರಾಯನ ದುರ್ಗದ ದಿವ್ಯದರ್ಶನ ದೊಂದಿಗೆ ತುಮಕೂರು ಜಿಲ್ಲೆಯ ದೇವಾಲಯಗಳನ್ನು ಪರಿಚಯ ಮಾಡಿ ಕೊಟ್ಟಿದ್ದಾರೆ. ದೇಗುಲಗಳ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯನ್ನು ಪತ್ತೆ ಹಚ್ಚಿ ಓದುಗರಿಗೆ ಹಾಗೂ ಪ್ರವಾಸಿಕರಿಗೆ ಒಂದು ಉತ್ತಮ ಕೈಪಿಡಿಯನ್ನು ಕೊಡುಗೆಯಾಗಿ ನೀಡಿದ್ದಾರೆ.

ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳಾದ ಶಿವಗಂಗೆ, ಸಿದ್ಧಗಂಗೆ, ಕೈದಾಶ,ಗೊರವನಹಳ್ಳಿ, ಸಿದ್ಧರಬೆಟ್ಟ ಮಧುಗಿರಿ,ಮಿಡಿಗೇರೆ, ಹೆಬ್ಬೂರು, ದೇವ ರಾಯನ ದುರ್ಗ ಮೊದಲಾದ ದೇವಾಲಯಗಳು ಹಾಗೂ ಅಲ್ಲಿನ ವಿಶೇಷಗಳು ಉತ್ಸವಗಳು, ಪೂಜಾವಿಧಿಗಳ ವಿವರಗಳನ್ನು ಈ ಕೃತಿಯಲ್ಲಿ ತಿಳಿಸಿಕೊಟ್ಟಿದ್ದಾರೆ.

ದೇವಾಲಯಗಳ ಬಗೆಗಿನ ಅವರ ಆಸಕ್ತಿ ಅಭಿಮಾನಿಗಳೇ ಈ ಕೃತಿಯನ್ನು ರಚಿಸಲು ಅವರಿಗೆ ಪ್ರೇರಣೆಯಾಗಿರಬಹುದು. ಇದಕ್ಕಾಗಿ ಅವರು ವಿವಿಧ ದೇವಾಲಯಗಳಿಗೆ ಭೇಟಿನೀಡಿ, ವಿಷಯ ಸಂಗ್ರಹಿಸಿ, ಅಧ್ಯಯನ ಮಾಡಿ, ವಿಶ್ಲೇಷಿಸಿ ಈ ಗ್ರಂಥವನ್ನು ರಚಿಸಿದ್ದಾರೆ. ಇದು ಅವರಲ್ಲಿನ ಸಂಶೋಧನಾಶಕ್ತಿ ಹಾಗೂ ಇತಿಹಾಸ ಪುರಾಣಗಳ ಬಗೆಗಿನ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ದೇವಾಲಯಗಳನ್ನು ಪರಿಚಯಿಸಿರುವ ವಿಶಿಷ್ಟ ಕೃತಿಯಾಗಿದೆ.

ಸರಳ ಸುಂದರ ಭಾಷೆಯಲ್ಲಿ ದೇವಾಲಯಗಳ ಸಾಂಸ್ಕೃತಿಕ ಮಹತ್ವವನ್ನು ವಸ್ತು ನಿಷ್ಠವಾಗಿ ನಿರೂಪಿಸಿದ್ದಾರೆ. ಕರ್ನಾಟಕದ ಸಂಸ್ಕೃತಿಯ ಅಧ್ಯಯನಕ್ಕೆ ಹಾಗೂ ದೇಗುಲ ವೀಕ್ಷಣಾರ್ಥಿಗಳಿಗೆ ಇದೊಂದು ಮಾರ್ಗದರ್ಶಕವಾದ ಕೈಪಿಡಿ ಯಾಗಬಲ್ಲದೆಂದು ನಿಸ್ಸಂಶಯವಾಗಿ ಹೇಳಬಹುದು.

ಪ್ರಾಧ್ಯಾಪಕರು ಸಂಶೋಧಕರು ಡಾ॥ಎಂ.ಚಿದಾನಂದ ಮೂರ್ತಿಯವರು ಈ ಕೃತಿಗೆ ಮುನ್ನುಡಿ ಬರೆದಿದ್ದು ಪ್ರೊ॥ಮಲ್ಲೆಪುರಂ ವೆಂಕಟೇಶ್ ಈ ಗ್ರಂಥದ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿರುವುದು ಹೆಗ್ಗಳಿಕೆಯೆನಿಸಿದೆ.

ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕಗಳಾದ ದೇವಾಲಯಗಳ ಬಗ್ಗೆ ಉತ್ತಮ ಕೃತಿಯನ್ನು ರಚಿಸಿಕೊಟ್ಟ ಆ ಮೂಲಕ ನಮ್ಮ ಪರಂಪರೆಯನ್ನು ದಾಖಲಿಸಿದ ಲೇಖಕ ಕೆ.ಜಿ.ಲಕ್ಷ್ಮಿನಾರಾಯಣಪ್ಪ ಅಭಿನಂದನಾರ್ಹರು.

ದೇವಾಲಯಗಳ ವಾಸ್ತುಶಿಲ್ಪ ವೈಭವವನ್ನು ಬಿಂಬಿಸುವ ಸುಂದರವಾದ ವರ್ಣಚಿತ್ರಗಳಿಂದ ಕೂಡಿದ ಈ ಕೃತಿಯ ಅಕ್ಷರ ಅನ್ನದಾಸೋಹಿ ಸಿದ್ಧಗಂಗೆಯ ಶ್ರೀಶ್ರೀಶ್ರೀಶಿವಕುಮಾರ ಸ್ವಾಮಿಗಳ ಆಶೀರ್ವಚನಗಳನ್ನೊಳಗೊಂಡಿದೆ.

- ಪುಸಕ ಪರಿಚಯ : ಬಿ.ಎಸ್. ರಾಮಮೂರ್ತಿ

94497 50618



ಧಾರಾವಾಹಿ - 3

# ಶ್ರೀವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್

**ಅಧ್ಯಾಯ -3**

## ಖನಿಜ ಸಂಪತ್ತು

ಇಲ್ಲಿನ ಪದರುಗಲ್ಲುಗಳಲ್ಲಿ ಧಾರವಾಡದ ಅಂದಿನ ಕಾಲಕ್ಕೆ ಸಂಬಂಧಿಸಿದ ಕಬ್ಬಿಣದ ಅದಿರು ದೊರೆಯುವುದು. ಕೆಲಕಡೆ ನಿರ್ಯಾತವೂ ಆಗುವುದಾದರೂ ಅದರಲ್ಲಿನ ಕಬ್ಬಿಣದ ಅಂಶ ಅರವತ್ತು ಶತಾಂಶಕ್ಕೂ ಕಡಿಮೆ ಹಾಗೂ ಗುಣಮಟ್ಟವು ಕೆಳಮಟ್ಟದ್ದು. ಚಿನ್ನ , ಸೀಸ, ಹಲವೆಡೆಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ದೊರೆಯುವುದು. ಜಮೀನ್ದಾರರ ಕಾಲದ ಗಣಿಗಳನ್ನು ಮುಚ್ಚಿ ಬಹುಕಾಲವಾಗಿದೆ.

## ಸಸ್ಯ ಸಂಪತ್ತು

ಒಂದು ಪ್ರದೇಶದ ಇಡೀ ಅಭಿವೃದ್ಧಿಯ ಸಾಮಾನ್ಯ ಸ್ವರೂಪಗಳನ್ನು ಗುರುತಿಸಲು ಅಲ್ಲಿನ ಸಸ್ಯಸಂಪತ್ತು ಅಳತೆಗೋಲಾದರೂ,ಅಲ್ಲಿನ ಜೈವಿಕ ಚಟುವಟಿಕೆಯಿಂದ ಪರಿಸರದ ಯಶಸ್ಸು-ಬಹುತೇಕ ಕುಂಠಿತವಾಗುತ್ತದೆ. ಜೈವಿಕ ಚಟುವಟಿಕೆ ಇಡೀ ಜಿಲ್ಲೆಯಲ್ಲಿ ಅತಿ ಸಾಂಧ್ರವಾಗಿದ್ದು,ಇಲ್ಲಿ ಸಸ್ಯಶಾಸ್ತ್ರ ಸಂಶೋಧಕನಿಗೆ ವಿಶಿಷ್ಟವಾದ ಸಸ್ಯರಾಶಿ ದೊರೆಯುತ್ತದೆ. ವಾತಾವರಣ,ಮೇಲ್ಮೈ,ಲಕ್ಷಣ,ಭೂಸಾರಗಳು ಈ ಪ್ರಾಂತದ ಸಸ್ಯ ವರ್ಗವನ್ನು ಪ್ರಭಾವಿ ಸಿದೆ.ಹವಾಗುಣ ಇಡಿಯಾಗಿ ಅನುಕೂಲಕರವಾದದ್ದು. ಸಿಂಹಾಚಲ ಹಾಗೂ ತಿರುಪತಿ ಗಳಲ್ಲಿನ ಪದರಗಲ್ಲುಗಳ ಪರ್ವತಾವಳಿ ಬಹುತೇಕ ತಮ್ಮೊಡನೆ ಕೆಂಪುಮೆಕ್ಕಲು ಮಣ್ಣನ್ನು ಅದರೊಡನೆಯೇ ಸೇರಿದ ಕಾಡುಗಳನ್ನೂ ಎತ್ತರವಾದ ಮೈದಾನಗಳನ್ನೂ,ಒಣ ಎಲೆಗಳ ಮರಗಳನ್ನೂ ಹೊಂದಿವೆ. ಚಾಮಲ,ಮಾಮಂಡೂರು, ತಲಕೋನ ಕಣಿವೆಗಳಲ್ಲಿ ಮಣ್ಣಿನ ಅಳತೆ ಹೆಚ್ಚಾಗಿದ್ದು,ಶುಷ್ಕ ನಿತ್ಯ ಹರಿದ್ವರ್ಣದ ಸಸ್ಯಗಳೂ ಎಪಿಫೈಟಿಕ್ ಸಸ್ಯಗಳೂ ಕಂಡು ಬರುತ್ತವೆ. ಕಲ್ಲು ಒಡೆದು ಜೀರ್ಣವಾಗುವುದರಲ್ಲಿ ಈ ಸಸ್ಯಗಳ ಪಾತ್ರ ಹಿರಿದು.

ಮಿಕ್ಕಂತೆ ಪರ್ವತ ಪ್ರದೇಶಗಳು ಹೊರತಾದ ಪ್ರದೇಶ,ಕಾಯ್ದಿಟ್ಟ ಕಾಡುಗಳು ಶುಷ್ಕ ಕುರುಚಲ ತರುಗಳ ಬೀಡುಗಳಾಗಿವೆ. ಇದು ಪಶ್ಚಿಮದ ಎತ್ತರ ಪ್ರದೇಶದಲ್ಲಿ ಮುಖ್ಯವಾಗುತ್ತದೆ. ನಡುನಡುವೆ ಕಲ್ಯಾಣಿ,ಸ್ವರ್ಣಮುಖಿ, ಕುಶಸ್ಥಲಿ,ಪಾಲಾರ್ ಮೊದಲಾದ ನದಿಗಳನ್ನು ಸೇರುವ ಹಲವಾರು ಹೊಳೆಗಳಿಂದಾದ ತಗ್ಗು ತೆವರುಗಳನ್ನು ಕಾಣಲಿಕ್ಕುಂಟು.ಅನೇಕ ಕಡೆ ಈ ಹೊಳೆಗಳಿಗೆ ಅಡ್ಡಕಟ್ಟಿ ಕೆರೆಗಳನ್ನಾನಿಸಿ ಭತ್ತ ಮೊದಲಾದ ಬೆಳೆ ತೆಗೆಯುವರು. ಈ ತೇವದ ಭೂಮಿಯ ಬಳಿಯಲ್ಲಿ ಹಲವು ರೀತಿಯ ಕಾಡುಜಾಲಿಯ ತರುಗಳೂ ಮಾವಿನ ಮರಗಳೂ

ಉಂಟು. ಈ ಹೊಳೆಯ ದಡಗಳಲ್ಲಿ ಹುಲ್ಲೂ ಹಸನಾಗಿ ಬೆಳೆದಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಹುಣಿಸೆಯ ಮರಗಳು ಹೆಚ್ಚಾಗಿದ್ದರೂ ಈಗೀಗ ಅವುಗಳನ್ನು ವಿವಿಧ ಕಾರಣಗಳಿಂದಾಗಿ ಕಡಿಯಲಾಗುತ್ತಿದೆಯಾಗಿ, ಕಡಿಮೆಯಾಗುತ್ತಿವೆ.

**ಕಾಡುಗಳು-**

ತಿರುಮಲೆಯಿರುವ ಚಿತ್ತೂರು ಜಿಲ್ಲೆಯಲ್ಲಿನ ಒಟ್ಟು 27.4 ಶತಾಂಶ ಕಾಡುಗಳಾಗಿವೆ. ಹಿಂದಿನ ಒಂದು ದಶಕ ದಿಂದ ಸರಕಾರ ಇಲ್ಲಿನ ಅರಣ್ಯವನ್ನು ಬೆಳಸಲೆಂದು ಖಾಸಗೀ ಜಮೀನುಗಳನ್ನು ಪರಿಹಾರ ನೀಡಿ ಪಡೆಯುತ್ತಿದೆ. (ತಿ.ತಿ.ದೇವಸ್ಥಾನಗಳು ತಿರುಮಲೆಯ ಅರಣ್ಯವನ್ನು ಹೆಚ್ಚಿಸಲು ಶ್ರೀವೇಂಕಟೇಶ್ವರವನಾಭಿವೃದ್ಧಿ ಯೋಜನೆಯನ್ನು 1983ರಲ್ಲಿ ಆರಂಭಿಸಿ ಹಂತ ಹಂತವಾಗಿ ಬೆಟ್ಟದ ಮೇಲಿನ ವಾತಾವರಣ,ಅರಣ್ಯಾಚ್ಛಾದನೆಯನ್ನು ಅಭಿವೃದ್ಧಿ ಪಡಿಸುತ್ತಿದೆ. ಈಗ 2012 ರಲ್ಲಿ ಇಡೀ ಪರ್ವತ ಸಸ್ಯ ಶ್ಯಾಮಲವಾಗಿರುವುದನ್ನು ಕಾಣಬಹುದು - ಅನುವಾದಕ)

ಇಲ್ಲಿನ ಕಾಡುಗಳಲ್ಲಿನ ಸಸ್ಯಗಳು ಶುಷ್ಕ ಸಸ್ಯಗಳು ಕಾಡುಜಾಲಿಗಳಿಂದ ಕೂಡಿದ್ದು ಅಲ್ಲಲ್ಲಿ ಶುಷ್ಕಹರಿತ್ತೂ ಕಂಡ ಬಂದು ವಾತಾವರಣದ ಬೆಳವಣಿಗೆಯ ಎತ್ತರವನ್ನು ತಲುಪಿದಂತೆ ಕಂಡುಬರುತ್ತದೆ. ಭಾಕರಾಪೇಟೆ ತಿರುಮಲೆಗಳ ನಡುವಣ ಕಾಡುಗಳು ರಾಮಾಯಣ ಕಾಲದಲ್ಲಿ ದಂಡಕಾರಣ್ಯಕ್ಕೆ ಸೇರಿದ ಪ್ರದೇಶಗಳಾಗಿದ್ದವು ಎಂಬುದು ಪುರಾಣ ವಚನ. ದಂಡಕಾರಣ್ಯ ಹೆಸರೇ ಸೂಚಿಸುವಂತೆ ಪುಗಲಸಾಧ್ಯವಾದ ಹಲವು ಹನ್ನೊಂದು ರೀತಿಯ ಜಾತಿಯ ಪಕ್ಷಿ ಪ್ರಾಣಿಗಳಿಂದ ಕೊಡಿ ವೈವಿಧ್ಯಮಯವಾದ ವನರಾಶಿಯಿಂದ ಕೊಡಿದ್ದದ್ದು. ಅಂತಹ ಅರಣ್ಯಗಳು ಇಂದು ಸುಲಭವಾಗಿ ನಿರ್ಮಾಣವಾಗಲು ಸಾಧ್ಯವಿಲ್ಲದಷ್ಟು ನಾಶವಾಗಿದ್ದು,ಬೋಳುಗುಡ್ಡಗಳ ಬಂಜರು ಭೂಮಿಯಾಗಿ ಬಿಟ್ಟಿದೆ.

ವನಸಿರಿಯ ವೈವಿಧ್ಯವನ್ನು ವೈಶಾಲ್ಯವನ್ನು ಪ್ರಭಾವಗೊಳಿಸುವ ಪ್ರಧಾನ ಪ್ರಾಕೃತಿಕ ಅಂಶವೆಂದರೆ ಜೈವಿಕ ಚಟುವಟಿಕೆಯೂ ಕೊಡಿದಂತೆ ಆದ ಸ್ಥಳೀಯ ಗುಣಗಣ. ಈ ಪ್ರಾಂತದ ಅರಣ್ಯಗಳು ಸಮುದ್ರ ಮಟ್ಟದ ಎತ್ತರದಲ್ಲಿ ಗಣನೀಯ ವೈವಿಧ್ಯವನ್ನು ಹೊಂದಿದ್ದು ಈ ತಗ್ಗು ತೆವರುಗಳು ಮಣ್ಣಿನ ತೇವಾಂಶವನ್ನು ಹವಾಗುಣವನ್ನು ಆ ಮೂಲಕವಾಗಿಯೇ ಗಿಡಗಳ ಬೆಳವಣಿಗೆಯನ್ನು ಕೆಲಮಟ್ಟಿಗಾದರೂ ಪ್ರಭಾವಿಸುತ್ತವೆ. ಜೈವಿಕ ಚಟುವಟಿಕೆಗಳು ಬೆಂಕಿ, ಕಾಡುಗಳ್ಳತನ,ಬೇಸಾಯ, ಪಶುಪಾಲನೆಗಳಲ್ಲಿ ಪ್ರತೀತವಾಗುತ್ತವೆ. ಪದೇ ಪದೇ ಉಂಟಾಗುವ ಕಾಳ್ಗಿಚ್ಚಿನ ತೀವ್ರತೆ ಇಲ್ಲಿನ ಎತ್ತರದೊಡನೆ ನೇರ ಸಂಬಂಧ ಹೊಂದಿರುವಂತೆಯೇ, ವನಾಚ್ಛಾದನೆಯ ಸಾಂದ್ರತೆಯನ್ನೂ ನೇರವಾಗಿ ಪ್ರಭಾವಿಸುತ್ತದೆ. ಆದರೆ ಶಿಖರವಹ್ನಿ ಇಲ್ಲಿ ಬಹುತೇಕ ಕಂಡು ಬಂದಿಲ್ಲವಾಗಿ, ನಾಶವಾಗುವುದೆಲ್ಲ ಪಾರ್ಶ್ವಅರಣ್ಯಾಚ್ಛಾದನೆಯೇ.

ಪ್ರಸ್ಥಭೂಮಿಯ ಕಾಡುಗಳು ಬಹುಮಟ್ಟಿಗೆ ತಿರುಮಲೆಯ ಎತ್ತರವಾದ ಪ್ರದೇಶಕ್ಕೆ ಭಾಕರಾಪೇಟೆಯ ಶೇಷಾಚಲ ಪರ್ವತಾವಳಿಗೆ ಪರಿಮಿತವಾಗಿವೆ. ಈ ಪ್ರಾಂತ್ಯದ ವಿಶಿಷ್ಟವಾದ ಅರಣ್ಯದಲ್ಲಿನ ಬೆಳೆಯ 80 ಶತಾಂಶ ಎಂಜಿನಿಯ ಅಲ್ಬರ್ನಿಫಿಲಿಯಾ ಆಗಿದೆ. ಘೋಲಿಯ, ತಂಬಗಿಯ ಸಸ್ಯಗಳು ವಾಸ್ತವವಾಗಿ ಗುಡ್ಡಗಳಿಗೂ, ಕೊರಕಲ್ಲುಗಳಿಗೂ ಸೀಮಿತ. ಹೆಚ್ಚಿನ ತೇವಾಂಶವಿರುವಲ್ಲಿ ಘೋಲಿಯಾ ತಲೂರ ಸಸಿಗಳು ಕಂಡು ಬರುತ್ತವೆ. ಇವುಗಳ ಜೊತೆಗೆ ಟರ್ಮಿನಾಲಿಯ ಪಾಲಿಡೆ, ಬುಕನಾನಿಯ ಲಾಟಿಫೋಲಿಯಾಗಳೂ ಉಂಟು,

**ಪ್ರಾಣಿಸಂಪದ :-**

ತಿರುಪತಿ ಹಾಗೂ ಭಾಕರಾಪೇಟೆಯ ಕಾಡುಗಳು ಪರಿರಕ್ಷಿತವೆಂದು ಘೋಷಿತವಾಗುವ ಮೊದಲೇ,ಪ್ರಾಣಿ ಪಕ್ಷಿಗಳ ಗಿಡ ಮರಗಳ ವೈವಿಧ್ಯಕ್ಕೂ ಸಮೃದ್ಧಿಗೂ ಹೆಸರು ಪಡೆದಿದ್ದವು. ಹಲವು ಜಾತಿಯ ಹಕ್ಕಿಗಳು,ಪ್ರಾಣಿಗಳು ಈ ಸ್ಥಳ ಸುರಕ್ಷಿತವೆಂದು ಕಂಡುಕೊಂಡು,ಸುಖದಿಂದ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಜೀವಿಸಿದ್ದವು. 27-8-1652 ರಲ್ಲಿ ಈ ಪ್ರದೇಶದಲ್ಲಿ ಹಾದು ಹೋದ ಫ್ರೆಂಚ್ ಯಾತ್ರಿಕನೂ ರತ್ನಪಡಿ ವ್ಯಾಪಾರಿಯೂ ಆದ ಟ್ರಾವರ್ನಿರನು ತನ್ನ ಯಾತ್ರಾ ದಿನಚರಿಯಲ್ಲಿ ಈ ಪ್ರದೇಶ ಸುಖದಾಯಿಯಾಗಿದ್ದು,ಇಲ್ಲಿನ ಅಸಂಖ್ಯಾತ ಹೊಳೆಗಳು ಚಿಲುಮೆಗಳಿಂದಾಗಿ ತಂಪಾಗಿದೆ ಎಂದು ದಾಖಲಿಸಿ, ಮೇಜರ್ ಜುಮ್ಲಾನ ಸೈನ್ಯದಿಂದ ಆಗ ಇಲ್ಲಿ ಆನೆಗಳನ್ನು ಹಿಡಿಯುವ ಕಾರ್ಯಕ್ರಮ ನಡೆದಿದ್ದಿತು ಎಂದು ತಿಳಿಸಿದ್ದಾನೆ. ಇಂದಿನ ಇಲ್ಲಿನ ಕಾಡುಗಳ ಪರಿಸ್ಥಿತಿಯನ್ನು ಕಂಡವರಿಗೆ ಈ ಮಾತುಗಳನ್ನು ನಂಬಲು ಕಷ್ಟಸಾಧ್ಯ ಆಗಬಹುದಾದರೂ,ಕಳೆದ ಮೂರು ಶತಮಾನಗಳಿಂದ ಮನುಷ್ಯ ಕಾಡುಗಳ ವಿನಾಶದಲ್ಲಿ ಮಾಡಿರುವ ಭೀಭತ್ಸವನ್ನು

ನಾವು ಚಿತ್ರಿಸಿಕೊಳ್ಳುವುದು ಸಾಧ್ಯವಾದರೆ ಅವನ ಮಾತುಗಳು ನಿಜದಿಂದ ಬಹುದೂರವಾದದ್ದೇನಲ್ಲ ಎನ್ನಬಹುದು. ಆನೆ, ಕಾಡೆಮ್ಮೆಗಳಂತಹ ಹಿರಿಯ ಪ್ರಾಣಿಗಳು ನಿರ್ನಾಮ ಆದಲ್ಲದೇ ಅಲ್ಲದೆ,ಹುಲಿ,ಚಿರತೆಗಳೂ ಬಹುತೇಕ ಇಲ್ಲವಾಗಿವೆ. ಇತರ ಕಾಡುಪ್ರಾಣಿಗಳಾದ ಜಿಂಕೆ,ಸಾರಂಗ ಕಡವೆಗಳೂ ಕಡಮೆಯಾಗಿ, ಅವುಗಳನ್ನು ಹಿಂಡುಗಳಲ್ಲಿ ನೋಡುವುದು, ಅಸಾಧ್ಯವಾಗಿದೆ. ಮೀಸಲು ವನಗಳ ಸುತ್ತಣ ಭೂಮಿಯನ್ನು ಕೃಷಿಗಾಗಿ ತೆರವು ಮಾಡುವುದು, ಹೆಚ್ಚಿನ ರಸ್ತೆಗಳು,ವೇಗವಾಗಿ ಚಲಿಸುವ ವಾಹನಗಳು, ವಿಶೇಷವಾಗಿ ಅರಣ್ಯದ ಕಚ್ಚಾ ರಸ್ತೆಗಳಲ್ಲಿ ಚಲಿಸುವ ಜೀಪುಗಳು,ಪರವಾನಗಿಯಿಲ್ಲದ ಆಯುಧಗಳ ಹೆಚ್ಚಳ, ಎಂಡ್ರಿನ್ ಮುಂತಾದ ಅತಿಸುಲಭ ದರದ ತೀವ್ರ ವಿಷಗಳ ಆಗಮನ,ಮನುಷ್ಯನ ನಿಷ್ಕರುಣ ಬೇಟೆಯ ಸ್ವಭಾವ- ಇವೆಲ್ಲ ಸೇರಿ ಅರಣ್ಯಪ್ರಾಣಿಗಳ ಸಂಪತ್ತಿಗೆ,ಜೀವನಕ್ಕೆ ದೊಡ್ಡಕುತ್ತಾಗಿವೆ. ಇಂದು ಹಪಾಪಿ ನವಿಲುಗಳೂ ಸಂಖ್ಯೆಯಲ್ಲಿ ಕಡಮೆಯಾಗುತ್ತಿವೆ. ವನ್ಯಪ್ರಾಣಿಗಳಿಗೆ ಜೀವಿಸುವ, ಬೆಳೆಯುವ ಅವಕಾಶ ನೀಡಲೆಂದು 1962 ರಿಂದ ಜಿಲ್ಲೆಯಲ್ಲಿ ಎಲ್ಲ ಕಾಡುಗಳನ್ನು ಬೇಟೆಗಾಗಿ ಮುಚ್ಚಲಾಗಿದೆ.

ಕೊಂಬುಳ್ಳ ಪ್ರಾಣಿಗಳು ತಮಗೆ ವಾತಾವರಣ ಅನುಕೂಲವಾಗಿರುವುದರಿಂದ ತಿರುಪತಿ ಪ್ರಾಂತದಲ್ಲಿ ಹೆಚ್ಚಿಗೆ ಕಂಡುಬರುತ್ತದೆ.

ಈ ಪ್ರಾಂತದಲ್ಲಿನ ಹಕ್ಕಿಗ್ಗಳ ಬದುಕು ಸ್ವಲ್ಪ ಮಟ್ಟಿಗೆ ಚೆನ್ನವೆನ್ನಬಹುದು. ಕಾರಣ ಕಳ್ಳ ಬೇಟೆಗಾರರು ಪಕ್ಷಿಗಳ ವಿನಾಶದತ್ತ ದೃಷ್ಟಿ ಹರಿಸಿಲ್ಲದಿರುವುದು ಹಾಗೂ ಅವುಗಳ ಹಾರುವ ಶಕ್ತಿ ಹಾಗೂ ತಮ್ಮ ಕಿರುಗಾತ್ರದಿಂದಾಗಿ ನಾಲ್ಕುಕಾಲಿನ ಪ್ರಾಣಿಗಳಿಗಿಂತ ಚೆನ್ನಾಗಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವಲ್ಲಿ ಹೆಚ್ಚು ಸಮರ್ಥವಾಗಿರುವಿಕೆ.ಈ ಕಾಡುಗಳಲ್ಲಿ ವೈವಿಧ್ಯಮಯ ವಾದ ಹಕ್ಕಿಗಳು ಅನೇಕವಿದ್ದು ಚಳಿಗಾಲದಲ್ಲಿ ದೂರದೂರದಿಂದ ಬರುವ ಹಕ್ಕಿಗಳಿಂದಲೂ ಅವುಗಳ ಸಂಖ್ಯೆ ಗಣ ನೀಯವಾಗಿ ಹೆಚ್ಚುವುದು. ಬಬ್ಲರ್‌ಗಳಲ್ಲಿ ದೊಡ್ಡಕಂದು ಬಣ್ಣದ ಬಬ್ಲರ್‌ಗಳು ಬಹು ಸಾಮಾನ್ಯ. ಮಳೆಗಾಲದಲ್ಲಿ ಹೆಚ್ಚುವ ಹುಳಗಳ ಸಂಖ್ಯೆಯನ್ನು ಮಿತಿಗೊಳಿಸುವ,ಹಿಡಿಯುವ ಶ್ರೈಕರ್‌ಗಳು ಜಿಲ್ಲೆಯ ಮುಖ್ಯ ರಸ್ತೆಗಳಲ್ಲಿ ಹುಳ ಹೆಕ್ಕುತ್ತಿರುವುದನ್ನು ಕಾಣಬಹುದು. ಕಾಗೆಗಳು, ಮೈನಾಗಳು ಜಾನುವಾರುಗಳ ಬೆನ್ನಿನಲ್ಲಿ ಸದಾ ಕಾಣುತ್ತದೆ.ಇತರೆಯವಾದ ಜೀ ಈಟರ್ಸ್, ವಾರ್ ಬ್ಲರ್ಸ್,ಹೂಪನ್ ಮೊದಲಾದವೂ ಕಂಡು ಬರುತ್ತವೆ.ರಣಹದ್ದುಗಳು ಇಡೀ ಜಿಲ್ಲೆಯಲ್ಲಿ ಕಾಣ ಬರುತ್ತವೆ. ಕ್ರಿಮಿಕೀಟಕಗಳ ಸಂಖ್ಯೆಯನ್ನು ಹದ್ದುಬಸ್ತಿನಲ್ಲಿಡುವ ಗೃಧ್ರಗಳು,ಗೂಬೆಗಳು ಇವೆ. ಅಳಿಲು,ಮರಳು ಹಸಿರು ಗಿಣಿಗಳೂ ಸ್ಥಳೀಯ ಯಾನಾದಿಗಳಿಂದಲೂ, ಕಳ್ಳ ಸಾಗಣೆದಾರರೂ ಸುಂಡಿಲಿಗಳೂ ಹಿಡಿಯುವ ಪಕ್ಷಿಗಳಾಗಿವೆ. ಚಳಿಗಾಲ ದಲ್ಲಿ ಅಸಂಖ್ಯ ಬಾತುಕೋಳಿಗಳೂ, ಜಿಲ್ಲೆಯ ವಿವಿಧ ಕೆರೆಕಟ್ಟೆಗಳಲ್ಲಿ ಕಂಡು ಬರುತ್ತವೆ. ವಿವಿಧ ಚುಕ್ಕೆಯ ಬಾತುಗಳು ಗಣನೀಯ.ಚಿನ್ನ ಗೊಟ್ಟಿಕಲ್ಲು ಕೆರೆಯಲ್ಲಿ ಚಳಿಗಾಲದಲ್ಲಿ ಕಾಣಬಹುದು. ಭತ್ತದ ಗದ್ದೆಗಳಲ್ಲಿ ಗುಬ್ಬಚ್ಚಿಗಳನ್ನು ಕಾಣಬಹುದು. ಭತ್ತದ ಗದ್ದೆಗಳು ಹೆರಾನ್‌ಗಳನ್ನು, ಎಗ್ರೆಟ್‌ಗಳನ್ನೂ ಆಕರ್ಷಿಸುತ್ತವೆ. ತಿರುಪತಿ,ಭಾಕರಾಪೇಟ ಮದನಪಲ್ಲಿಗಳಲ್ಲಿ ಈಗಲೂ ನವಿಲುಗಳನ್ನು ಎಲ್ಲ ಕಾಲದಲ್ಲೂ ನೋಡಬಹುದು.ತಿರುಮಲೆಯ ಘಟ್ಟದ ರಸ್ತೆಯ 6-8 ಮೈಲಿಗಳ ಮಧ್ಯದಲ್ಲಿ ಸಂಜೆ ಹೊತ್ತು ರಸ್ತೆಯನ್ನು ದಾಟುತ್ತಿರುವುದನ್ನು ನೋಡಬಹುದಾಗಿದೆ.

**ಸರಿಸೃಪಗಳು :-**


ಜಿಲ್ಲೆಯಲ್ಲಿ ಅಸಂಖ್ಯವಾದ ವಿಷಪೂರಿತ ಹಾಗೂ ವಿಷಹೀನ ಹಾವುಗಳನ್ನು ಕಾಣಬಹುದು. ಹಿಂದೂಗಳು ದೇವರೆಂದೇ ಗೌರವಿಸುವ ನಾಗರ ಚೌತಿಯಂದು ಹಾಲ ನೆರೆಯುವ ಹುತ್ತುಗಳಲ್ಲಿನ ನಾಗರ ಹಾವು ಇವುಗಳಲ್ಲಿ ಸಾಮಾನ್ಯ ವಾದದ್ದು.ವೈಪರ್,ಕ್ರೈಟಗಳು ಈ ಪ್ರದೇಶದಲ್ಲಿ ಸಾಮಾನ್ಯ. ಒಳಕಾಡುಗಳಲ್ಲಿ ಹೆಬ್ಬಾವು ಇದೆಯೆಂದು ಹೇಳಿ ದರೂ ಕಣ್ಣಿಗೆ ಕಂಡಿಲ್ಲ.ಮಿಕ್ಕಂತೆ ವಿಷಹೀನ ಹಾವುಗಳಲ್ಲಿ ಕೇರೆಹಾವು ನೀರಹಾವುಗಳು ಕ್ರಿಮಿಕೀಟಕಗಳ ಸಂಖ್ಯೆ ಯನ್ನು ಹದ್ದಿನಲ್ಲಿಡುವ ಕೆಲಸದಲ್ಲಿ ತೊಡಗಿರುವುದನ್ನು ಹಳ್ಳಿಗಳ ಸುತ್ತಮುತ್ತ ಕಾಣಬಹುದು.

ಹಾವುರಾಣಿಗಳೂ, ಹಲ್ಲಿಗಳೂ ಸಾಮಾನ್ಯವಾಗಿವೆ.ಆಮೆಗಳಲ್ಲಿ ಮೃದುಚರ್ಮದ ಆಮೆಗಳು ಕೆರೆಬಾವಿಗಳಲ್ಲಿ ಕಂಡು ಬರುವುವು. ಇವು ಭೂಚರಗಳಾಗಿ ಕಲ್ಲುಗಳ ತೆಗ್ಗು ತೆವರುಗಳಲ್ಲಿ ಕುಳಿತ ಹಿನ್ನೆಲೆಯ ವರ್ಣದೊಂದಿಗೆ ಬೆರೆತಿರುತ್ತದೆ. ಮೀನುಗಳು ವೈವಿಧ್ಯಮಯವಾಗಿ ಕೆರೆ, ಹೊಳೆಗಳಲ್ಲಿ ಕಂಡುಬರುತ್ತದೆ.

(- ಮುಂದುವರಿಯುವುದು)

## ಶ್ರೀಗೋವಿಂದರಾಜಸ್ವಾಮಿಯವರ ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ
## (2021, ಮೇ 18 ರಿಂದ 26 ರ ವರೆಗೆ)





## ಶ್ರೀಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವದ ದೃಶ್ಯಮಾಲಿಕೆ
## (2021, ಮೇ 20 ರಿಂದ 22 ರ ವರೆಗೆ)





## ಶ್ರೀಪದ್ಮಾವತಿ ಅಮ್ಮನವರ ವಸಂತೋತ್ಸವದ ದೃಶ್ಯಮಾಲಿಕೆ (2021, ಮೇ 24 ರಿಂದ 27 ರ ವರೆಗೆ)





## ಶ್ರೀಕಲ್ಯಾಣವೆಂಕಟೇಶ್ವರ ಸ್ವಾಮಿಯವರ ವಸಂತೋತ್ಸವದ ದೃಶ್ಯಮಾಲಿಕೆ (2021, ಮೇ 29 ರಿಂದ 31 ರ ವರೆಗೆ)










ತಿರುಪತಿ ಶ್ರೀವೆಂಕಟೇಶ್ವರ ವೇದವಿಶ್ವವಿದ್ಯಾಲಯದಲ್ಲಿ 2021, ಮೇ 14 ರಂದು ಅಕ್ಷಯತೃತೀಯ ಸಂದರ್ಭವಾಗಿ
ಶಾಸ್ತ್ರೋಕ್ತವಾಗಿ ನಿರ್ವಹಿಸಿದ 'ಶ್ರೀ ಲಕ್ಷ್ಮೀನಾರಾಯಣ ಪೂಜೆ'







ತಿರುಮಲೆ ವಸಂತಮಂಡಪದಲ್ಲಿ 2021, ಮೇ 25ನೇ ರಂದು ಶಾಸ್ತ್ರೋಕ್ತವಾಗಿ ನಿರ್ವಹಿಸಿದ
'ಶ್ರೀಭೀಷಣ ನೃಸಿಂಹಪೂಜೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡ
ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ದಂಪತಿಗಳು






ಇತ್ತೀಚೆಗೆ ತಿರುಮಲೆ ವೇದವಿಜ್ಞಾನ ಪೀಠದಲ್ಲಿ ನಡೆದ 'ಪೂರ್ವಾಷಾಢ ನಕ್ಷತ್ರೇಷ್ಟಿ'ಯಾಗದಲ್ಲಿ ಪಾಲ್ಗೊಂಡ
ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ತಿ.ತಿ.ದೇ ಸದಸ್ಯರು ಶ್ರೀ ಶಿವಕುಮಾರ್ ಮತ್ತು ಇತರ ಅಧಿಕಾರಿಗಳು

# ಶ್ರೀ ಗೋಪಾಲದಾಸರ ಕೃತಿಗಳಲ್ಲಿ ಭಾಗವತ

- ಡಾ|| ಮಧುಮತಿ ದೇಶಪಾಂಡೆ

ಮಹಾಪುರಾಣಗಳು ಹದಿನೆಂಟು. ಉಪಪುರಾಣಗಳು ಹದಿನೆಂಟು. ಆ ಪುರಾಣಗಳಲ್ಲಿ ಭಾಗವತವೂ ಒಂದು. ಅದು ಪುರಾಣ ತಿಲಕವೆಂದು ಪ್ರಸಿದ್ಧವಾಗಿದೆ. ಅದರ ಹೆಸರೇ ಸೂಚಿಸುವಂತೆ ಅದರಲ್ಲಿ ಭಗವಂತನ ವರ್ಣನೆಯಿದೆ. ಹರಿಯ ಗುಣೋಪಾಸನೆ ಮತ್ತು ಹರಿಯ ಸರ್ವೋತ್ತಮತ್ವವನ್ನು ಹೇಳುವುದೇ ಭಾಗವತದ ಮೂಲ ಉದ್ದೇಶ. ಇದು ಹಲವು ಭಕ್ತಿ ಪಂಥಗಳಿಗೆ ಸ್ಫೂರ್ತಿಯ ಕೇಂದ್ರ.

ಕೃಷ್ಣದ್ವೈಂಪಾಯನರೆಂದು ಪ್ರಸಿದ್ಧರಾದ ಭಗವಾನ್ ವೇದ ವ್ಯಾಸರು ವೇದಗಳನ್ನು ವಿಂಗಡಿಸಿ, ವೇದಾಂತ ಸಾರದಿಂದ ಉಪನಿಷತ್ತುಗಳನ್ನು ಪ್ರಕಾಶಪಡಿಸಿದರು. ವೇದ - ವೇದಾಂತ, ಧರ್ಮಶಾಸ್ತ್ರ, ಸಂಸ್ಕೃತಿ ಇತ್ಯಾದಿ ವಿಷಯಗಳನ್ನು ಅಳವಡಿಸಿ ಮಹಾಭಾರತವನ್ನು ರಚಿಸಿದರು. ಮಹಾಭಾರತವನ್ನು ವೇದ, ಉಪನಿಷತ್ತುಗಳ ಸಾರವನ್ನು ತಿಳಿಯಲು ಸಹಾಯವಾಗುವಂತೆ ಬ್ರಹ್ಮಸೂತ್ರಗಳನ್ನು ಪ್ರಕಟಿಸಿದರು.ಆದರೂ ಮಹರ್ಷಿಯ ಮನಸ್ಸಿಗೆ ತೃಪ್ತಿಯಿಲ್ಲದೆ ಏನೋ ಒಂದು ತರಹದ ಅಶಾಂತಿ ಕಾಡುತ್ತಿತ್ತು.

ಸರಸ್ವತಿ ನದಿ ತೀರದ ಬದರಿಕಾಶ್ರಮದಲ್ಲಿ ವೇದವ್ಯಾಸರು ಆಲೋಚನೆ ಮಾಡುತ್ತಾ ಕುಳಿತಿರುವಾಗ ನಾರದರು ಅಲ್ಲಿಗೆ ಬಂದರು.ಆಗ ವ್ಯಾಸರು ನಾರದರಿಗೆ ಅರ್ಘ್ಯಪಾ ದ್ಯಾದಿಗಳನ್ನು ಸಮರ್ಪಿಸಿ ತಮ್ಮ ಮಾನಸಿಕ ಅಶಾಂತಿಯನ್ನು ತಿಳಿಸಿದರು. ಆಗ ನಾರದರು ಭಕ್ತಿ ಮತ್ತು ಪರಮಾತ್ಮನ ಪ್ರಸಂಗಗಳ ವರ್ಣನೆಯನ್ನೊಳಗೊಂಡ ಇನ್ನೊಂದು ಗ್ರಂಥ ರಚಿಸಿದರೆ ಶಾಂತಿ ಲಭಿಸುವುದೆಂದು ಸೂಚಿಸಿದರು.ಆಗ ಭಾಗವತದ ರಚನೆಯಾಯಿತು.

ಭಾಗವತವು ಹನ್ನೆರಡು ಸ್ಕಂದಗಳಲ್ಲಿ ವಿಭಾಗಿಸಲ್ಪಟ್ಟು ಮಹಾ ಗ್ರಂಥವಾಗಿದೆ. ಇದರ ಉತ್ಪತ್ತಿಯನ್ನು ಕುರಿತು ಅದರ ಪ್ರಥಮ ಸ್ಕಂದದ ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ಹೇಳಿದೆ. ಭಾಗವತವನ್ನು ಮೊದಲು ಶ್ರೀಮನ್ನಾರಾಯಣನ್ನೇ ಬ್ರಹ್ಮನಿಗೆ ಪ್ರೀತಿಯಿಂದ ಹೇಳಿದನು. ಬ್ರಹ್ಮನು ತನ್ನ ಮಾನಸ ಪುತ್ರನಾದ ನಾರದ ಮಹರ್ಷಿಗಳಿಗೆ ಹೇಳಿದನು. ನಾರದರು ಅದನ್ನು ವ್ಯಾಸ ಮಹರ್ಷಿಗಳಿಗೆ ಹೇಳಿದರು. ವ್ಯಾಸರು ಈ ಪುಣ್ಯ ಕಥೆಯನ್ನು ರಚಿಸಿ ಭಾಗವತೋತ್ತಮನೂ, ತಮ್ಮ ಮಗನೂ ಆದ ಶುಕ ಮುನಿಗೆ ಹೇಳಿದರು.ಆ ಮಹಾಮುನಿಯು ಮರಣ ಭೀತಿಯಿಂದ ತೊಳಲುತ್ತಿದ್ದ ಪರೀಕ್ಷಿತ ಮಹಾರಾಜನಿಗೆ ಏಳು ದಿನ ಪರ್ಯಂತ ಉಪದೇಶಿಸಿದನು. ಆ ಸಮಯದಲ್ಲಿ ಅದನ್ನು ಕೇಳಿದ ಸೂತ ಮಹರ್ಷಿಗಳು ನೈಮಿಷಾರಣ್ಯದಲ್ಲಿ ಸೇರಿದ ಋಷಿ ಸಭೆಯಲ್ಲಿ ವಿಸ್ತಾರವಾಗಿ ಹೇಳಿದರು.ಇದು ಪರೀಕ್ಷಿತರಾಜನಿಗೂ ಶುಕಮುನಿಗಳಿಗೂ ನಡೆದ ಸಂವಾದ ರೂಪದಲ್ಲಿರುವ ಮಹಾಕಾವ್ಯವಾಗಿದೆ. ಇದರ ಮಹತ್ವವನ್ನು ಕುರಿತು ಡಾ|| ವಾಸುದೇವ ಅಗ್ನಿಹೋತ್ರಿಯವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ‘‘ಶ್ರೀಮದ್ಭಾವತವು ಪುರಾಣ ತಿಲಕ. ಅದರ ಹೆಸರೇ ಸೂಚಿಸಿರುವಂತೆ ಅದರಲ್ಲಿ ಭಗವಂತನ ದಿವ್ಯ ಚರಿತ್ರೆಯ ವರ್ಣನೆಯಿದೆ. ಉಳಿದೆಲ್ಲ ಪುರಾಣಗಳಲ್ಲಿದ್ದಂತೆ ಇಲ್ಲಿ ಕಥೆಗೆ ಪ್ರಧಾನ ಸ್ಥಾನವಿಲ್ಲ ಇದರಲ್ಲಿ ಬರುವಷ್ಟು ಸ್ತೋತ್ರಗಳು, ಪ್ರಮೇಯಗಳು, ಶ್ರೀಹರಿಯ ಪ್ರೀತಿಗೆ ಕಾರಣವಾದ ಧರ್ಮಗಳು ಮನುಷ್ಯನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿ ಉಪದೇಶಿಸುವ ಭಗವಂತನ ಅಪರೋಕ್ಷ ಜ್ಞಾನಕ್ಕೆ ಕಾರಣವಾದ ಭಕ್ತಿಭಾವಗಳು ಮತ್ತೆಲ್ಲಿಯೂ ಇಷ್ಟು ಸ್ಪಷ್ಟವಾಗಿ ವರ್ಣಿತವಾಗಿಲ್ಲ. ಭಾಗವತಕಾರನಿಗೆ ಭಕ್ತಿ ಪ್ರತಿಪಾದನೆ, ಪ್ರಚಾರ ಮೊದಲಾದವುಗಳೇ ಮುಖ್ಯ ಗುರಿ. ಇದು



ವೇದವೆಂಬ ಕಲ್ಪವೃಕ್ಷದ ಹಣ್ಣು ದೇವಲೋಕದಿಂದ ಹರಿದುಬಂದ ಅಮೃತಧಾರೆ. ಭಾಗ್ಯಶಾಲಿಗಳಾದ ಭಕ್ತರೂ,ರಸಿಕರಾದ ಭಾವುಕರೂ ಇಹಲೋಕದಲ್ಲಿರುವಾಗಲೇ ಈ ಅಮೃತ ಸವಿದು ಕೃತಾರ್ಥರಾಗಬೇಕು’’

ಅದಕ್ಕಾಗಿಯೇ ಪುರಂದರದಾಸರು ಇದರ ಹಿರಿಮೆಯನ್ನು ಕುರಿತು -

‘‘ಪ್ರಕಟ ಗ್ರಂಥಗಳೆಲ್ಲ ಭಾಗವತದ ಹಿಂದೆ, ಸಕಲ
ಕ್ಷೇತ್ರಗಳೆಲ್ಲ ಸಾಲಿಗ್ರಾಮದ ಹಿಂದೆ’’

ಎಂದಿದ್ದಾರೆ. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಗೀತೆ ಇವು ಪ್ರಸ್ಥಾನತ್ರಯವಾಗಿರುವಂತೆ ರಾಮಾಯಣ, ಮಹಾಭಾರತ ಮತ್ತು ಭಾಗವತ ಪ್ರವಚನತ್ರಯಗಳಾಗಿವೆ. ಅದರಲ್ಲೂ ಭಾಗವತದ ದಶಮಸ್ಕಂದವು ಬಹು ಮುಖ್ಯವಾದ ಭಾಗ. ಇದರ ಪೂರ್ವಾರ್ಧವು ಗೋಪಿಕಾ ಪ್ರೇಮಲೀಲೆ, ರಾಸಕ್ರೀಡೆ, ಗೋಪಿಕಾ ವಸ್ತ್ರಾಪಹರಣ ಮೊದಲಾದ ಪ್ರಸಂಗಗಳನ್ನು ಒಳಗೊಂಡಿದೆ.ಭಾಗವತದಲ್ಲಿ ಭಗವಂತನ ವಿವಿಧ ಅವತಾರಗಳ ವರ್ಣನೆಯಿದ್ದರೂ ಕೃಷ್ಣ ಚರಿತ್ರೆಗೆ ಪ್ರಾಧಾನ್ಯತೆ ಹೆಚ್ಚು.

ಕನ್ನಡದಲ್ಲಿ ಭಾಗವತದಿಂದ ಸ್ಫೂರ್ತಿ ಪಡೆದು ಕೃತಿ ರಚಿಸಿದವರು ವಿರಳ.ಅದರಲ್ಲಿ ಚಾಟುವಿಠಲನಿಗೆ ಮೊದಲಸ್ಥಾನ. ಅವನು ಕನ್ನಡ ಭಾಗವತವನ್ನು ಬರೆದಿದ್ದಾನೆ. ಹಾಗೇ ರುದ್ರಭಟ್ಟನ ‘ಜಗನ್ನಾಥವಿಜಯ’ ಭಾಗವತಕ್ಕೆ ಋಣಿಯಾಗಿದೆ. ನೇಮಿಚಂದ್ರನ ‘ನೇಮಿನಾಥ ಪುರಾಣದಲ್ಲಿ ಜೈನ ಸಂಪ್ರದಾಯದ ಭಾಗವತ ಕಥೆ ನಿರೂಪಿತವಾಗಿದೆ. ಭಾಗವತದ ಒಂದೊಂದು ಪ್ರಸಂಗವನ್ನಾಧರಿಸಿ ಖಂಡಕಾವ್ಯಗಳು ರಚನೆಯಾಗಿವೆ. ಸೋಮನಾಥನ ‘ಅಕ್ರೂರಚರಿತೆ’, ಕನಕದಾಸರ ‘ಮೋಹನ ತರಂಗಿಣಿ’ ಯನ್ನು ಉಲ್ಲೇಖಿಸಬಹುದು. ಹೊಸಗನ್ನಡದಲ್ಲಿ ಮಾಸ್ತಿಯವರ ‘ಉಷಾ’,ಪು.ತಿ.ನ.,ಅವರ ‘ಗೋಕುಲ ನಿರ್ಗಮನ’, ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ ‘ಕಂಸ’ವನ್ನು

ಉದಾಹರಿಸಬಹುದು. ಹರಿದಾಸರು ಮತ್ತು ಭಾಗವತ ರಾಮಾಯಣ, ಮಹಾಭಾರತ, ಭಾಗವತ, ಉಪನಿಷತ್ತು,ಗೀತೆ,ಇತಿಹಾಸ,ಪುರಾಣ ಮಧ್ವಾಚಾರ್ಯರ ತತ್ತ್ವ ಗ್ರಂಥಗಳು ಹರಿದಾಸ ಸಾಹಿತ್ಯಕ್ಕೆ ಆಧಾರ. ಭಾಗವತವು ಹರಿದಾಸರ ಹೃದಯವನ್ನು ಆಕರ್ಷಿಸಿದೆ. ಅವರ ಪಾಂಡಿತ್ಯ ಮತ್ತು ವಿಲಾಸಕ್ಕೆ ಆಕರವಾಗಿದೆ. ಭಾಗವತದಿಂದ ಪ್ರಭಾವಿತರಾಗದ ಹರಿದಾಸರೇ ಇಲ್ಲವೆನ್ನಬಹುದು. ಈ ಹಿನ್ನೆಲೆಯಲ್ಲಿ ಟಿ.ಎನ್. ನಾಗರತ್ನ ಅವರ ಮಾತುಗಳು ಸ್ವೀಕಾರಾರ್ಹವಾಗಿವೆ. ರಾಮಾಯಣ, ಭಾಗವತ ಮತ್ತು ಭಾರತಗಳನ್ನು ಕುರಿತು ಪರಿಶೀಲಿಸಿ ಪೌರಾಣಿಕ ಸಂಪತ್ತಿನ ದೃಷ್ಟಿಯಿಂದ ಹರಿದಾಸ ಸಾಹಿತ್ಯವನ್ನು ಒಳಹೊಕ್ಕು ನೋಡಿದಾಗ ಸಾಮಾಜಿಕ ಸಮಸ್ಯೆಗಳನ್ನು ಸದಾಚಾರಗಳನ್ನು ಹೇಳುವ ಕೆಲವು ಕೀರ್ತನೆಗಳು ಬಿಟ್ಟರೆ ಉಳಿದೆಲ್ಲ ಭಾಗವನ್ನು ಈ ಪುರಾಣಗಳ ಚೌಕಟ್ಟಿನೊಳಗೆ ಸೇರಿಸ ಬಹುದು. ಅಂತಹ ಕೆಲವು ಕೀರ್ತನೆಗಳು ಸಹ ಹರಿಭಕ್ತಿಯ ಹಿನ್ನೆಲೆಯಲ್ಲಿ ಮಾಡಿದವುಗಳು. ಆದ್ದರಿಂದ ಇಡೀ ದಾಸ ಸಾಹಿತ್ಯವನ್ನು ಕನ್ನಡ ಪೌರಾಣಿಕ ಸಂಪತ್ತು ಎಂದು ಕರೆಯಬಹುದು.

ಶ್ರೀಮಾನಕರಿ ಶ್ರೀನಿವಾಸಾಚಾರ್ಯ ಅವರು ಭರತ ವರ್ಷದ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಭಾಗವತವು ಎಂತಹ ಮಹತ್ವದ ಸ್ಫೂರ್ತಿ ಗಂಗೋತ್ರಿಯಾಗಿದೆ ಎಂಬುದನ್ನು ವಿದ್ವಾಂಸರು ನಿರ್ಧರಿಸಬೇಕಾಗಿದೆ. ನಮ್ಮ ದೇಶದ ಜನ ಜೀವನ ಅನೇಕ ತಲೆಮಾರುಗಳಿಂದ ಈ ಗ್ರಂಥಕ್ಕೆ ಋಣಿಯಾಗಿದೆ. ಭಕ್ತಿ ಮಾರ್ಗದ ವೈಭವದ ಹೂವುಗಳೆಲ್ಲ ಈ ವ್ಯಾಸ ವೃಕ್ಷಕ್ಕೆ ಅರಳಿವೆ.


ಚಿತ್ರ, ಸಂಗೀತ ನೃತ್ಯ. ಶಿಲ್ಪಗಳಲ್ಲಿ ಕಂಡು ಬರುವ ವೈಭವ-ವೈವಿಧ್ಯಗಳು ಭಾಗವತದ ತೊಟ್ಟಿಲಲ್ಲಿ ತೂಗಾಡಿವೆ.... ನಾವು ಪಡೆಯಬೇಕಾದ ಸಿದ್ಧಿಯನ್ನೂ, ಕಾಣಬೇಕಾದ ಕನಸನ್ನೂ, ಒಂದು ಕ್ಷಣ ಕೂಡ ಮರೆಯದಂತೆ ನಮಗೆ ವಿವರಿಸಿ ಹೇಳಿವೆ. 'ಹೀಗಿದೆ ಜೀವನ.'

ಹೀಗಿರಬೇಕು ಜೀವನ ಎಂದು ಹೆಜ್ಜೆ ಹೆಜ್ಜೆಗೆ ಎಚ್ಚರಿಸಿಕೊಂಡು ಬಂದಿವೆ.'

ವಿಶೇಷವಾಗಿ ಭಾಗವತದ ದಶಮ ಸ್ಕಂದದ ಚರಿತ್ರೆ ಅಲ್ಲದೆ ಧೃವ ಚರಿತೆ, ಪ್ರಹ್ಲಾದ ಚರಿತೆ, ಅಜಾಮಿಳನ ಚರಿತೆ, ಗಜೇಂದ್ರ ಉಪಾಖ್ಯಾನ, ಸಮುದ್ರ ಮಂಥನ. ದಶಾವತಾರಗಳು ಯಶೋದೆಯ ವಾತ್ಸಲ್ಯ, ಕಾಳಿಂಗಮರ್ಧನ, ಗೋಪಿಕಾ ಸ್ತ್ರೀಯರ ಪ್ರೇಮ, ಗೋಕುಲ ನಿರ್ಗಮನ, ದೈತ್ಯ ಸಂಹಾರ ಮುಂತಾದ ಪ್ರಸಂಗಗಳು ಹರಿದಾಸರ ಮನಸ್ಸನ್ನು ಸೂರೆಗೊಂಡಿವೆ. ತಮ್ಮ ರಚನೆಗಳಲ್ಲಿ ಮೇಲಿನ ಒಂದಿಲ್ಲ ಒಂದು ಪ್ರಸಂಗವನ್ನು ಉಲ್ಲೇಖಿಸುತ್ತಾ ಹರಿದಾಸರು ಹರಿಯ ಹಿರಿಮೆಯನ್ನು ಕೊಂಡಾಡಿದ್ದಾರೆ.

ಸಂಸ್ಕೃತ ಬಾರದ ಆಸಕ್ತರಿಗೆ ಭಾಗವತದ ಪ್ರಸಂಗಗಳನ್ನು ತಮ್ಮ ರಚನೆಗಳಲ್ಲಿ ಹಿಡಿದಿಟ್ಟಿದ್ದಾರೆ. ಹರಿದಾಸರೆಲ್ಲ ಭಾಗವತವನ್ನು ಗೌರವಿಸಿದ್ದಾರೆ. ಸ್ಫೂರ್ತಿಗೊಂಡಿದ್ದಾರೆ. ಋಣಿಯಾಗಿದ್ದಾರೆ.

ಭಕ್ತಿಯಲ್ಲಿ ಭಾಗಣ್ಣನೆಂದು ಪ್ರಖ್ಯಾತರಾದ, ಮಂತ್ರ ಸಿದ್ಧರೆನಿಸಿಕೊಂಡ ಶ್ರೀಗೋಪಾಲದಾಸರು ಭಾಗವತದ ಯಾವ ಯಾವ ಪ್ರಸಂಗಗಳನ್ನು ತಮ್ಮ ರಚನೆಗಳಲ್ಲಿ ಹಿಡಿದಿಟ್ಟಿದ್ದಾರೆ ಎಂಬುದನ್ನು ನೋಡೋಣ (ಇಲ್ಲಿ ಕೀರ್ತನೆಗಳಿಗೆ ಬಳಸಿರುವ ಪುಟ ಸಂಖ್ಯೆ ಮತ್ತು ಕೃತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಪ್ರಕಟಪಡಿಸಿದ ದಾಸ ಸಾಹಿತ್ಯ ಸಂಪುಟದಿಂದ ಆಯ್ದುಕೊಳ್ಳಲಾಗಿದೆ ಶ್ರೀಗೋಪಾಲದಾಸರು)




ಪ್ರತಿ ವರ್ಷ ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠಾ ನಕ್ಷತ್ರಕ್ಕೆ ಮುಗಿಯುವಂತೆ ಮೂರು ದಿನಗಳು ತಿರುಮಲೆ ಶ್ರೀ ಸ್ವಾಮಿಗೆ ಜ್ಯೇಷ್ಠಾಭಿಷೇಕ ಸಂಪಂಗಿ ಪ್ರದಕ್ಷಿಣೆದಲ್ಲಿರುವ ಕಲ್ಯಾಣ ಮಂಟಪದಲ್ಲಿ ನಡೆಯುತ್ತದೆ. ಇದನ್ನೇ "ಅಭಿದೇಯಕ ಅಭಿಷೇಕ" ಎನ್ನುತ್ತಾರೆ. ಹಿಂದಿನ ಕಾಲದಿಂದಲೂ ಅಭಿಷೇಕ ಗಳಿಂದ ಅತ್ಯಂತ ಪ್ರಾಚೀನವಾದ ಶ್ರೀ ಸ್ವಾಮಿಯವರ ಉತ್ಸವ ಮೂರ್ತಿಗಳು ಸವೆದು ಹೋಗದಂತೆ ರಕ್ಷಿಸುವುದರ ನಿಮಿತ್ತ ಏರ್ಪಡಿಸಿದ ಉತ್ಸವವೇ ಇದು. ಇದನ್ನು ಮೂರು ದಿನಗಳವರೆಗೆ ನಿರ್ವಹಿಸಲಾಗುತ್ತದೆ.

ಮೊದಲನೆಯದಿನ ಶ್ರೀ ಮಲೆಯಪ್ಪ ಸ್ವಾಮಿಗೆ ಇರುವ ಚಿನ್ನದ ಕವಚವನ್ನು ತೆಗೆದು ಹಾಕಿ, ಹೋಮಗಳು ಅಭಿಷೇಕ ಗಳು ಪಂಚಾಮೃತ ಸ್ನಪನ ತಿರುಮಂಜನಾದಿಗಳು ನಡೆದ ನಂತರ ಶ್ರೀ ಸ್ವಾಮಿಗೆ ವಜ್ರ ಕವಚವನ್ನು ಅಲಂಕರಿಸಿ ಪುರವೀಧಿಗಳಲ್ಲಿ ಮೆರವಣಿಗೆ ಹೋಗುತ್ತಾರೆ.ಯಥಾಕ್ರಮವಾಗಿ ಎರಡನೆಯ ದಿನ ಮುತ್ತಿನ ಕವಚ ಸಮರ್ಪಣೆ ಮಾಡಿ ಮೆರವಣಿಗೆ ಮಾಡುತ್ತಾರೆ. ಮೂರನೆಯ ದಿನ ಕೂಡ ತಿರುಮಂಜನಾವನ್ನು ಪೂರ್ತಿಮಾಡಿ, ಚಿನ್ನದ ಕವಚವನ್ನು ಸಮರ್ಪಿಸಿ ಜ್ಯೇಷ್ಠಾಭೀಷೇಕದಲ್ಲಿಯೇ ತೆಗೆಯುವರು. ಅಲ್ಲಿಯ ತನಕ ವರ್ಷ ಪೂರ್ತಿಯಾಗಿ ಶ್ರೀಸ್ವಾಮಿಯವರು ಚಿನ್ನದ ಕವಚದಲ್ಲಿಯೇ ಇರುತ್ತಾರೆ.ಆರ್ಜಿತ ಸೇವೆಯಾಗಿ ನಿರ್ವಹಿಸುತ್ತಿರು ಈ ಉತ್ಸವದಲ್ಲಿ ಭಕ್ತರು ಪಾಲ್ಗೊಳ್ಳಬಹುದು. ಈ ಸೇವೆಯಲ್ಲಿ ಪಾಲ್ಗೊಂಡ ಭಕ್ತರನ್ನು ಕವಚವಾಗಿ ಸ್ವಾಮಿಯು ರಕ್ಷಿಸುತ್ತಾರೆ.

# ಸಂಸ್ಕೃತ ಕಲಿಯೋಣ...!!

## अष्टमः पाठः ಎಂಟನೇ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. कश्चित् =ಯಾವುದೋ ಒಂದು, 2. कतिचित् = ಎಷ್ಟು 3. किञ्चित्, ईषत् = ಸ್ವಲ್ಪ 4. एकत्र = ಒಂದು ಕಡೆ 5. मा = ಬೇಡ 6. नो चेत् = ಹಾಗೆಯೇ ಆದರೂ 7. स्युः = ಬಂಧಿಸು, ದಾರ, ಸೂಜಿ 8. स्यात = ಆಗುತ್ತದೆ. 9. स्याम = ಆಗಲಿ

### ಪ್ರಶ್ನೆ

1. तत्र कश्चित् स्यात्।
2. नो चेत् यूयं तत्र स्यात।
3. कतिचित् तत्र सन्ति।
4. वयम् अत्र स्याम।
5. तत्र किञ्चित् अपि नास्ति।
6. यूयं तत्र मा स्यात।
7. कतिचित् अत्र स्युः।
8. अत्र किम् अपि नास्ति।
9. एते कतिचित् तत्र नासन्।
10. वयं कतिचित् अत्र स्मः।

### ಉತ್ತರ

1. ಅಲ್ಲಿ ಯಾರೋ ಇದ್ದಾರೆ.
2. ಅಲ್ಲಿ ಅವರೆಲ್ಲರೂ ಸಹ ಇದ್ದಾರೆ
3. ಅಲ್ಲಿ ಎಷ್ಟು ಜನರಿರಬಹುದು.
4. ನಾವು ಇಲ್ಲಿಯೇ ಇದ್ದೇವೆ.
5. ಇಲ್ಲಿ ಯಾರು ಸಹ ಇಲ್ಲ.
6. ತಾವೆಲ್ಲರೂ ಅಲ್ಲಿ ಇಲ್ಲ.
7. ಅಲ್ಲಿ ಎಷ್ಟು ಜನ ಇದ್ದೀರಾ?
8. ಅಲ್ಲಿ ಯಾರು ಸಹ ಇಲ್ಲಾ
9. ಇವರೆಲ್ಲರೂ ಅಲ್ಲಿ ಇಲ್ಲವೇ ಇಲ್ಲ.
10. ನಾವು ಎಷ್ಟು ಜನರಿದ್ದೇವೆ ಇಲ್ಲಿ.

### ಪ್ರಶ್ನೆ

1. ನೀವೆಲ್ಲರೂ ಎಷ್ಟು ಜನ ಅಲ್ಲಿದ್ದೀರಿ?
2. ನಾವೆಲ್ಲರೂ ಎಷ್ಟು ಜನ ಅಲ್ಲಿ ಇದ್ದೇವು?
3. ಅಲ್ಲಿ ಸಹ ಯಾರು ಇರಲಿಕ್ಕಿಲ್ಲ.
4. ಇಲ್ಲಿ ನಿನ್ನೆ ಎಲ್ಲರೂ ಇದ್ದರು ಅವರೆಲ್ಲರೂ ಇಲ್ಲಿಯೇ ಈಗಲೂ ಇದ್ದಾರೆ.
5. ನಾವು ಎಲ್ಲಿದ್ದೇವೆ?
6. ಯಾಕೆ ಅವರೆಲ್ಲರೂ ಇಲ್ಲಿ ಇದ್ದಾರೆ?
7. ತಾವೆಲ್ಲರೂ ಒಂದೇ ಕಡೆ ಇರಬೇಕು.
8. ಈಗ ಅಲ್ಲಿ ಯಾರು ಸಹ ಇಲ್ಲ.
9. ತಾವೆಲ್ಲರೂ ಯಾರು ಅಲ್ಲಿ ಇಲ್ಲಿ ಅಲ್ಲೇನಿದೇ?
10. ನಾವೆಲ್ಲರೂ ಅಲ್ಲಿ ಇಲ್ಲವೇ ಇಲ್ಲ.

### ಉತ್ತರ

1. यूयं कतिचित् अत्र स्यात।
2. वयं कतिचित् तत्र स्याम।
3. अत्र केऽपि न स्युः।
4. तत्र ह्यः यः आसीत् सः अत्रापि स्यात्।
5. वयं कुत्र स्याम।
6. किं वा तेऽपि अत्र स्युः।
7. यूयं एकत्र स्यात।
8. इदानीं तत्र केऽपि न सन्ति।
9. यूयम् अद्य नक्तं तत्र स्यात किम्?
10. नो चेत् वयं तत्र स्याम।

# ವೈಕುಂಠ ವರ್ಣನೆ

- ಶ್ರೀಧರ ರಾಯಸಂ
99705 65978



ಭಾವಿ ಸಮೀರ ಶ್ರೀವಾದಿರಾಜ ಗುರುಸಾರ್ವಭೌಮರು ಸಂಸ್ಕೃತ, ಕನ್ನಡ, ತುಳು ಇನ್ನಿತರ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಗ್ರಂಥಗಳಲ್ಲಿ ಒಂದಾದ ವೈಕುಂಠ ವರ್ಣನೆ ಭಕ್ತ ಜನರಿಗೆ ಮೋಕ್ಷ ಜೀವಿಗಳಿಗೆ ಸಾಧನವಾಗಿರುವ ಅಮೋಘ ಪ್ರಮೇಯಾತ್ಮಕ ಕೃತಿ.

ವೈಕುಂಠ ವರ್ಣನೆಗೆ ಮತ್ತೊಂದು ಹೆಸರು ತತ್ವ ಸಾರ. ತತ್ವಸಾರದಲ್ಲಿ ಒಟ್ಟು 388 ಪದ್ಯಗಳಿವೆ. ತತ್ವ ಸಾರದಲ್ಲಿ ಶ್ರೀಹರಿ ಸರ್ವತಂತ್ರ ಸ್ವತಂತ್ರನಾದವನು. ಸರ್ವಗುಣಪೂರ್ಣ, ಸರ್ವೋತ್ತಮನು, ಸರ್ವ ವ್ಯಾಪ್ತನು,ಸರ್ವಶಕ್ತನು, ಭಕ್ತಪರಾಧೀನನು ಎಂದು ತಿಳಿಸಲಾಗಿದೆ. ವೈಕುಂಠ ವರ್ಣನೆಯ ಸಾರವೇದಗಳು,ಉಪನಿಷತ್ತುಗಳು, ಭಾಗವತ, ಬಳಿತ್ಥಾಸೂಕ್ತ, ಬ್ರಹ್ಮಸೂತ್ರ, ಪಾಂಚರಾತ್ರ, ಭಗವದ್ಗೀತೆ, ಶ್ರೀಹರಿ ವಾಯುಸ್ತುತಿ, ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಮುಂತಾದ ಶಾಸ್ತ್ರ ಗ್ರಂಥಗಳ ಪ್ರತಿಪಾದನೆ, ತತ್ವ ಪ್ರತಿ ಪಾದನೆ ಶ್ರುತಿಗಳು ಪುರಾಣಗಳು ಮತ್ತು ಶ್ರೀ ಮಧ್ವಾಚಾರ್ಯರ ಗ್ರಂಥಗಳ ತತ್ವ ಒಳಗೊಂಡಿದೆ. ತತ್ವ ಸಾರವನ್ನು ಭಾಮಿನಿಷಟ್ಪದಿಯಲ್ಲಿ ಅನೇಕ ವೃತ್ತದಲ್ಲಿ ಶ್ರೀವಾದಿರಾಜರು ರಚಿಸಿದ್ದಾರೆ.

**ವೈಕುಂಠ ವರ್ಣನೆಯಲ್ಲಿ ನಾಲ್ಕು ಸಂಧಿಗಳಿವೆ.**

ಮೋಕ್ಷಸಂಧಿ, ಲಯಸಂಧಿ,ಸೃಷ್ಟಿಸಂಧಿ, ಸ್ಥಿತಿಸಂಧಿ,

ಮೋಕ್ಷಸಂಧಿ ವಾಸುದೇವ ಲಯಸಂಧಿಗೆ ಸಂಕರ್ಷಣ, ಸೃಷ್ಟಿ ಸಂಧಿಗೆ ಪ್ರದ್ಯುಮ್ನ, ಸ್ಥಿತಿಸಂಧಿಗೆ ಅನಿರುದ್ಧ ಅಭಿಮಾನಿ ದೇವತೆಗಳು. ವಾಸುದೇವ ಪತ್ನಿ ಮಾಯಾ ಸಂಕರ್ಷಣನ ಪತ್ನಿ ಜಯಾ ಪ್ರದ್ಯುಮ್ನನ ಪತ್ನಿ ಕೃತಿ, ಅನಿರುದ್ಧನ ಪತ್ನಿ ಶಾಂತಿ.

ಮೋಕ್ಷ ಸಂಧಿಯಲ್ಲಿ 140 ಪದ್ಯಗಳು, ಲಯಸಂಧಿಯಲ್ಲಿ 55 ಪದ್ಯಗಳು. ಸೃಷ್ಟಿ ಸಂಧಿಯಲ್ಲಿ 82 ಪದ್ಯಗಳು ಸ್ಥಿತಿಸಂಧಿಯಲ್ಲಿ 111 ಪದ್ಯಗಳು (ಫಲಶ್ರುತಿ ಸೇರಿ) ಇವೆ. ಪ್ರತಿ ಪದ್ಯಗಳಲ್ಲಿ ಪ್ರಾಸ, ಯುಕ್ತಿ ಆಧ್ಯಾತ್ಮ ಜ್ಞಾನ ಅಲಂಕಾರ, ವೇದಗಳ ಅರ್ಥ, ಪ್ರಕೃತಿಯ ವರ್ಣನೆ,ಶಾಸ್ತ್ರಗಳ ಸಾರ, ಅಡಕವಾಗಿದೆ.ಮಂಗಳ ಪದ್ಯ ಶುಕ್ಲಾಂಭರಣಂ ವಿಷ್ಣುಂ.... ಶ್ಲೋಕ ಚತುರ್ಭುಜ ತೋಳಿನ ವಿಷ್ಣುವಿನ ವರ್ಣನೆಯಾಗಿದೆ.ತತ್ವಸಾರದಲ್ಲಿ ನಾರಾಯಣ, ಮಹಾಲಕ್ಷ್ಮಿ,ಪ್ರಾಣದೇವರ ಮೂರು ಅವತಾರಗಳ ವರ್ಣನೆಯಿದೆ.ಪಂಚರೂಪ ಉಪಾಸನೆಯಾದ ನಾರಾಯಣ, ವಾಸುದೇವ, ಸಂಕರ್ಷಣ ಪ್ರದ್ಯುಮ್ನ, ಅನಿರುದ್ಧ ರೂಪಗಳಿವೆ.

ಖಟ್ವಾಂಗ 48 ನಿಮಿಷದಲ್ಲಿ, ಪರೀಕ್ಷಿತರಾಜ 7 ದಿವಸದಲ್ಲಿ ಮೋಕ್ಷ ಸಂಪಾದಿಸಿದ್ದು ವಿಶೇಷ.

ವೈಕುಂಠವೆಂದರೆ ವಿಕುಂಠ ಮತ್ತು ಶುಭ್ರ ದಂಪತಿಯ ಮಗಳೇ ಭಗವಂತ! ಭಗವಂತನೇ ತನ್ನ ಪತ್ನಿ ಲಕ್ಷ್ಮೀದೇವಿಗಾಗಿ ನಿರ್ಮಿಸಿದ ಲೋಕವೈಕುಂಠ. ವೈಕುಂಠವೆಂದರೆ ನಾರಾಯಣನ ಸ್ಥಾನ ವಿಕುಂಠವೆಂದರೆ ಲಕ್ಷ್ಮೀದೇವಿಗಾಗಿ ನಿರ್ಮಿಸಿದ ಲೋಕ ವೈಕುಂಠ, ವೈಕುಂಠವೆಂದರೆ ನಾರಾಯಣನ ಸ್ಥಾನ ವಿಕುಂಠವೆಂದರೆ ನಾಶವಿಲ್ಲದವನು ಎಂದರ್ಥ, ಅವ್ಯಯ ಎಂದೂ ಅರ್ಥೈಸಲಾಗಿದೆ. ಮಂಗಳ ಸ್ವರೂಪಿಯಾದ ಭಗವಂತನಿಗೆ ನಾಶವಿಲ್ಲ ಭೃಗುಋಷಿ ಮಾತ್ರ ವೈಕುಂಠಕ್ಕೆ ತೆರಳಿ ವಾಪಸ್ಸಾದವರು.ಭಾಗವತ 5ನೇ ಸ್ಕಂದ, ರೈವತ ಸಂವತ್ಸರದಲ್ಲಿ ಇದರ ಉಲ್ಲೇಖವಿದೆ.

ಮೋಕ್ಷ ಸಂಧಿಯಲ್ಲಿ ತ್ರಿಧಾಮಗಳ ವರ್ಣನೆಯಿದೆ.

**ಅನಂತಾಸನ ಶ್ವೇತದ್ವೀಪ ವೈಕುಂಠ**

ಅನಂತಾಸನ ಭೂಮಿಯಿಂದ ಒಂದು ಲಕ್ಷ ಯೋಜನ ದೂರದಲ್ಲಿದೆ.

ವೈಕುಂಠ ಭೂಮಿಯಿಂದ 16 ಕೋಟಿ 25 ಲಕ್ಷ ಯೋಜನ ದೂರದಲ್ಲಿದೆ.

ಲಿಂಗ ದೇಹ ಭಂಗವಾದಾಗ ನಾಲ್ಕು ಮುಕ್ತಿಗಳ ಪ್ರಭೇಧವಿದೆ.

ಸಾಯುಜ್ಯ, ಸಾಲೋಕ್ಯ ಸಾಮೀಪ್ಯ, ಸಾರೂಪ್ಯ

ಸಾಯುಜ್ಯದಲ್ಲಿ ಬ್ರಹ್ಮ ಪದವಿ ಯೋಗ್ಯರಿಗೆ ಮುಕ್ತಿ ದೊರೆಯುತ್ತದೆ. ಸಾಲೋಕ್ಯ

ದಲ್ಲಿ ಭಗವಂತ ಮುಕ್ತಿಯೋಗ್ಯರನ್ನು ಅವಲೋಕನ ಮಾಡುವನು. ಸಾಮಿಪ್ಯದಲ್ಲಿ ಭಗವಂತನ ಸಮೀಪ ಮುಕ್ತರು ಬರುವರು ಸಾರೂಪ್ಯದಲ್ಲಿ ಭಗವಂತನ ಎಲ್ಲಾ ಅಸಾಧಾರಣ ಚಿಹ್ನೆಗಳನ್ನು (ಶ್ರೀವತ್ಸ,ಕೌಸ್ತುಭಬಿಟ್ಟು)ಧರಿಸುವರು. ಆದರೆ ಭಗವಂತನೊಂದಿಗೆ ಐಕ್ಯವಾಗುವುದಿಲ್ಲ. ಸಾರೂಪ್ಯದಲ್ಲಿ ಎಲ್ಲಾ ಸಾಧಕರು ವೈಕುಂಠಕ್ಕೆ ಬರುವರು.

ಲಿಂಗ ದೇಹ ಭಂಗವಾಗಲು, ಮೋಕ್ಷ ಸಾಧಕರಿಗೆ ವಿರಜಾನದಿ ಸ್ನಾನದಿಂದ ಪ್ರಾಪ್ತಿ ವಿರಜಾನದಿ ಭಗವಂತನ ಬೆವರು. ಶ್ರೀದೇವಿ ನದೀ ರೂಪದಿಂದ ಹರಿಯುತ್ತಾಳೆ. ರಾಜಸ, ತಾಮಸ, ಗುಣಗಳಿಲ್ಲದ ನದಿ. ಲಿಂಗ ದೇಹ ಭಂಗವಾದಾಗ ಜೀವರಿಗೆ ವಿರಜಾನದಿ ಸ್ನಾನದಿಂದ ಮುಕ್ತಿ ದೊರಕುತ್ತದೆ. ಸಂಸಾರ ಜೀವಿಗಳಿಗೆ ಸ್ವರೂಪ ದೇಹ, ಲಿಂಗದೇಹ, ಅನಿರುದ್ಧ ದೇಹ, ಸ್ಥೂಲದೇಹ ಎಂಬ ನಾಲ್ಕು ದೇಹಗಳಿವೆ. ಮುಖ್ಯ ಪ್ರಾಣದೇವರು ದಿನಕ್ಕೆ 21600 ಸಲ ಜಪ ಮಾಡುವರು.

ಭಗವಂತನ ಭೋಜನವೇ ಲಯ ಚಿಂತನೆಯಾಗಿದೆ. ಲಯಸಂಧಿಯಲ್ಲಿ ಮೂರು ಲಯಗಳಿವೆ. ಮನುಲಯ ದಿನಲಯ, ಬ್ರಹ್ಮಲಯ

ಮನುಲಯದಲ್ಲಿ ಮನ್ವಂತರಗಳು, ಭೂಮಿ ಸ್ವರ್ಗ ಅಂತರಿಕ್ಷ, ಲಯವಾಗುವುದು. (ಸತ್ವ, ರಜೋ, ತಾಮಸ) ಬ್ರಹ್ಮಲಯದಲ್ಲಿ ಬ್ರಹ್ಮನ ಆಯುಷ್ಯ 100 ವರ್ಷ ಮುಗಿದ ಮೇಲೆ ಲಯವಾಗುವುದು. ಅವ್ಯಕ್ತ ತತ್ವಗಳೆಂದರೆ ಶ್ರೀಭೂ, ದುರ್ಗಾಂ ಮಹಾಲಕ್ಷ್ಮಿ ತ್ರಿಗುಣಗಳಿಗೆ ಅಭಿಮಾನಿಯಾಗಿರುವಳು ಇಡೀ ಬ್ರಹ್ಮಾಂಡ ಚತುರ್ಮುಖ ಬ್ರಹ್ಮನ ದೇಹವಾಗಿ ಸೃಷ್ಟಿಯಾಗುವುದು.

ಲಯಕಾರದಲ್ಲಿ ಭಗವಂತ ಯೋಗ ನಿದ್ರೆಯಲ್ಲಿರುವಾಗ, ಶ್ರೀ ನೀರಾಗಿ, ಭೂ ಆಲದೆಲೆಯಾಗಿ, ದುರ್ಗಾ ಕತ್ತಲೆಯಾಗಿ ಸೇವೆ ಮಾಡುವರು. ಭಗವಂತ ಯೋಗನಿದ್ರೆಯ ಸಮಯದಲ್ಲಿ. ಆತನ ಉದರದಲ್ಲಿ ಸಮಸ್ತ ಜೀವರಾಶಿಗಳು ನಿದ್ರೆಯಲ್ಲಿರುತ್ತವೆ. ಆದರೆ ಪ್ರಾಣದೇವರು ಮಾತ್ರ ನಿದ್ರೆ ಮಾಡದೆ ಎಚ್ಚರದಿಂದ ಇರುವರು. ಜೀವೋತ್ತಮರಾದ ಪ್ರಾಣದೇವರು ಸದಾ ಭಗವಂತನ ಧ್ಯಾನದಲ್ಲಿ ನಿರತರಾಗಿರುವರು. ಪ್ರಳಯವನ್ನು ಒಳಗಣ್ಣಿನಿಂದ ದರ್ಶಿಸಿದ ಮಹಾತಪಸ್ವಿ ಮಾರ್ಕಂಡೇಯ ಋಷಿ.

ವೇದಗಳನ್ನು ಉದಾಹರಿಸಿ ಭಗವಂತ ಬ್ರಹ್ಮಾಂಡವನ್ನು ಸೃಷ್ಟಿ ಮಾಡುವನು. ಸೃಷ್ಟಿಯ ಆದಿಯಲ್ಲಿ ಬ್ರಹ್ಮ, ಶಿವ ಇರುವುದಿಲ್ಲ. ನಂತರ ಬ್ರಹ್ಮನಲ್ಲಿ ಭಗವಂತ, ಶಿವನಲ್ಲಿ ಭಗವಂತನಿದ್ದು ಸೃಷ್ಟಿಮಾಡುವನು. ಸೃಷ್ಟಿಯ ಉದ್ದೇಶ ದೇವರಿಗೆ ಲಾಭವಾಗಲು ಮತ್ತು ಸಾಧನೆ ಮಾಡಿ ಮುಕ್ತಿ ಪಡೆಯಲು ಸಹಾಯವಾಗುವುದು. ನಂತರ ಗುಣತ್ರಯಗಳು ಸೃಷ್ಟಿಯಾಗುವುದು. ಸಾತ್ವಿಕ ಬಿಳಿ ಬಣ್ಣ 'ರಾಜಸ ಕೆಂಪುಬಣ್ಣ' ತಾಮಸ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಮಹತತ್ವಕ್ಕೆ ಅಭಿಮಾನಿ ದೇವರು ಚತುರ್ಮುಖ ಬ್ರಹ್ಮ ದೇವರು. ಅಹಂಕಾರತತ್ವದಲ್ಲಿ ಮೂರು ರಾಶಿಗಳಿವೆ.

ವೈಕಾರಿಕಾತತ್ವ - ದೇವತೆಗಳು

ತೈಜಸತತ್ವ - ಇಂದ್ರಿಯಗಳು

ತಾಮಸತತ್ವ - ಪಂಚಭೂತಗಳು

ಭಗವಂತ ಒಂದು ಸಾವಿರ ದೇವಮಾನವ ವರ್ಷ ಯೋಗನಿದ್ರೆಯಲ್ಲಿರುವನು ಬ್ರಹ್ಮಾಂಡ ಸೃಷ್ಟಿಸಿದಾಗ, ಅದರ ವಿಸ್ತೀರ್ಣ 25ಕೋಟಿ ಯೋಜನ ಅಗಲ. 25ಕೋಟಿ ಯೋಜನೆ ಉದ್ದವಿರುವುದು ಬಂಗಾರಮಯವಾದ ಬ್ರಹ್ಮಾಂಡದಲ್ಲಿ ಜೀವಿಗಳ ಸೃಷ್ಟಿಯಾಗುವುದು. ನಾರಾಯಣನ ನಾಭಿ ಮೂಲಕ 14 ದಳಗಳ ಕಮಲ ಸೃಷ್ಟಿಯಾಗುವುದು. 14 ದಳಗಳೇ 14 ಲೋಕಗಳಾಗುವುವು. ಕಮಲದಲ್ಲಿ ಚತುರ್ಮುಖ ಬ್ರಹ್ಮನ ಸೃಷ್ಟಿಯಾಗುವುದು. ಬ್ರಹ್ಮಾಂಡದೊಳಗೆ ಜೀವಿಗಳ ಸೃಷ್ಟಿಯಾಗಿ, ಮೋಕ್ಷ ಸಾಧನೆಗೆ ಜೀವಿಗಳು ಸಾಧನೆಮಾಡಲು ಭಗವಂತ ಪ್ರೇರೇಪಿಸುವನು. ನಂತರ ಆತ್ಮ ಸೃಷ್ಟಿ ಎಂದರೆ ಭಗವಂತನ ಹತ್ತು ಅವತಾರಗಳ ಸೃಷ್ಟಿಯಾಗುವುದು.

ಸ್ಥಿತಿ ಸಂಧಿಯಲ್ಲಿ ಜೀವಿಗಳು ಸದಾ ಭಗವಂತನ ಅನುಸಂಧಾನ ಮಾಡಲು ಮತ್ತು ಮೋಕ್ಷ ಪಡೆಯಲು , ಸಾಧನೆ ಮಾಡುವುದು ಮುಖ್ಯ ಉದ್ದೇಶ. ಸ್ಥಿತಿ ಸಂಧಿಯ ಅಭಿಮಾನಿ ದೇವತೆ ನೀಲವರ್ಣದ ಅನಿರುದ್ಧ ರೂಪಿ ಭಗವಂತ. ಅನಿರುದ್ಧ ರೂಪಿ ಭಗವಂತ ಪಾಲನೆ ಮಾಡುವನು ಎಂದು ಅನುಸಂಧಾನ ಮಾಡಬೇಕೆಂದು ಶ್ರೀವಾದಿರಾಜರು ತಿಳಿಸಿದ್ದಾರೆ. ಅನಿರುದ್ಧ ರೂಪಿ ಭಗವಂತ ಸ್ಥಿತಿ ಸಂಧಿಯ ಸಮಯದಲ್ಲಿ ನಿಯಂತ್ರಣ ಮಾಡುವನು.

ಸ್ಥಿತಿ ಸಂಧಿಯಲ್ಲಿ ಪ್ರಮುಖವಾಗಿ ಶ್ರೀವಾದಿರಾಜರು ಊರ್ಧ್ವಪುಂಡ್ರ ಧಾರಣೆ ತಪ್ತಮುದ್ರಾಧಾರಣೆ, ಮಾಡಿಸಿಕೊಳ್ಳಬೇಕೆಂದು ವಿವರವಾಗಿ ತಿಳಿಸಿದ್ದಾರೆ. ಬಾಹ್ಯ ದೀಕ್ಷೆ ತಪ್ತ ಮುದ್ರಾಧಾರಣೆ ಧರಿಸುವುದರಿಂದ ಸಂಪಾದಿಸಿದ ಪುಣ್ಯ ನಾಶವಾಗುವುದಿಲ್ಲ.

ಜೀವತ್ರೈವಿಧ್ಯದಲ್ಲಿ ಮೂರು ಪ್ರಬೇಧಗಳಿವೆ.

ಸುಖರೂಪಿ ಜೀವರು - ಉತ್ತಮರು.

ಸುಖ ದುಃಖ ಜೀವರು - ಮಧ್ಯಮರು

ಸ್ವರೂಪದಲ್ಲಿ ದುಃಖಿತರು - ಅಧಮರು.

ಉತ್ತಮ ಜೀವಿಗಳು ಲಿಂಗ ದೇಹ ಭಂಗ ಹೊಂದಿ ವಿರಜಾ ನದಿಯಲ್ಲಿ ಸ್ನಾನ ಮಾಡಿ , ಮುಕ್ತಿ ಪಡೆಯುವರು.

ಲಿಂಗ ದೇಹ ಭಂಗವಾಗಲು ಮಧ್ಯಮ ಜೀವಿಗಳಿಗೆ ವಾಯು ದೇವರ ಹೂಂಕಾರದಿಂದ ಮುಕ್ತಿ ಪಡೆಯುವರು. ಲಿಂಗದೇಹ ಭಂಗ ವಾಗಲು, ಅಧಮ ಜೀವಿಗಳಿಗೆ ವಾಯುದೇವರ ಪ್ರಹಾರದಿಂದ ಮುಕ್ತಿ ಪಡೆಯುವರು.

ನಿತ್ಯ ಸಂಸಾರಿಗಳು ಚಿದ್ರೂಪರಾಗುವರು. ಬ್ರಹ್ಮ ಪದವಿಯಲ್ಲಿದ್ದು ಭಗವಂತನೊಂದಿಗೆ ಭೋಗಿಸುವ ಫಲ ಸಹಭೋಗ. ಈ ಸಂಪತ್ತನ್ನು ಶ್ರೀಹರಿ, ಮುಖ್ಯ ಪ್ರಾಣದೇವರಿಗೆ ನೀಡುತ್ತಾನೆ.ಶ್ರೀಹರಿ ತನ್ನ ಎಡ ತೊಡೆಯ ಮೇಲೆ ಲಕ್ಷ್ಮೀದೇವಿಯನ್ನು ಬಲತೊಡೆಯ ಮೇಲೆ ಪ್ರಾಣ ದೇವರನ್ನು ಕೂಡಿಸಿಕೊಂಡು ಭೋಜನ ಮಾಡುವನು. ಶ್ರೀಹರಿ ನಕ್ಷತ್ರ ಮಂಡಲದಲ್ಲಿ ಪೂರ್ಣಚಂದ್ರ ಶೋಭಿಸುವಂತೆ ಕಾಣುವನು ಶ್ರೀಹರಿ ಸರ್ವಕಾಲದಲ್ಲೂ, ದೇಶ ಗುಣಕಾಲಗಳಿಂದ ವ್ಯಾಪ್ತನಾದವನು. ಜಗತ್ಕರ್ತ ಎನಿಸಿಕೊಳ್ಳುವನು.

ವೈಕುಂಠ ವರ್ಣನೆಯ. ಫಲಶ್ರುತಿ ಭಯನಿವಾರಣೆ ಭಗ ವಂತನ ಸ್ಮರಣೆ, ಸಂಸಾರದಿಂದ ಮುಕ್ತಿ ಶತ್ರುಗಳ ನಿವಾರಣೆ, ಮೋಕ್ಷ ಸಾಧನೆಯೆಂದು ಶ್ರೀವಾದಿರಾಜ ಗುರುಸಾರ್ವಭೌಮರು ತಿಳಿಸಿದ್ದಾರೆ. ಈ ಕಾವ್ಯ "ವೈಕುಂಠ ವರ್ಣನೆ" ಮೋಕ್ಷ ಸಾಧನೆಯ ಕಾವ್ಯವೆಂದು ಹಯವದನನ ಕೃಪೆಗೆ ಪಾತ್ರರಾಗುವರೆಂದು ತಿಳಿಸಿದ್ದಾರೆ.

ಶ್ರೀವಾದಿರಾಜರು ತಮ್ಮಿಂದ ರಚಿತವಾದ ಎಲ್ಲಾ ಸಂಸ್ಕೃತ , ಕನ್ನಡ ತುಳು ಇನ್ನಿತರ ಭಾಷೆಯ ಗ್ರಂಥಗಳು ತಮ್ಮ ಉಪಾಸ್ಯ ಮೂರ್ತಿ ಶ್ರೀಲಕ್ಷ್ಮೀ ಹಯಗ್ರೀವ ಸ್ವಾಮಿಯ ಕೀರ್ತಿ.

ಪ್ರಭಾವವೆಂದು ತಮ್ಮದೇನೂವಿಲ್ಲವೆಂದು ಅನುಸಂಧಾನ ದಿಂದ ಶ್ರೀಹಯವದನ ಸ್ವಾಮಿಯ ಸ್ಮರಣೆ ಮಾಡಿ, ಶ್ರೀಕೃಷ್ಣನಿಗೆ ಸಮ ರ್ಪಿಸಿದ್ದೇನೆಂದು ಭಕ್ತರಿಗೆ ತಿಳಿಸಿದ್ದಾರೆ.

ಶ್ರೀವಾದಿರಾಜರ ಪಾದೋದಕ ಧರಿಸಿದ ಭಕ್ತರು ಪರವಾದಿ ಗಳನ್ನು ಜಯಿಸುವರು. ಶ್ರೀಹಯಗ್ರೀವ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವರು. ಭೂತ ಪ್ರೇತಗಳು ಓಡುವುವು. ಜನ್ಮ ಜನ್ಮಾಂತರದ ಪಾಪಕರ್ಮಗಳು ತೊಲಗುವುವು.

ಶ್ರೀವಾದಿರಾಜ ಗುರುಸಾರ್ವಭೌಮರು ವೈಕುಂಠ ವರ್ಣನೆಯು ನಾಲ್ಕು ಸಂಧಿಗಳ ಸಂಪೂರ್ಣ ವಿವರಣೆ ಫಲಶ್ರುತಿ ಭಕ್ತರಿಗೆ ತಿಳಿಸಿ

ನಾಹಂಕರ್ತಾ,ಹರಿಕರ್ತಾ ಎಂದು ಸಂಪೂರ್ಣಗೊಳಿಸಿ ದ್ದಾರೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಗಾಂಧರ್ವ ವಿದ್ಯೆ ಸಂಗೀತ

– ಪಾರುಸುಧ

ಸದಾ ಮನಸ್ಸನ್ನು ಸಂತೋಷವಾಗಿಡಲು ಧನಾತ್ಮಕ ಚಿಂತನೆ, ಧನಾತ್ಮಕ ಕಾರ್ಯಗಳು ಸಹಕಾರಿ. ಮನುಷ್ಯನ ಸ್ವಭಾವದ ಮೇಲೆ ಪ್ರಕೃತಿ ಅಂದರೆ ಗಿಡಮರ ಬಳ್ಳಿಗಳು, ನದಿತೊರೆ,ಬೆಟ್ಟಗುಡ್ಡಗಳು, ಪ್ರಾಣಿ, ಪಕ್ಷಿಗಳು, ಪ್ರಭಾವ ಬೀರುತ್ತದೆ. ಹಾಗೆಯೇ ಬಹು ಹಿಂದಿನಿಂದಲೂ ಲಲಿತ ಕಲೆಗಳು ಸಹ ವಿಶೇಷವಾದ ಪ್ರಭಾವವನ್ನು ಬೀರುತ್ತಿವೆ. ಮನುಷ್ಯ ತನ್ನ ಮನಸ್ಸಿನ ಭಾವವನ್ನು ಚಿತ್ರಕಲೆ, ನೃತ್ಯ, ಸಂಗೀತದ ಮೂಲಕ ವ್ಯಕ್ತಪಡಿಸಿ ತಾನು ಸಂತೋಷಗೊಂಡು ಇತರರನ್ನು ಸಂತೋಷಗೊಳಿಸಲು ಅನಾದಿ ಕಾಲದಿಂದಲೂ ಜೀವನದ ಭಾಗವಾಗಿ ಪರಿಗಣಿಸಿದ್ದಾನೆ. ಈ ಎಲ್ಲಾ ಕಲೆಗಳಿಗೂ ಅಧಿದೇವತೆ ಪ್ರಕೃತಿ. ಪ್ರಕೃತಿಯ ಮಡಿಲ ಕೂಸಾದ ಮನುಷ್ಯ ಅದರೊಂದಿಗೆ ತನ್ನೆಲ್ಲಾ ವಿದ್ಯೆ. ಕಲೆಯನ್ನು ತಲ್ಲೀನಗೊಳಿಸಿ ಖುಷಿ ಪಡುತ್ತಿದ್ದಾನೆ. ಅದರಿಂದ ಶಾಂತಿ ನೆಮ್ಮದಿಯನ್ನು ಕಂಡುಕೊಂಡಿದ್ದಾನೆ.

ಸಂಗೀತವನ್ನು "ಗಾಂಧರ್ವವೇದ" ಎನ್ನಲಾಗುತ್ತದೆ. ಗಾಂಧರ್ವವಿದ್ಯೆ, ಗಾನವಿದ್ಯೆ ಎನ್ನಲು ಕಾರಣ ಇದು ಗಂಧರ್ವರ ವಿದ್ಯೆಯೆಂದು ನಂಬಲಾಗಿದೆ. ಈ ಸಂಗೀತ ಕೇವಲ ಮನುಷ್ಯರ ಮನಸ್ಸಿನ ಮೇಲಷ್ಟೇ ಪ್ರಭಾವ ಬೀರುವುದಿಲ್ಲ. ಸಸ್ಯಗಳು ಸಹ ಸಂಗೀತದ ಲಹರಿಗೆ ಮನಸೋಲುತ್ತವೆಂದು ವಿಜ್ಞಾನಿಗಳು ಹೇಳಿದ್ದಾರೆ. ಅನೇಕ ರೋಗರುಜಿನ, ಮಾನಸಿಕ ಒತ್ತಡಗಳಿಂದ ಮುಕ್ತರಾಗಲು ಇವು ಸಹಾಕಾರಿ ಎಂಬುದು ಅನೇಕರ ಅನುಭವದ ಮಾತು.ಸಂಗೀತದ ಸುಸ್ವರವು ಮನುಷ್ಯನನ್ನು ಸುಸಂಸ್ಕೃತನನ್ನಾಗಿಸುತ್ತದೆಂದು ಮಕ್ಕಳಿಗೆ ಬಾಲ್ಯದಿಂದಲೇ ಈ ಲಲಿತಕಲೆಗಳ ಹವ್ಯಾಸವನ್ನು ಅಭ್ಯಾಸವಾಗಿಸುವುದು ರೂಢಿಯಲ್ಲಿದೆ.

ಪ್ರಪಂಚದ ಸಂಗೀತ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯೇತರ ಶೈಲಿಗಳುಂಟು. ಭಾರತದ ಹಿಂದೂಸ್ಥಾನಿ, ಕರ್ನಾಟಕ್ ದಕ್ಷಿಣ ಆಫ್ರಿಕಾದ ಟೌನ್ ಶಿಪ್, ಜಪಾನಿನ ಕೋಟೋ ಇತ್ಯಾದಿ ಶಾಸ್ತ್ರೀಯ ಶೈಲಿಯಾದರೆ, ಸುಗಮ ಸಂಗೀತ ಭಕ್ತಿಗೀತೆ , ಬಾಂಗ್ರಾ, ಭಜನೆ, ಜನಪದ , ಫ್ಯೂಶನ್, ಗಝಲ್, ಇಂಡಿಪಾಪ್ ಇತ್ಯಾದಿ ಶೈಲಿಗಳು ಬಳಕೆಯಲ್ಲಿವೆ. ಪಾಶ್ಚ್ಯಾತ್ಯ ಮೆಟಲ್, ಡಿಸ್ಕೋ,ಹಿಪ್ಪಾಪ್, ರಾಕ್, ರೆಗ್ಗೆ, ಫೂಂತಕ್, ಕಂಟ್ರಿ ಇತ್ಯಾದಿ ಈ ಶೈಲಿಗಳ ಸಂಗೀತವು ಪ್ರಚಲಿತದಲ್ಲಿವೆ. ನಮ್ಮ ಭಾರತ ದೇಶವು ಕಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ ಅದರಲ್ಲೂ ಸಂಗೀತ ಕ್ಷೇತ್ರದಲ್ಲಿ ತವರೂರಾಗಿದೆ. ಸಂಗೀತ ಎಂದರೆ 'ಸುಷ್ಟಗೀತಂ ಸಂಗೀತಂ' ಸಮ್ಯಕ್‌ಗೀತಂ ಸಂಗೀತಂ' ಎಂಬ ಅರ್ಥವಿದೆ.ಪರಮಾತ್ಮನ ಧ್ಯಾನೋಪಾಸನೆಯಲ್ಲಿ ಧ್ಯಾನಕ್ಕೆ ಸಾಧನವಾಗಿದ್ದ ಧಾರ್ಮಿಕ ಸಂಗೀತವನ್ನು "ಗಾಂಧರ್ವ ಸಂಗೀತ" ವೆಂದು ಹೇಳಲಾಗುತ್ತದೆ. ಇದರ ಮೂಲ ಸಾಮವೇದವೆಂದು, ಭಗವಂತನಿಗೆ ಇದರ ಬಗ್ಗೆ ಅಪಾರ ಪ್ರೇಮವೆಂದು ನಂಬಲಾಗಿದೆ. ಅದರಂತೆ ಭಗವದ್ಗೀತೆಯಲ್ಲಿ "ವೇದಾನಾಂ ಸಾಮವೇದೋಸ್ಮಿ" ಎಂಬ ಸಾಲಿದೆ.

ಸಂಗೀತದಲ್ಲಿ ಧಾರ್ಮಿಕ ಹಾಗೂ ಲೌಕಿಕ ಎಂಬ ಎರಡು ವಿಧಗಳುಂಟು ಭಕ್ತಿಪೂರಕವಾಗಿ ತನ್ಮಯತೆಯಲ್ಲಿ ಸಲ್ಲಿಸುವ ಗೀತೆಗಳು ಧಾರ್ಮಿಕವಾದರೆ,ಮನರಂಜನೆಗಾಗಿ ಮಾನಸಿಕ ಹಗುರತೆಗಾಗಿ ಕೆಲವು ಮೀಸಲಾಗುತ್ತವೆ. ಸಂಗೀತವು ಪ್ರಾಣಿ ಪಕ್ಷಿ, ಗಿಡಮರಗಳನ್ನು ಸಂತೃಪ್ತಗೊಳಿಸುವ ಶಕ್ತಿ ಹೊಂದಿವೆಯೆಂಬ ಅನುಭವ ಅನುಭವಿಗಳದ್ದು, ಅದರಂತೆ ತಾನು ನಂಬಿದ ಧನಾತ್ಮಕ ಶಕ್ತಿಯ ವಿವಿಧ ರೂಪಗಳಲ್ಲೂ ಸಂಗೀತದ ಎಳೆಯನ್ನು ಹೆಣೆದಿರುವುದು. ಭಾರತೀಯರ ಕಲಾ ಅಭಿಮಾನಕ್ಕೆ ಸಾಕ್ಷಿ.ಪರಶಿವನ ಡಮರು, ಸರಸ್ವತಿಯ ವೀಣಾ, ಕೃಷ್ಣನ ಕೊಳಲು, ನಾರದರ ತಂಬೂರ ಹೀಗೆ ಒಂದೇ ಎರಡೇ , ಸಂಗೀತದ ಲಹರಿ ಅಣು ಅಣುವಿನಲ್ಲೂ ತುಂಬುವ ಪ್ರಯತ್ನ ಮನುಜನದು. ಪ್ರಕೃತಿಯ ಜಲಧಾರೆಯ ಧುಮ್ಮಿಕ್ಕುವ ಧನಿ, ಹಕ್ಕಿ ಪಕ್ಷಿಗಳ



ಇನಿಧ್ವನಿ, ಸುಯ್ಗುಡುವ ಬೀಸುವ ಗಾಳಿ, ಹನಿಹನಿಯಾಗಿ ಧರೆಗಿಳಿವ ಮಳೆ ಹನಿ,ಗಿಡಮರಗಳ ಎಲೆಗಳ ಸರಸ ,ಝೇಂಕರಿಸುವ ಜೇನ್ದುಂಬಿಗಳು ಹೀಗೆ ಪ್ರಕೃತಿಯ ಪ್ರತೀಧ್ವನಿಯು ಸಂಗೀತ ಮಯವೇ.

ಸಂಗೀತವೆಂದಾಕ್ಷಣ ಕೋಗಿಲೆ ಕಂಠದ ಧ್ವನಿ ಒಂದೆಡೆಯಾದರೆ ಧ್ವನಿಗೆ ಧ್ವನಿಯಾಗುವ ವಿವಿಧ ಸಂಗೀತ ವಾದ್ಯಗಳ ಸಾಲು ವಿಶೇಷ ಸ್ಥಾನ ಪಡೆದಿವೆ. ವೀಣೆ, ತಂಬೂರ, ಸಿತಾರ, ಪಿಟೀಲು, ಗಿಟಾರ್ ತಂತಿವಾದ್ಯಗಳಾದರೆ, ಕೊಳಲು ಶಹ ನಾಯಿ, ಸ್ಯಾಕ್ಸಾಫೋನ್‌ನಂತಹ ಗಾಳಿವಾದ್ಯಗಳು ಮತ್ತು ತಬಲ, ಮೃದಂಗ, ತಮಟೆ ಡೋಲು ಮರ್ಧನ ವಾದ್ಯಗಳೆಂಬ ಬಗೆಗಳಲ್ಲಿ ಸಂಗೀತ ವಾದ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಸಂಗೀತ ಬಲ್ಲವನು ಮುಕ್ತಿ ಮಾರ್ಗವನ್ನು ಹೊಂದುತ್ತಾನೆಂಬ ಧಾರ್ಮಿಕ ನಂಬಿಕೆಯು ಭದ್ರ ಬುನಾದಿ ಹೊಂದಿದೆ. ಯಾವ ನೊಬ್ಬ ಶೃತಿ, ಸ್ಮೃತಿ, ಸಾಹಿತ್ಯ ಹಾಗೂ ಇತರೆ ಶಾಸ್ತ್ರ ಗಳನ್ನು ಬಲ್ಲವನಾಗಿದ್ದು ಸಂಗೀತಶಾಸ್ತ್ರದ ಜ್ಞಾನ ಅಥವಾ ಒಲವಿಲ್ಲದಿದ್ದರೆ ಅಂತಹವನು ಏನು ಹೊಂದಿದ್ದರೂ ಪ್ರಯೋಜನವಿಲ್ಲ ವ್ಯರ್ಥವೆಂಬ ಮಾತು ಇದೆ. ಸಂಗೀತವು ಅಷ್ಟು ಸುಲಭವಾಗಿ ಒಲಿಯುವ ವಿದ್ಯೆಯಲ್ಲ. ಸತತ ಪ್ರಯತ್ನ ಅಭ್ಯಾಸದಿಂದ, ಭಕ್ತಿ ಶ್ರದ್ಧೆಯಿಂದ ಅದನ್ನು ಗಳಿಸಬಹುದೆಂಬುದು ಅನುಭವಿಗಳ ಮಾತು. ಒಲಿದ ಮೇಲೆ ಅದರ ಪ್ರಭಾವಜೀವನ್ಮುಕ್ತಿಗೆ ಸಹಕಾರಿಯೆಂದು ನಂಬಲಾಗಿದೆ. ಅದಕ್ಕೆಂದೆ ಹಿಂದಿನಿಂದಲೂ ಸಂಗೀತ ಕಲೆಯ ಅಭ್ಯಾಸಕ್ಕೆ, ಪ್ರಸರಣಕ್ಕೆ ರಾಜ ಮಹಾರಾಜರು ಹೆಚ್ಚಿನ ಮಹತ್ವ ನೀಡುತ್ತ ಇದ್ದರೂ ದೇಗುಲಗಳು ಈ ಸಂಸ್ಕೃತಿಯ ಕೇಂದ್ರಗಳಾಗಿದ್ದವು. ಕಠೋರ ಮನಸ್ಸನ್ನು ಮೃದುಗೊಳಿಸುವ, ದುಃಖ ಮರೆಸುವ, ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ ಮಹತ್ವದ ಶಕ್ತಿ ಸಂಗೀತಕ್ಕೆ ಇದೆ. ತ್ಯಾಗರಾಜರು ಈ ಸಂಗೀತದ ಲಹರಿಯಿಂದಲೇ ವ್ಯಕ್ತಿಯೋರ್ವನಿಗೆ ಜೀವದಾನ ಮಾಡಿದ್ದು, ಶ್ರೀರಾಮಸ್ವಾಮಿ ದೀಕ್ಷಿತರು ದೃಷ್ಟಿಹೀನತೆ ತೊಡೆದು ಹೋಗುವಂತೆ ಮಾಡಿದ್ದು, ವರ್ಷಧಾರೆಯಾಗಮಾನ, ಜ್ಯೋತಿ ಪ್ರಜ್ವಲಿಸಿದ್ದು ಇತ್ಯಾದಿಗಳು ಸಂಗೀತದ ಮಹತ್ವ ಸಾರುವ ಉದಾಹರಣೆಗಳಾಗಿವೆ.


**ಡಯಲ್ ಯುವರ್ ಇ.ಓ.**

**ಯಾತ್ರಿಕ ಭಕ್ತರಲ್ಲಿ..... ವಿನಂತಿ**

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು -ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಕಾಖಂಡಕಿಯ ಶ್ರೀ ಮಹೀಪತಿರಾಯರು

## (ಕ್ರಿ.ಶ. 1640 - 1705)

ಡಾ|| ರಾಮಚಂದ್ರ ದಾಸ್ ಸಿ.ಜೆ.
9483384584



ಶ್ರೀ ಮಹಿಪತಿರಾಯರ ಹೆಸರು ವಿಜಾಪುರ ಪ್ರಾಂತ್ಯದಲ್ಲಿ ಜನಜನಿತವಾಗಿದ್ದಷ್ಟು, ಧಾರವಾಡ ಹಾಗೂ ಮೈಸೂರು ಪ್ರಾಂತ್ಯಗಳಲ್ಲಿ ಇಲ್ಲ. ಇವರು ಮಧ್ಯಯುಗೀನ ಮುಸಲ್ಮಾನರ ಅರಸೊತ್ತಿಗೆಯಲ್ಲಿ ಉನ್ನತ ಅಧಿಕಾರಿಯಾಗಿ ಅಂದರೆ ಮಹಾವಜೀರನನ್ನು ಬಿಟ್ಟರೆ,ಅಧಿಕಾರದಲ್ಲಿ ಎರಡನೆಯ ಸ್ಥಾನವೇ ರಾಯರದ್ದಾಗಿತ್ತು. ಬೀದರ ಪ್ರಾಂತ್ಯದಿಂದ ಆಡಳಿತ ನಡೆಸುತ್ತಿದ್ದ ಬಹಮನಿ ಸುಲ್ತಾನರ ಆಡಳಿತವು, ಅಲ್ಲಿನ ಪ್ರಧಾನ ಮಂತ್ರಿ ಮಹಮೂದ ಗವಾನನ ವಧೆಯು ಕ್ರಿ.ಶ. 1471 ರಲ್ಲಿ ಆದ ನಂತರ,ರಾಜ್ಯದಲ್ಲಿ ಅರಾಜಕತೆಯುಂಟಾಗಿ, ಕ್ರಮೇಣ ಬಹಮನಿ ರಾಜ್ಯದ ಭಾಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುವಾದವು. ಆ ಸಮಯದಲ್ಲಿಯೇ ವಿಜಾಪುರದಲ್ಲಿ ರಾಜ್ಯಪಾಲನಾಗಿದ್ದ ಯುಸುಫ್‌ಖಾನನೂ ಕೂಡಾ 1489 ರಲ್ಲಿ ತಾನು ಸ್ವತಂತ್ರ ರಾಜನೆಂದು ಸಾರಿ“ ಆದಿಲಶಾಹಿ” ರಾಜ್ಯವನ್ನು ಪ್ರಾರಂಭಿಸಿದನು.

ಯುಸುಫ್‌ಖಾನನ (ಕ್ರಿ.ಶ.1489 - 1510) ಹೆಂಡತಿ (ಬೂಬೂಜಿ ಖಾನಮ್) ಹಿಂದೂ ಕನ್ಯೆಯಾಗಿದ್ದು, ಇವಳ ಪ್ರಭಾವದಿಂದ ರಾಜ್ಯಾಡಳಿತದ ಮುಖ್ಯಸ್ಥಾನಗಳಲ್ಲಿ ಹಿಪದೂಗಳ ಪ್ರಾಬಲ್ಯ ಅಧಿಕವಾಗಿತ್ತು.ಇವರ ಸಂತತಿಯೇ “ ಆದಿಲಶಾಹಿ” ಹೆಸರಿನಿಂದ ಕ್ರಿ.ಶ.1489 ಲಿಂದ 1686ರ ವರೆಗೆ ಆಳ್ವಿಕೆಯಲ್ಲಿ ಇದ್ದು, ಕೊನೆಯ ಇಬ್ಬರು ಬಾದಶಹರ ಆಡಳಿತಾವಧಿಯಲ್ಲಿ ಮಹಿಪತಿರಾಯರು ಅತ್ಯುನ್ನತ ಅಧಿಕಾರದ ಸ್ಥಾನದಲ್ಲಿದ್ದು,ರಾಜ್ಯಾಡಳಿತದ ಬಹುಭಾಗ ಇವರ ಅಧೀನದಲ್ಲಿತ್ತಾದರೂ, ಇವೆಲ್ಲವೂ, ನಾಯಿಯು ತಲೆಯ ಮೇಲಿನ ಬುತ್ತಿಯಂತೆ ಮೂರು ದಿನದ ಭಾಗ್ಯವೆಂದರಿತು,ವೈರಾಗ್ಯ ಶಾಲಿಗಳಾಗಿ ಬಾಳಿದವರು.

ಇಂತಹ ವೈರಾಗ್ಯ ಶಾಲಿಗಳು ಕ್ರಿ.ಶ. 1640 ರಲ್ಲಿ ಬೆಳಗಾವಿ ಜಿಲ್ಲೆ, ಅಥಣಿ ತಾಲೂಕಿನ ಐಗಳಿ ಗ್ರಾಮದಲ್ಲಿ ಮೌನ ಭಾರ್ಗವ ಗೋತ್ರದ ಕೋನೇರಿರಾಯನೆಂಬುವರ ಮಗನಾಗಿ “ಗುರುರಾಯ”ನೆಂಬ ಹೆಸರಿನಿಂದ ಭುವಿಯಲ್ಲಿ ಅವತರಿಸಿದರು. ಕಾಲಗತಿಸಿದಂತೆ ವಿದ್ಯಾಭ್ಯಾಸದ ನಿಮಿತ್ತ ವಿಜಾಪುರಕ್ಕೆ ಬಂದು ನೆಲೆಸಿದರು.ಆ ನಗರಕ್ಕೆ ಮೊದಲು ವಿದ್ಯಾಪುರವೆಂಬ ಹೆಸರಿತ್ತು. ಗುರುರಾಯನಿಗೆ ಬಾಲ್ಯದಿಂದಲೂ ರಾಮಾಯಣ, ಭಾಗವತ ಇತ್ಯಾದಿ ಶಾಸ್ತ್ರ ಗ್ರಂಥಗಳ ಜೊತೆಗೆ ಸಾಹಿತ್ಯ, ಸಂಗೀತದಲ್ಲಿಯೂ ಆಸಕ್ತಿ ಇದ್ದಿತು.ಮಧುರವಾದ ಕಂಠ, ನಿರರ್ಗಳ ವಾಗ್ಝರಿ ಇವುಗಳಿಂದ ಜನರು ಮಂತ್ರ ಮುಗ್ಧರಾಗುತ್ತಿದ್ದರು. ಹೀಗಾಗಿ ಇವನು ಮಾಡುತ್ತಿದ್ದ ಸುಶ್ರಾವ್ಯವಾದ ಹರಿಕಥೆಯಿಂದ ಬಹುಬೇಗ ಜನಪ್ರಿಯನಾದನು.

ಕೋನೇರಿರಾಯನ ಮುಖಾಂತರ ಖವಾಸಖಾನನೆಂಬ ಹಬಶೀ ಸರದಾರನ ಹತ್ತಿರ ಕರಣಿಕ ವೃತ್ತಿಯನ್ನು ಕೈಗೊಳ್ಳುವ ಸಮಯದಲ್ಲಿ ಮಹಮದ್ ಆದಿಲ್‌ಶಹನ ಮಗ ಎರಡನೇ ಆಲಿ ಅದಿಲ್‌ಶಹನು ರಾಜ್ಯವಾಳುತ್ತಿದ್ದನು. ಆಗ ಹೊನವಾಡದ ದೇಶಪಾಂಡೆ ಮನೆತನದ ಕನ್ಯೆ ತಿರುಮಲಾಬಾಯಿಯೊಡನೆ ವಿವಾಹವಾದ ನಂತರ ಆಕೆಯು ಪತಿಯ ಸೇವಾ ಕಾರ್ಯನಿರತಳಾದಳು. ಫಲವಾಗಿ ಗಂಡನ ಅಂತಸ್ತು, ಗೌರವ ಪ್ರವರ್ದಮಾನಕ್ಕೆ ಬಂದು, ಬಾದಶಹನ ದರ್ಬಾರದಲ್ಲಿ “ ಅಖ್ತಿಯಾರ್” ಪದವಿ ದೊರೆಯಿತು.

ಒಮ್ಮೆ ದರ್ಬಾರಕ್ಕೆ ಹೋಗುವಾಗ ದಾರಿಯಲ್ಲಿ ಷಹಾನಂಗ ಎಂಬ ಒಬ್ಬ ಸೂಫಿ. ಪಂಥದ ಫಕೀರ ರಾಯರನ್ನು ಕರೆದು ಹತ್ತಿರ ಕುಳಿತುಕೊಳ್ಳುವಂತೆ ಕರೆದನು. ಈ ಫಕೀರನಿಗೆ ವಾಕ್‌ಸಿದ್ಧಿಯಿದ್ದು, ಜನಗಳು ಭಯ ಮತ್ತು ಗೌರವದಿಂದ ಕಾಣುತ್ತಿದ್ದರು. ಆಗ ರಾಯರಿಗೆ ಉಭಯ ಸಂಕಟಕಿಟ್ಟು ಚಿಂತೆಗೊಳಗಾಗಿ ಭಯದಿಂದ ಕಂಪಿಸಿ, ಮೂಕವಿಸ್ಮಿತರಾಗಿ ಕುಳಿತುಕೊಂಡರು.ರಾಯರ ಬೆರಳಿನಲ್ಲಿದ್ದ ರಾಜಮೊಹರಿನ ಉಂಗುರವನ್ನು ಕಿತ್ತುಕೊಂಡು ಮೇಲೆ ಕೆಳಗೆ ನೋಡಿ, ವಾಸನೆ ನೋಡಿ ಆ ಮೊಹರಿನ ಉಂಗುರವನ್ನು ಕಂದಕದ ನೀರಿನಲ್ಲಿ ಎಸೆದು “ಮ್‌ತ್ಕಾಫಾಣ್ ಮ್‌ತ್ಕಾಫಾಣ್” (ಹೆಣದ ವಾಸನೆ) ಎನ್ನುತ್ತಾ ನಗುತ್ತಿದ್ದನು.ರಾಯರಿಗೆ ದಿಕ್ಕು ತೋಚದಂತಾಗಿ ದೈನ್ಯದಿಂದ ಆ ರಾಜಮೊಹರನ್ನು ಹಿಂದಿರುಗಿಸುವಂತೆ ಬೇಡಿಕೊಂಡರು. ಆಗ “ಇನ್ನೂ ನಿನಗೆ ಆ

ಉಂಗುರದ ಮೋಹವೇ" ಎಂದು ಫಕೀರನು ಪ್ರಶ್ನಿಸಿದನು. ಸರಿ... ನಿನ್ನ ಉಂಗುರವನ್ನು ಕೊಡುತ್ತೇನೆ ಎಂದು ಹೇಳಿ, ಅವನ ತಂಗಿ ಷಹಾನುಂಗಿಗೆ, "ಆ ಕಂದಕದ ನೀರಿನಲ್ಲಿ ಉಂಗುರಗಳನ್ನು ತೆಗೆದುಕೊಂಡು ಬಾ" ಎಂದು ಹೇಳಿದ ತಕ್ಷಣ ಅವಳು ನೀರಿಗೆ ಧುಮುಕಿ, ಒಂದು ಹಿಡಿಯ ತುಂಬಾ ಉಂಗುರಗಳನ್ನು ತಂದು ಕೊಟ್ಟಾಗ, ನಿನ್ನ ಉಂಗುರವನ್ನು ಆರಿಸಿಕೊ ಎಂದು ರಾಯರಿಗೆ ಹೇಳಿದಾಗ, ರಾಯರಿಗೆ ಮೈರೊಮಾಂಚನವಾಗಿ ಆಶ್ಚರ್ಯವಾಯಿತು.ಎಲ್ಲ ಉಂಗುರಗಳೂ ಒಂದೇ ತರಹ, ರಾಜಮೊಹರಿನ ಉಂಗುರದಂತೆ ಇದ್ದುದನ್ನು ಕಂಡು ಮೈ ಬೆವರಿತು, ಮನಸ್ಸು ಡೋಲಾ ಯಮಾನವಾಗಿ ದೇಹದ ಸ್ಮೃತಿ ತಪ್ಪುತ್ತಿದೆ ಎಂಬ ಭಾಸವಾಗಿ, ಸಾವರಿಸಿಕೊಂಡು ದೀನವದನರಾಗಿ ನಿಂತರು. ಕೊನಗೆ ಆ ಫಕೀರನೇ ಒಂದು ಉಂಗುರವನ್ನು ಆರಿಸಿ "ಇದೇ ನಿನ್ನ ಉಂಗುರ, ತೆಗೆದುಕೊ ಎಂದೂ ಕೊಟ್ಟು ಪುನಃ "ಮ್‌ತ್ಕಾ ಫಾಣ್" ಎಂದನು.

ರಾಯರ ಜೀವನದಲ್ಲಿ ಪರಿವರ್ತನೆಯ ಹಾದಿ ತೆರೆದು ಕೊಂಡಿತು. ಶ್ರೀಮದಾಚಾರ್ಯರು ಪ್ರಕಾಶಸಂಹಿತೆ ಗ್ರಂಥದಲ್ಲಿ ಹೇಳಿದಂತೆ ಉದ್ದಾರವಾಗುವ ಸಮಯ ಹತ್ತಿರ ಬಂದಾಗ ಗುರು ಮತ್ತು ಶಿಷ್ಯರನ್ನು ಒಂದೇ ಕಡೆ ಸೇರಿಸಿ, ಭಗವಂತನು ಸಾಧನೆ ಮಾಡಿಸಿ ಅನುಗ್ರಹಿಸುತ್ತಾನೆ ಎಂಬ ಮಾತು ರಾಯರ ಬದುಕಿನಲ್ಲಿ ಹಾಸು ಹೊಕ್ಕಾಯಿತು.ಮನಸ್ಸು ವೈರಾಗ್ಯದತ್ತ ಹೊರಳಿತು ಪ್ರಪಂಚದ ಶ್ರೀಮಂತಿಕೆ ಆಡಂಬರ, ಅಧಿಕಾರ ಇವೆಲ್ಲವೂ ಕ್ಷಣಿಕ ಮತ್ತು ತುಚ್ಛವೆನಿಸಿತು.ಅಜ್ಞಾನದ ಅಂಧಕಾರ ಮರೆಯಾಯಿತು. ಸತ್, ಚಿತ್, ಆನಂದ ಎಂಬ ಪದಗಳ ಅಖಂಡತೆ ಅರಿವಾಯಿತು, ಹೃದಯ ದೇಗುಲದಲ್ಲಿ ನೆಲೆಸಿದ ಭಗವಂತನ ಚಿಂತನೆಯಿಂದ ಜ್ಞಾನದ ಬೆಳಕ ಕಾಣಲಾರಂಭಿಸಿ, ಆಧ್ಯಾತ್ಮಿಕ ಜಗತ್ತಿನ ವೈಶಾಲ್ಯತೆ, ಪಾವಿತ್ರ್ಯತೆ ಅರಿವಾಗತೊಡಗಿತು.

"ಮ್‌ತ್ಕಾಫಾಣ್" ಪದದ ಅರ್ಥವನ್ನು ಹೇಳುವಂತೆ ರಾಯರು ಗೋಗರೆದರು. ಆಗ ಷಹಾನಂಗನು " ಅದಕ್ಕೆ ಅದೇ ಅರ್ಥ, ನಿನ್ನ ಮನಃ ಪರಿವರ್ತನೆಯಾಗಿದೆ. ಉದ್ಧಾರವಾಗುವ ಸಮಯ ಬಂದಿದೆ. ನಿನಗೊಬ್ಬ ಯೋಗ್ಯ ಗುರುಗಳ ಅವಶ್ಯಕತೆ ಇದೆ.ನೀನು ಅಧಿಕಾರವನ್ನು ತ್ಯಾಗ ಮಾಡಿ ಸಾರವಾಡದಲ್ಲಿರುವ ಭಾಸ್ಕರಸ್ವಾಮಿಗಳ ಪಾದದಲ್ಲಿ ಶರಣಾಗು, ಅವರೇ ನಿನಗೆ ಯೋಗ್ಯ ಗುರುಗಳು,ಆಗ ನಿನಗೆ ಈ ಪದದ ಅರ್ಥ ಮತ್ತು ನಿಜವಾದ ಸುಖ ಯಾವುದು ಎನ್ನುವುದು ಅರಿವಾಗುತ್ತದೆ." ಎಂದು ಹೇಳಿದನು.

ಮಾಸಗಳುರುಳಿದರೂ ರಾಯರಿಗೆ ಸಂತಾನ ಭಾಗ್ಯವು ದೊರೆತಿರಲಿಲ್ಲ. ಈ ಕಾರಣದಿಂದಾಗಿ ರಾಯರ ಪತ್ನಿಯ ಸುಮಾರು ಆರು ತಿಂಗಳಿನಿಂದಲೂ ಭಾಸ್ಕರ ಸ್ವಾಮಿಗಳ ಅನುಗ್ರಹ ಪಡೆಯಲು ಸಾರವಾಡಕ್ಕೆ ಹೋಗಿ ಬರುತ್ತಿದ್ದರೂ, ಸ್ವಾಮಿಗಳು ಸಮಾಧಿ ಸ್ಥಿತಿಯಲ್ಲಿ ತಪಸ್ಸಿಗೆ ಕುಳಿತ್ತಿದ್ದರಾದ ಕಾರಣ ದರ್ಶನವೂ ಆಗಿರಲಿಲ್ಲ.ಮನಸ್ಸಿನ ವಿಹ್ವಲತೆಯಿಂದ ರಾಯರು ಅಂದು ಬೇಗನೆ ಮನೆಗೆ ಬಂದು, ಹೆಂಡತಿಗೆ ಅಂದು ತಮಗಾದ ಅನುಭವವನ್ನು ಹೇಳಿ, ಸಾರವಾಡಕ್ಕೆ ಭಾಸ್ಕರ ಸ್ವಾಮಿಗಳ ದರ್ಶನಕ್ಕೆ ನಾಳೆಯೇ ಹೋಗೋಣ ಎಂದಾಗ ವೈದ್ಯರು ಹೇಳಿದ್ದು, ರೋಗಿ ಬಯಸಿದ್ದು ಒಂದೇ ಆದಂತಾಗಿ, ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಹ ಅನುಭವವಾಗಿ, ಆಶ್ಚರ್ಯ, ಉದ್ವೇಗ, ಸಂತೋಷ ವಾಗಿ ಆಕೆಯ ಆನಂದಕ್ಕೆ ಪಾರವೇ ಇರಲಿಲ್ಲ.

ಮರುದಿನ ರಾಯರು ಪತ್ನಿ ಸಮೇತರಾಗಿ ಭಾಸ್ಕರ ಸ್ವಾಮಿಗಳ ಸನ್ನಿಧಾನಕ್ಕೆ ಹೋಗಿ ನಮಸ್ಕರಿಸಿದಾಗ ಅಚ್ಚರಿಯಾಗುವಂತಹ ಘಟನೆ ನಡೆಯಿತು. ಸ್ವಾಮಿಗಳು "ನಾವು ಬಂದು ಆರು ತಿಂಗಳಾದರೂ ನಿಮಗೆ ಇಲ್ಲಿಗೆ ಬರಲಿಕ್ಕಾಗಲಿಲ್ಲ, ಷಹಾನಂಗನ ಘಟನೆಯ ಕಾರಣದಿಂದಾಗಿ ಇಲ್ಲಿಗೆ ಬರುವಂತಾಯಿತು. ಅಲ್ಲವೇ? ನಿನ್ನ ಪತ್ನಿಯೂ ಆರು ತಿಂಗಳಿನಿಂದ ಇಲ್ಲಿಗೆ ಬಂದು ನಮ್ಮ ಸೇವೆ ಮಾಡಿದ್ದರ ಫಲಿತವಾಗಿ ನಿಮ್ಮ ವಂಶ ಬೆಳಗುವಂತಹ ಪುತ್ರ ಸಂತಾನ ನಿಮಗಾಗುತ್ತದೆ. ನಿಮ್ಮಿಂದ ಜನರ ಉದ್ಧಾರವಾಗಬೇಕಾಗಿದೆ. ಭಗವಂತನ ಸಾಕ್ಷಾತ್ಕಾರ ಪಡೆಯಿರಿ " ಎಂದು ಹೇಳಿ ರಾಯರ ಮಸ್ತಕದ ಮೇಲೆ ಕ್ಷಣ ಹೊತ್ತು ತಮ್ಮ ಹಸ್ತವನಿಟ್ಟಾಗ,ಅವರ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಗಿ, ಕೋಟಿ ಸೂರ್ಯರ ಪ್ರಭೆಯು ಹೊಳೆದಂತಾಗಿ ಮೈನಡುಗಿತು ಬ್ರಹ್ಮಸಾಕ್ಷಾತ್ಕರವಾಯಿತು.

ಗುರುಗಳ ಅನುಗ್ರಹಕ್ಕೆ ಪಾತ್ರರಾದ ರಾಯರು, ತಮ್ಮ ಲೌಕಿಕ ವೃತ್ತಿಯನ್ನು ತ್ಯಜಿಸಿ, ಗಳಿಸಿದ್ದ ಸಂಪತ್ತಿನ ಬಹುಭಾಗವನ್ನು ಬಡಜನರಿಗೆ ದಾನ ಮಾಡಿದರು. ಅವಳಿ ಜವಳಿ ಪುತ್ರ ಸಂತಾನವೂ ಆಗಿ, ಒಬ್ಬನಿಗೆ ದೇವರಾಯನೆಂದು , ಮತ್ತೊಬ್ಬನಿಗೆ ಕೃಷ್ಣರಾಯನೆಂದೂ ನಾಮಕರಣ ಮಾಡಿದರು.

ಭಾಸ್ಕರ ಸ್ವಾಮಿಗಳ ಬಳಿ ಯೋಗ ನಿರತರಾಗಿ ಬ್ರಹ್ಮ ಸಾಕ್ಷಾತ್ಕಾರದ ಪರಮಾವಧಿಯನ್ನು ತಲುಪಲು ಸಾಧಿಸುತ್ತಾ ಹನ್ನೆರಡು ವರ್ಷ ಸಾಧಿಸಿದರೂ ಸಾಧ್ಯವಾಗದನ್ನು 4-5 ವರ್ಷಗಳಲ್ಲಿ ಸಾಧಿಸಿದರು. ಆಗ ಭಾಸ್ಕರ ಸ್ವಾಮಿಗಳು, ನಿನ್ನ ಗುರು ಷಹಾನಂಗನೇ ಹೊರತು ನಾನಲ್ಲ, ನನ್ನಲ್ಲಿ ಕೇವಲ ನಿನ್ನ ಅಭ್ಯಾಸ ಮಾತ್ರ ಎಂದು ಹೇಳಿ, ವಿಜಾಪುರಕ್ಕೆ ಹೋಗಲು ಸೂಚಿಸಿದರು.ಇವರ ಜೊತೆಗೆ ರುಕ್ಮಿಣೀ ಪಂಡಿತರು, ಜಕ್ಕಪ್ಪಯ್ಯನವರು ಸಹಾಧ್ಯಾಯಿಗಳಾಗಿದ್ದರು.

ಇವರು ಸಂಗೀತದಲ್ಲಿ ನಿಷ್ಣಾತರಾದ್ದರಿಂದ ಕೃತಿಗಳನ್ನು ರಚಿಸಿ ಹಾಡಲು ಪ್ರಾರಂಭಿಸಿ ಅಧ್ಯಾತ್ಮ ಜಗತ್ತಿಗೆ ಅಮೂಲ್ಯ ಕೊಡುಗೆ ನೀಡಿದರು. "ಇಂದೆನ್ನ ಜನ್ಮ ಪಾವನವಾಯಿತು ತಂದೆ

ಶ್ರೀಗುರುಗಳ ಚರಣ ದರುಶನದಿಂದ"ಎಂಬ ಕೃತಿಯಲ್ಲಿ ಗುರುಗಳ ದಯದಿಂದ ಸಾಕ್ಷಾತ್ಕಾರ ವಾದ ಬಗೆಯನ್ನು ವಿವರಿಸಿದ್ದಾರೆ. ಇವರ ಪದಗಳಲ್ಲಿ ಮುಖ್ಯವಾಗಿ ಯೋಗದ ಅನುಭವಗಳು ಜಾಸ್ತಿ ಇದೆ. ಇವರ ಮಾತುಗಳು ಒಗಟಿನಂತಿದ್ದರೂ, ಮನಸ್ಸು ಮಾತ್ರ ಮೃದು.ಇವರಿಗೆ ಜಾತಿಮತ ಭೇದವಿಲ್ಲದೆ ಎಲ್ಲರೂ ಶಿಷ್ಯರಾಗಿದ್ದುದು ವಿಶೇಷ.ಇವರ "ಮಹಿಪತಿ" ಎನ್ನುವ ಅಂಕಿತದಿಂದ ಸಾವಿರಾರು ಕೃತಿಗಳನ್ನು ರಚಿಸಿರಬಹುದಾದರೂ ಎಲ್ಲವೂ ದೊರೆಯದೇ ಇರಬಹುದಾದ ಸಾಧ್ಯತೆಯಿದೆ.ಇವರು ಬಹು ಭಾಷಾ ಪ್ರವೀಣರು.

ಇವರಿಗೆ ತುಕ್ಕವ್ವನೆಂಬ ಸೋದರಿಯಿದ್ದಳು. ಈಕೆಯ ಮೇಲೆ ರಾಯರಿಗೆ ಅಪಾರ ಗೌರವ. ಈಕೆಯೇ ಗೃಹಕೃತ್ಯದ ಜವಾಬ್ದಾರಿ ಹೊತ್ತಿದ್ದಳು. ರಾಯರ ಶಿಷ್ಯ ಮುರುಡಪ್ಪನ ಹೆಂಡತಿಯು ಮರಣದ ಶಯ್ಯೆಯಲ್ಲಿದ್ದಾಗ, ಆಕೆಗೆ ತಮ್ಮ ಆಯುಸ್ಸಿನಲ್ಲಿ ಕೆಲವು ವರ್ಷಧಾರೆಯೆರೆದು ಬದುಕಿಸಿದ ಮಹಿಮರು.ದಿನನಿತ್ಯದ ವ್ಯವಹಾರವನ್ನು ನಡೆಸಲು ತಮ್ಮ ಹಾಸಿಗೆಯ ಕೆಳಗೆ ಕೈ ಹಾಕಿ ಹಣವನ್ನು ತೆಗೆದು ಕೊಡುತ್ತಿದ್ದುದು ವಿಶೇಷ. ಈ ವಿಷಯ ಊರ ಗೌಡನಿಗೆ ತಿಳಿದು,ಇವರಿಗೆ ಇಷ್ಟೊಂದು ಹಣ ಎಲ್ಲಿಟ್ಟಿರುತ್ತಾರೆ ಎಂಬುದರ ಬಗ್ಗೆ ರಾಯರ ಮನೆಯ ಸೇವಕನನ್ನು ಕೇಳಿದಾಗ, ನಾನು ನಿತ್ಯ ಅವರ ಹಾಸಿಗೆಯನ್ನು ಹಾಸುತ್ತೇನೆ ಆದರೆ ಎಲ್ಲಿಯೂ ಹಣ ಇರುವುದನ್ನು ನೋಡಿಲ್ಲ ಎಂದನು.ಇದನ್ನು ಪರೀಕ್ಷಿಸಲು ಹೋಗಿ ಆ ಗೌಡನು ಶಾಪಗ್ರಸ್ತನಾಗಿ ತೊಳಲಾಡಿದನು ಎಂಬ ಪ್ರತೀತಿ ಇದೆ.

ರಾಜಕೀಯ ಅವ್ಯವಸ್ಥೆ,ಸಾಮಾಜಿಕ ಅವನತಿ,ಧಾರ್ಮಿಕ ಅಸ್ಥಿರತೆಗಳು ತುಂಬಿದ್ದ ಕಾಲದಲ್ಲಿ ರಾಯರು ತಮ್ಮ ಕೃತಿಗಳ ಮೂಲಕ ದಿಕ್ಕೆಟ್ಟಿದ್ದ ಸಮಾಜಕ್ಕೆ ಧೈರ್ಯ, ಭರವಸೆ, ಆಸೆ ತುಂಬಿ ಹೃದಯದ ಹಣತೆಗಳನ್ನು ಬೆಳಗಿಸಿ ಮಾನವೀಯತೆಯ ಬೆಳಕು ಚೆಲ್ಲಿ ಹಿಂದೂ ಧರ್ಮವನ್ನು ಕಾಪಾಡಿದ ಮಹಿಮರು.

ರಾಯರ ಅನುಗ್ರಹದಿಂದ ಅವರ ಮಕ್ಕಳಿಬ್ಬರೂ ಕಾಲಾಂತರದಲ್ಲಿ ಪ್ರಖ್ಯಾತ ಯೋಗಿಗಳು, ಕವಿಗಳೂ ಆಗಿ ಅನೇಕ ಯೋಗ ಸಂಬಂಧಿ ಪದಗಳನ್ನು ರಚಿಸಿದ್ದಾರೆ.ರಾಯರ ಕಡೆಗಾಲದಲ್ಲಿ ಷಹಾನಂಗನ ದರ್ಶನವಾಗಿ,ರಾಯರೇ ಹ್ಯಾಂಗಿದೆ ಸುಖ''ಸೌಬತ್ತು ಕೇಳಿಸಿತೋ ಎಂದು ಕೇಳಿ ದನು.ಅದಕ್ಕೆ ರಾಯರು"ಪರಮಾನಂದ, ಕೇಳಿಸಿತು ಎಂದು ಇಬ್ಬರೂ ಒಬ್ಬರನ್ನೊಬ್ಬರು ನೋಡಿ ನಕ್ಕರು ಅದರ ಅಂತರಾರ್ಥ ಅವರಿಗೇ ಗೊತ್ತು.

ಕಾಖಂಡಕಿಯ ಮಹಿಪತಿರಾಯರು ಸುಮಾರು ಅರವತ್ತೈದು ವರುಷ ಬಾಳಿ ಬದುಕಿದವರು. ತಮ್ಮ ಅವಸಾನ ಕಾಲ ಸಮೀಪವಾಗಿದೆಯೆಂದು ತಿಳಿದಾಗ, ತಮ್ಮ ಕುಲಗುರುಗಳಾದ ಕೊಲ್ಹಾರದ ಕೃಷ್ಣಾಚಾರ್ಯರನ್ನು ನೋಡಲು ಮಗ ಕೃಷ್ಣರಾಯನೊಡನೆ ಕೊಲ್ಹಾರಕ್ಕೆ ತೆರಳಿ ಅಲ್ಲಿ 6 ದಿನಗಳಿದ್ದು 7 ನೇ ದಿನದಂದು ಕೃಷ್ಣಾ ನದಿಯ ಸ್ನಾನ ಮಾಡಿ ಅದರ ದಡದಲ್ಲಿ ಅನುಷ್ಠಾನಕ್ಕೆ ಕುಳಿತು ತಮ್ಮ ದೇಹತ್ಯಾಗವನ್ನು ಮಾಡಿದರು.ಪುತ್ರದ್ವಯರಿಬ್ಬರೂ ಉತ್ತರ ಕ್ರಿಯೆಗಳನ್ನು ಮುಗಿಸಿ ಅಸ್ತಿ ಸಂಚಯನ ಮಾಡುತ್ತಿದ್ದಾಗ ಕೈಯಲ್ಲಿ ಹಿಡಿದ ಅಸ್ತಿಗಳು ನೀರಾಗಿ ಹೋದವೆಂದು, ಅಶರೀರ ವಾಣಿಯಲ್ಲಿ" ಆ ಅಸ್ತಿಗಳು ಗಂಗೆಯಲ್ಲಿ ವಿಸರ್ಜಿತವಾದವೆಂದು,ಕಾಖಂಡಕಿಯಲ್ಲಿ ರಾಯರು ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಿದ್ದ ಶಮೀವೃಕ್ಷದ ಕೆಳಗೆ ಹನ್ನೆರಡು ಸಾಲಿಗ್ರಮಗಳಿರುದೆಂದೂ ಅವುಗಳನ್ನು ತೆಗೆದು ಅದೇ ಜಾಗದಲ್ಲಿ ವೃಂದಾವನವನ್ನು ನಿರ್ಮಿಸಬೇಕೆಂಬ ಸೂಚನೆಯಾಯಿತೆಂದೂ, ಕ್ರಿ.ಶ. 1705 ರಲ್ಲಿ,ಕಾಖಂಡಕಿಯಲ್ಲಿ ಈಗಿರುವ ವೃಂದಾವನವು ಹಾಗೆಯೇ ನಿರ್ಮಿತವಾಯಿತೆಂಬ ಪ್ರತೀತಿ ಇದೆ.

ವೃಂದಾವನದಲ್ಲಿನ ಸಾನಿಧ್ಯ ಸಾಕ್ಷಿಗಾಗಿ,ಕೃಷ್ಣರಾಯರು "ವೃಂದಾವನೀದೇವಿ ತಂದೆ ಮಹಿಪತಿಯ ಪಾದವ ತೋರೆ ಎಂದು ಹಾಡಲು, ಸಾಕ್ಷಾತ್ ಮಹಿಪತಿರಾಯರು ವೃಂದಾವನದಿಂದ ತಮ್ಮ ಪಾದುಕೆಗಳನ್ನು ನೀಡಿದ್ದು ಅವುಗಳು ಇಂದಿಗೂ ಪೂಜೆಗೊಳ್ಳುತ್ತಿವೆ ಎಂಬುದು ಆಸ್ತಿಕರ ನಂಬಿಕೆ ಇಂತಹ ಮಹಾನುಭಾವರನ್ನು ಸ್ಮರಿಸುವುದೇ ಒಂದು ಪುಣ್ಯ.

## ಪೌರ್ಣಮಿ ಗರುಡಸೇವೆ

*ಕೇವಲ ನಕ್ಷತ್ರೋತ್ಸವದಲ್ಲಿ ಅಲ್ಲದೆ, ಪ್ರತಿ ತಿಂಗಳೂ ಪ್ರತಿ ಪೌರ್ಣಮಿಯ ರಾತ್ರಿ ಹೊತ್ತು ತಿರುಮಲೇಶನಿಗೆ "ಪೌರ್ಣಮಿ ಗರುಡ ಸೇವೆ" ನಿರ್ವಹಿಸುತ್ತಾರೆ. ಪೌರ್ಣಮಿಯಂದು ರಾತ್ರಿ 7.00 ಗಂಟೆಯ ಸಮಯದಲ್ಲಿ ವಜ್ರ ಕವಚ, ವಜ್ರಕಿರೀಟಾದಿ ಸರ್ವಾಭರಣ ಭೂಷಿತನಾಗಿ ಶ್ರೀ ಮಲೆಯಪ್ಪ ಸ್ವಾಮಿಯು ಚಿನ್ನದ ಗರುಡ ವಾಹನದ ಮೇಲೆ ಬರುತ್ತಾರೆ. ಛತ್ರ ಚಾಮರದೊಂದಿಗೆ, ಗಜತುರಗ ವೃಷಭ ರಾಜರೊಂದಿಗೆ ತಿರುಮಲೆಯ ಪುರವೀಧಿಗಳಲ್ಲಿ ವಿಹರಿಸುತ್ತಾ ದರ್ಶನ ನೀಡುವರು.*

ಧಾರಾವಾಹಿ

# ವೇದಗಳಲ್ಲಿ ವಿಜ್ಞಾನ

ಅವಕಾಶವೇ ಆಕಾಶ. ಆಕಾಶವು ಅಂತರಿಕ್ಷ ಮತ್ತು ದ್ಯುಲೋಕ ಎಂದು ಎರಡು ಎರಡಾಗಿದೆ. ಭೂಮಿಯ ಮೇಲಿರುವುದು ದ್ಯುಲೋಕ, ದ್ಯುಲೋಕ ಭೂಮಿಗಳ ಮಧ್ಯದಲ್ಲಿರುವುದು ಅಂತರಿಕ್ಷ.ಅಂತರಿಕ್ಷ ದೇವತೆಗಳಲ್ಲಿ ಇಂದ್ರನು ಪ್ರಧಾನವಾಗಿದ್ದಾನೆ. ವಾತ, ಪರ್ಜನ್ಯ,ಅಪ್ ಅಪಾಂನಪಾತ್,ರುದ್ರ, ಮರುತ್ ಮುಂತಾದ ಇತರ ದೇವತೆಗಳು ಅಂತರಿಕ್ಷದಲ್ಲಿ ಇವೆ. ಇಂದ್ರನು ಸಿಡಿಲು ಗುಡುಗು ಮಿಂಚುಗಳನ್ನು ಹುಟ್ಟಿಸುತ್ತಾನೆ. ಪರ್ಜನ್ಯಗಳು ನೀರನ್ನು ಧರಿಸುತ್ತವೆ.ಗಾಳಿಯು ಬೆಂಕಿಯ ಹುಟ್ಟಿಗೆ ಜೀವಿಗಳ ಸೃಷ್ಟಿಗೆ ಸಹಕಾರಿ,ಅಪಾಂನಪಾತ್ ಅಗ್ನಿ ರೂಪವಾಗಿದೆ. ಇವೆಲ್ಲದರ ಪ್ರಭಾವದಿಂದ ಭೂಮಿ ಅಂತರಿಕ್ಷಗಳ ಮಧ್ಯದಲ್ಲಿ ಮಳೆ ಬೆಳೆಗಳು ಉಂಟಾಗುತ್ತವೆ. ಅಪಾಂನಪಾತ್ ಅಗ್ನಿರೂಪವಾದರೂ ನೀರನ್ನು ತುಂಬಿಕೊಂಡು ಆಕಾಶದಲ್ಲಿ ತೇಲಾಡುತ್ತಿರುವ ಮೋಡಗಳನ್ನು ಕೆಳಗೆ ಬೀಳದಂತೆ ತಡೆ ಹಿಡಿದಿದೆ. ಮೋಡಗಳು ಕೆಳಗೆ ಬೀಳದಂತೆ ಆಕಾಶದಲ್ಲಿ ನಿಲ್ಲಿಸಿರುವುದೇ ಆ ಅಪಾಂನಪಾತ್ ಎಂಬ ಅಗ್ನಿ.

ಹಿರಣ್ಯರೂಪಃ ಸ ಹಿರಣ್ಯ ಸಂದೃಕ್
ಅಪಾಂನಪಾತ್ ಸೇದು ಹಿರಣ್ಯವರ್ಣಃ ।
ಹಿರಣ್ಯಯಾತ್ ಪರಿಯೋನೇರ್ನಿಷದ್ಯಾ
ಹಿರಣ್ಯದಂ ದದಾತ್ಯನ್ನಮಸ್ಮೈ ॥

(ಋಗ್ವೇದ 2-35-10)

ಅಪಾಂನಪಾತ್ ಅಗ್ನಿಯು ಚಿನ್ನದ ಬಣ್ಣದಿಂದ ಹೊಳೆಯುತ್ತದೆ. ಇದು ಸಮುದ್ರ ಮಧ್ಯದಲ್ಲಿ ಬಡಬಾಗ್ನಿಯಾಗಿದೆ. ಹಾಗಾಗಿ ಪ್ರತಿದಿನವೂ ಎಷ್ಟೋ ನದಿಗಳು ಸಮುದ್ರವನ್ನು ಸೇರುತ್ತಿದ್ದರೂ ಅಪಾರ ಜಲರಾಶಿಯುಳ್ಳ ಸಮುದ್ರವು ಉಕ್ಕಿ ಮುಂದೆ ಹರಿಯುವುದಿಲ್ಲ. ಇದ್ದಲ್ಲೇ ಭೋರ್ಗರೆಯುತ್ತದೆ. ಇದಕ್ಕೆ ಅದರೊಳಗಿರುವ ಅಗ್ನಿಯ ನಿಯಂತ್ರಣ ಕಾರಣ. ಸಮುದ್ರವನ್ನು ಕಡೆದಾಗ ಉಚ್ಚೈಶ್ರವನ್ ಮುಂತಾದ ಕುದುರೆಗಳು ಹುಟ್ಟಿದವು. ಸಮುದ್ರದೊಳಗಿರುವ ಈ ತೇಜಸ್ಸಿನಿಂದ ಎಲ್ಲವೂ ಹುಟ್ಟಿದವಂತೆ. "ಅಪಾಂನಪಾದಸುರ್ಯಸ್ಯ ಮಹ್ನಾ ವಿಶ್ವಾನ್ಯಯೋರ್ಭುವನಾ ಜಜಾನ" (ಋಗ್ವೇದ 2-35-2) ಎಂಬ ಮಂತ್ರ ಇದನ್ನು ಹೇಳುತ್ತಿದೆ. ನೀರಿನೊಳಗಿರುವ ವಿದ್ಯುತ್ತನ್ನು ಅಶ್ವ ಸಾಮರ್ಥ್ಯದಿಂದ ಅಳೆಯುತ್ತಾರೆ.



ಇನ್ನು ಆಕಾಶದಲ್ಲಿ ಪ್ರಕಾಶಮಾನವಾಗಿ ಹೊಳೆಯುವವನು ಸೂರ್ಯ,ಇವನಿಗೆ ಸವಿತಾ ಎಂಬ ಮತ್ತೊಂದು ಹೆಸರಿದೆ. ಸೂರ್ಯ ಹುಟ್ಟುವುದಕ್ಕೆ ಮೊದಲು ಇವನಿಗೆ ಸವಿತಾ ಎಂದು ಹೆಸರು. ಸವಿತೃವು ಅಂತರಿಕ್ಷಕ್ಕೂ ಮೇಲೆ ದ್ಯುಲೋಕದಲ್ಲಿದ್ದಾನೆ.ಸೂರ್ಯನು ಕಣ್ಣಿಗೆ ಕಂಡಾಗ ಅದು ಹಗಲು. ಅವನು ಮರೆಯಾದಾಗ ರಾತ್ರಿ.ಈ ಹಗಲು ರಾತ್ರಿಗಳು ಭೂಮಿಯ ಚಲನದ ಕಾರಣ ಉಂಟಾಗುತ್ತದೆ. ಸವಿತೃವು ಪ್ರಕಾಶಮಾನನಾಗಿ ಪೂರ್ವದಲ್ಲಿ ಹುಟ್ಟಿ ಸೂರ್ಯನಾಗಿ ದ್ಯುಲೋಕ ಮಧ್ಯದಲ್ಲಿ ಪ್ರಕಾಶಿಸುತ್ತಾನೆ. ಸೂರ್ಯನು ನಿಶ್ಚಲ,ಚಲಿಸುವುದಿಲ್ಲ. ಆದರೆ ಭೂಮಿಯ ಸುತ್ತುವಿಕೆಯ ಕಾರಣದಿಂದ ಸೂರ್ಯನು ಚಲಿಸಿದಂತೆ ಕಾಣುತ್ತಾನೆ. ಈ ವಿಜ್ಞಾನ ಸತ್ಯವನ್ನು ಈ ಮಂತ್ರ ಹೇಳುತ್ತದೆ.

ವಿಸುಪರ್ಣಃ ಅಂತರಿಕ್ಷಾನ್ಯಾಬ್ಯತ್
ಗಭೀರವೇಪಾಃ ಅಸುರಃ ಸುನೀಥಃ।
ಕ್ವೇದಾನೀಂ ಸೂರ್ಯಃ ಕಚ್ಚಿಕೇತ
ಕತಮಾಂ ದ್ಯಾಂ ರಶ್ಮಿರಸ್ಯಾ ಆತತಾನ ॥

(ಋ.ಸಂ.1-35 -7)

ಸೂರ್ಯನ ಕಿರಣಗಳು ಹಗಲಿನಲ್ಲಿ ಇಡೀ ಲೋಕವನ್ನೇ ಬೆಳಗಿದುವು. ಪ್ರಾಣರಕ್ಷಕನಾದ ಸೂರ್ಯನು ಎಲ್ಲರಿಗೂ ಬೆಳಕನ್ನು ನೀಡಿ ದಾರಿತೋರಿ

- ಡಾ॥ ಟಿ.ವಿ. ಸತ್ಯನಾರಾಯಣ

ಎಲ್ಲರ ದೇಹದೊಳಗೆ ಕಿರಣಗಳನ್ನು ತೂರಿಸಿ, ಜೀವಸತ್ವವನ್ನು ಹುಟ್ಟಿಸಿ ಜೀವಿಗಳನ್ನು ಕರ್ತವ್ಯಗಳಲ್ಲಿ ತೊಡಗಿಸಿದನು. ಅಂತಹ ಸೂರ್ಯನು ರಾತ್ರಿ ಎಲ್ಲಿ ಹೋದ, ಯಾರಿಗೆ ಗೊತ್ತು ಅಂದರೆ - ಹಾಗಲ್ಲ ಈ ರಾತ್ರಿ ಅವನು ಬೇರೊಂದು ಲೋಕವನ್ನು ಬೆಳಗಲು ಹೋಗಿದ್ದಾನೆ

ಆಯಂ ಗೌಃದೃಶ್ನಿರಕ್ರಮಿದಸನ್ಮಾತರಂ ಪುರಃ।
ಪಿತರಂ ಚ ಪ್ರಯಂತ್ಸ್ವಃ ॥ (ಋಗ್ವೇದ 10-189-22)

ಈ ಭೂಮಿಯು ತನ್ನ ಅಕ್ಷದ ಮೇಲೆ ಸುತ್ತುತ್ತಾ ನಮ್ಮ ರಕ್ಷಕನಾದ ಕಾಲ ಮಾಪಕನಾದ ಸೂರ್ಯನ ಸುತ್ತ ಸುತ್ತುತ್ತಿರುವುದರಿಂದ ಹಗಲು ರಾತ್ರಿಗಳಾಗುತ್ತಿವೆ. ಚಲಿಸುವ ಭೂಮಿ ಸೂರ್ಯನ ಸುತ್ತಾ ಸುತ್ತುವಾಗ ಕ್ರಿಯೆ ಪ್ರತಿಕ್ರಿಯೆಗಳು ನೇರ-ವಿರುದ್ಧವಾಗಿರುವುದರಿಂದ ಸೂರ್ಯನು ಚಲಿಸಿದಂತೆ ಕಾಣುತ್ತಿದ್ದಾನೆ ಅಷ್ಟೆ ಎಂಬ ವಿಜ್ಞಾನವನ್ನು ಈ ಮೇಲಿನ ಮಂತ್ರಗಳು ಹೇಳುತ್ತವೆ. ಹೀಗೆ ಎಷ್ಟೋ ವೈಜ್ಞಾನಿಕ ಸತ್ಯಗಳನ್ನು ವೇದಮಂತ್ರಗಳು ಹೇಳುತ್ತವೆ. ಅದನ್ನು ನಾವು ಓದಿ ತಿಳಿಯಬೇಕು ಅಷ್ಟೆ. ಒಟ್ಟಾರೆ ಆಕಾಶದಲ್ಲಿ ಸೂರ್ಯ ಗಾಳಿ, ನಕ್ಷತ್ರಗಳು, ಗ್ರಹಗಳು ಎಲ್ಲವೂ ಸಂಚರಿಸುವುದು, ಇರುವುದು. ಇವೆಲ್ಲಕ್ಕೂ ಆಶ್ರಯವಾದ ಪಂಚಭೂತಗಳಲ್ಲಿ ಒಂದಾದ ಆಕಾಶವು ವಿಶ್ವವ್ಯಾಪಕವಾಗಿದ್ದು ಆದ್ಯಂತಗಳಿಲ್ಲದೆ ಅನಂತವಾಗಿದೆ.

ನಮ್ಮ ಇಡೀ ಜೀವಕೋಟಿಗಳನ್ನು ನಿಯಂತ್ರಿಸಿರುವುದು ಒಂದು ಅದ್ಭುತವಾದ ಶಕ್ತಿ. ಅದನ್ನು ನಾವು ನೋಡಲು ಆಗದು, ಆದರೆ ಅದನ್ನು ಇತರ ವಸ್ತುಗಳ ಚಲನವಲನಾದಿ ವ್ಯವಹಾರಗಳಿಂದ ತಿಳಿಯಲು ಸಾಧ್ಯ ಎನ್ನುವುದನ್ನು ಶುಕ್ಲಯಜುರ್ವೇದದ ಈಶಾವಾಸ್ಯೋಪನಿಷತ್ತಿನ ಮೊದಲನೆಯ ಮಂತ್ರವು ಹೀಗೆ ಹೇಳುತ್ತದೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಮ್॥

ನಮ್ಮ ಕಣ್ಣಿಗೆ ಕಾಣುತ್ತಿರುವ ಪ್ರಪಂಚ ಅತ್ಯಲ್ಪ. ಕಾಣದಿರುವ ಪ್ರಪಂಚವೇ ಅಪಾರ ಇಂತಹ ವ್ಯಕ್ತ - ಅವ್ಯಕ್ತವಾದ ಪ್ರಪಂಚದೊಳಗೆ ಎಲ್ಲಾ ಶಕ್ತಿಗಳನ್ನು ನಿಯಂತ್ರಿಸಿ ಮುನ್ನಡೆಸುತ್ತಿರುವ ಅದ್ಭುತವಾದ ಶಕ್ತಿಯೊಂದು ಇಡೀ ಜಗತ್ತನ್ನು ವ್ಯಾಪಿಸಿಕೊಂಡಿದೆ. ಹಾಗಾಗಿ ಈ ಭೂಮಿಯಲ್ಲಿ ನನ್ನನ್ನು, ಎಲ್ಲವೂ ನನ್ನಿಂದಲೇ ಆಗುತ್ತಿದೆ ಎಂಬ ಅಹಂಭಾವವನ್ನು ಬಿಟ್ಟು ಇದು ಭಗವಂತನದು, ಅವನು ಕೊಟ್ಟದ್ದನ್ನು ನಾನು ಅನುಭವಿಸುತ್ತಿದ್ದೇನೆ, ಎಂಬ ವಿನಯ ಭಾವದಿಂದ ನಾವು ಜೀವನದಲ್ಲಿ ಮುನ್ನಡೆಯಬೇಕು. ಆಗಲೇ ನಮ್ಮ ಜೀವನದ ಉನ್ನತಿ ಸಾಧ್ಯ ಎನ್ನುವುದು ಈ ಮಂತ್ರದ ಅರ್ಥ.

ಇಂದಿನ ಆಧುನಿಕ ಕಾಲದ ಎಷ್ಟೋ ವೈಜ್ಞಾನಿಕ ಸತ್ಯಗಳನ್ನು ಆವಿಷ್ಕಾರಗಳನ್ನು ನಮ್ಮ ಹಿಂದಿನವರು ಎಲ್ಲರಿಗಿಂತ ಮುಂಚೆಯೇ ತಿಳಿದಿದ್ದರು. ಅವು ವೇದಮಂತ್ರಗಳಲ್ಲಿ ಅಡಗಿವೆ. ಅವನ್ನು ಸಂಶೋಧಿಸಿ ಚೆನ್ನಾಗಿ ಚಿಂತಿಸಿ ತೀರ್ಮಾನಿಸಿ ನಮ್ಮ ಜನತೆಗೆ ನೀಡುವುದು ಬಲ್ಲವರ ಆದ್ಯ ಕರ್ತವ್ಯವಾಗಿದೆ.

ಬ್ರಹ್ಮವಾ ಇದಮಗ್ರ ಆಸೀತ್, ತದಾತ್ಮನಮೇವಾವೇತ್
ಅಹಂ ಬ್ರಹ್ಮಾಸ್ಮೀತಿ ತಸ್ಮಾತ್ ತತ್ಸರ್ವಮ ಭವತ್ ॥
(ಬೃ.ಉ.1-4-10)

(ಸಮಾಪ್ತಿ)

## ಕೋಯಿಲ್ ಆಳ್ವಾರ್ ತಿರುಮಂಜನ

ಕೋಯಿಲ್ ಎಂದರೆ ದೇವಸ್ಥಾನ, ಆಳ್ವಾರ್ ಭಗವಂತನಲ್ಲಿ ಐಕ್ಯನಾದ ಭಕ್ತನು. ಭಗವಂತನನ್ನು ತನ್ನ ಹೃದಯಸ್ಥಾನದಲ್ಲಿ ಪ್ರತಿಷ್ಠಾಪಿಸಿದಂತೆ ಗುಡಿಯಲ್ಲಿ (ದೇವಸ್ಥಾನದಲ್ಲಿ) ದೇವರನ್ನು ಪ್ರತಿಷ್ಠಾಪಿಸುತ್ತಾರೆ. ಅದಕ್ಕೆ ಕೋಯಿಲ್ ಆಳ್ವಾರ್ ಎಂದು ಗುಡಿಯನ್ನು (ದೇವಸ್ಥಾನವನ್ನು) ಕರೆಯುತ್ತಾರೆ. ತಿರುಮಜ್ಜನವೇ ತಿರುಮಂಜನ ಆಯಿತು. ತಿರುಮಜ್ಜನ ಅಂದರೆ- ಮಂಗಳಸ್ನಾನ, (ದೇವಾಲಯ) ದೇವಸ್ಥಾನವನ್ನು ಶುದ್ಧಿಕರಿಸುವುದು ಎಂದರ್ಥ. ತಿರುಮಲೆಯ ಸ್ವಾಮಿಯ ದೇವಾಲಯಕ್ಕೆ ವರ್ಷಕ್ಕೆ ನಾಲ್ಕು ಬಾರಿ ತಿರುಮಂಜನ ನಡೆಯುತ್ತದೆ. ಯುಗಾದಿಗೆ ಮುಂಚೆ, ಆಣಿವರ ಆಸ್ಥಾನಕ್ಕೆ ಮುಂಚೆ, ಬ್ರಹ್ಮೋತ್ಸವಕ್ಕೆ ಮುಂಚೆ, ವೈಕುಂಠ ಏಕಾದಶಿಗೆ ಮುಂಚೆ ಬರುವ ಮಂಗಳವಾರಗಳಲ್ಲಿ ಸ್ವಾಮಿಯ ದೇವಾಲಯವನ್ನು ಶುಭ್ರವಾಗಿ ತೊಳೆಯುವುದನ್ನು ಕೊಯಿಲ್ ಆಳ್ವಾರ್ ತಿರುಮಂಜನ ಎನ್ನುವರು. ಇದೊಂದು ಮಹಾಯಜ್ಞವಾಗಿ ನಡೆಯುತ್ತದೆ. ಗರ್ಭಾಲಯದಲ್ಲಿರುವ ಎಲ್ಲಾ ಉತ್ಸವ ವಿಗ್ರಹಗಳು, ಬಂಗಾರದ, ಬೆಳ್ಳಿ ಪಾತ್ರೆಗಳನ್ನು ಚಿನ್ನದ ಬಾಗಿಲಿನವರೆಗೆ ತರುತ್ತಾರೆ. ಒಳಗಡೆ ಗೋಡೆಯ ಮೇಲು ಭಾಗವನ್ನು (ಚಾವಣಿಯ ಒಳಮೈ) ಈ ರೀತಿ ಎಲ್ಲಾ ತೊಳೆದು ಶುದ್ಧೀಕರಿಸುತ್ತಾರೆ. ಸುತ್ತಲಿರುವ ಎಲ್ಲಾ ಗುಡಿಗಳನ್ನೂ ಕೂಡ ಶುದ್ಧಿಕರಿಸುತ್ತಾರೆ.

ನಂತರ "ಪರಿಮಳವನ್ನು" ದೇವಾಲಯ ಗೋಡೆಗಳಿಗೆ ಹಚ್ಚುತ್ತಾರೆ. ನಾಮ ದುಂಡೆ, ಶ್ರೀಚೂರ್ಣ, ಗಡ್ಡೆ ಕರ್ಪೂರ, ಗಂಧದ ಪುಡಿ, ಕುಂಕುಮ, ಖಿಚಿಲಿ ಗಡ್ಡೆ - ಇವೆಲ್ಲದರ ಮಿಶ್ರಮವೇ 'ಪರಿಮಳ' ಅನ್ನುತ್ತಾರೆ. ಈ ಪರಿಮಳದ ಲೇಹ್ಯವನ್ನು ಎಲ್ಲಾ ಕಡೆ ಹಚ್ಚುತ್ತಾರೆ.

ಈ ಸೇವೆಯನ್ನು ಆರ್ಜಿತವಾಗಿಯೂ ಸಹ ಪ್ರವೇಶಗೊಳಿಸಿದ್ದಾರೆ. ಈ ಸೇವೆಯಲ್ಲಿ ಪಾಲ್ಗೊಂಡ ಗೃಹಸ್ಥರು ದಿವ್ಯ ಕ್ಷೇತ್ರದಲ್ಲಿರುವ ದೇವಾಲಯವನ್ನು ಶುಭ್ರ ಪಡಿಸಿದಷ್ಟು ಪುಣ್ಯಲಭಿಸುತ್ತದೆ.

ಧಾರಾವಾಹಿ - 3

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥಶಾಸ್ತ್ರಿ

ಅನುವಾದ : ಶ್ರೀಮತಿ ಬಿ. ಪದ್ಮಜ



ಕಳೆದ ಸಂಚಿಕೆಯಿಂದ

ಅನೇಕ ಸದ್ಗುಣಗಳು ಇವೆ. ನಾವು ಕೂಡಾ ದಾನವನ್ನು ಮಾಡುತ್ತೇವೆ. ಒಳ್ಳೆಯ ಕೆಲಸ ಮಾಡುವಾಗ ಅದರೊಂದಿಗೆ ಒಂದು ರೂಪಾಯನ್ನೋ ಅಥವಾ ಎರಡು ರೂಪಾಯಿಗಳನ್ನೋ ದಾನ ಮಾಡುತ್ತೇವೆ. ದಾನ ಮಾಡುವುದು ಒಳ್ಳೆಯ ಗುಣವೇ! ಆದರೆ ಅದರೊಂದಿಗೆ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ಒಮ್ಮೆ ಪರಿಶೀಲಿಸಿದರೆ ನಾನು ನೀಡುತ್ತಿದ್ದೇನೆ. ಅವನು ಪಡೆಯುತ್ತಿದ್ದಾನೆ. ಮುಖದಲ್ಲಿ ಅಪ್ರಸನ್ನತೆ, ಮಾತಿನಲ್ಲಿ ಗರ್ವ ತುಂಬಿ ತುಳುಕುತ್ತಿರುತ್ತದೆ. ಇನ್ನೊಬ್ಬನ ಜೀವನವನ್ನು ಉದ್ಧಾರ ಮಾಡಿದಂತೆ ಮಾತಾಡುತ್ತೇವೆ. ಮನಸ್ಸಿನಲ್ಲಿ ದುರ್ಗುಣ ಸದ್ಗುಣ ಎಂಬ ಎರಡು ಗುಣಗಳು ಮನಸ್ಸಿನಲ್ಲಿ ಇರುತ್ತವೆ. ಪರೋಪಕಾರ ಮಾಡುತ್ತೇವೆ. ನಂತರ ಏನು ಮಾಡುತ್ತೇವೆ? ಸಾಮಾನ್ಯವಾಗಿ ನಮ್ಮಿಂದ ಉಪಕಾರ ತೆಗೆದುಕೊಂಡವನನ್ನು ಹಳಿಯುತ್ತೇವೆ. ಉಪಕಾರ ಮಾಡುವುದೇಕೆ? ಪುನಃ ಬಯ್ಯುವುದೇಕೆ?ಎಂಬ ಪ್ರಶ್ನೆ ನಮ್ಮ ಮನಸ್ಸಿಗೆ ಬರುವುದೇ ಇಲ್ಲ. ಉಪಕಾರ ಮಾಡಿದ್ದೇವಾದ್ದರಿಂದ ಜೊತೆಜೊತೆಗೆ ರಾಕ್ಷಸ ಗುಣವೂ ಬರುತ್ತದೆ. ಹೀಗೆ ಅನೇಕ ದುರ್ಗುಣಗಳು, ಸದ್ಗುಣಗಳು ಬೆರೆತು ಅವೆರಡೂ ಬಿಡಸಲಾಗದ ಬಂಧನದಲ್ಲಿ ಬೆಸೆದುಕೊಂಡು ಬಿಟ್ಟಿರುತ್ತದೆ. ಅವು ಯುದ್ಧ ಮಾಡಿಕೊಂಡು ಕೊನೆಗೆ ದುರ್ಗುಣಗಳು ಗೆಲ್ಲುವ ದಿನ ಬರುತ್ತದೆ. ಆ ರೀತಿ ದುರ್ಗಣಗಳು ಗೆಲ್ಲುವ ದಿನ ಬಂದಿದೆ ಎಂದರೆ ನಾವು ರಾಕ್ಷಸರಾದಂತೆಯೇ ಲೆಕ್ಕ ! ಪುನಃ ಯಾವುದೋ ಜನ್ಮಕ್ಕಾಗಿ ಕಾಯುವುದಿಲ್ಲ...! ಈ ಜನ್ಮದಲ್ಲೇ ಅಂತಹಾ ಗುಣಗಳನ್ನು ನಾವು ತೋರಿಸುತ್ತೇವೆ. ಇಂತಹಾ ಸಂದರ್ಭ ಬರಬಾರದು. ಮನುಷ್ಯರು ಎಚ್ಚರಿಕೆಯಿಂದ ಇರಬೇಕು. ದೇವತೆಗಳಂತೆ ಸದ್ಗುಣಗಳನ್ನು ಕಲಿಯಬೇಕು. ಅವರಲ್ಲಿ ಲವಲೇಶವಾದರೂ ಕೆಟ್ಟ ಗುಣಗಳು ಇರಲಾರೆವೆ ಎಂದು ಕೇಳಬಹುದು ಆದರೆ ದುರ್ಗುಣಗಳು ಮಾತ್ರ ಬೇಡ ಬೇಡ! ಮನುಷ್ಯರಲ್ಲಿ ಸದ್ಗುಣಗಳು ಬೆಲೆಯಬೇಕು. ಇದಕ್ಕಿಂತಲೂ ಎತ್ತರಕ್ಕೆ ಬೆಳೆಯಬೇಕು.ಆ ರೀತಿ ಒಳ್ಳೆಯ ಗುಣಗಳನ್ನು ಬೆಳಸಿಕೊಳ್ಳಬೇಕಾದರೇ ದೇವಸ್ಥಾನ ಪ್ರಶಸ್ತವಾದ ಸ್ಥಳ! ಅದನ್ನು ಮೀರಿದ ಸ್ಥಾನ ಇನ್ನೊಂದು ಇಲ್ಲ. ಸಾಕ್ಷಾತ್ ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನ ಪಾದಪದ್ಮಗಳನ್ನು ಸೇವಿಸಬೇಕು. ಪರಮಾತ್ಮನನ್ನು ತಿಳಿಯಬೇಕು ಎಂಬ ಉದ್ದೇಶ್ಯ ! ಇದು ಬ್ರಹ್ಮತತ್ತ್ವದ ಉದ್ದೇಶ! ಅವುಗಳನ್ನು ನಾವು ಅರಿತುಕೊಳ್ಳಬೇಕು.ಈ ಸ್ಫೂರ್ತಿಯಿಂದಲೇ ಶ್ರೀಕೃಷ್ಣನು ನಮಗೆ ಭಗವದ್ಗೀತಾಮೃತವನ್ನು ಉಪದೇಶಿಸಿದ್ದಾನೆ.ಅವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅರ್ಜುನನು ಒಂದು ಕಾರಣ ಮಾತ್ರಾ! ಅರ್ಜುನನಲ್ಲಿ ಇರುವ ಗುಣಗಳೆಲ್ಲಾ ನಮ್ಮಲ್ಲಿ ಇವೆ. ಅರ್ಜುನನಲ್ಲಿ ಯಾವ ಯಾವ ಗುಣಗಳಿವೆ. ಅರ್ಜುನನು ಏನು ಯೋಚಿಸಿದ ಎನ್ನುವ ವಿಷಯವನ್ನು ನಾವು ವಿವರವಾಗಿ ಈ ಅಧ್ಯಾಯದಲ್ಲಿ ತಿಳಿದಿದ್ದೇವೆ.ನಾವು ಕೂಡ ಅರ್ಜುನ ಸಿಲುಕಿದ ಪರಿಸ್ಥಿತಿಯಲ್ಲಿ ಸಿಲುಕಿಕೊಂಡರೆ ನಾವೂ ಹಾಗೆ ಯೋಚಿಸುತ್ತೇವೆ ಎಂದು ಪರಮಾತ್ಮನಿಗೆ ತಿಳಿದಿರುವುದರಿಂದ ನಮಗೆಲ್ಲರಿಗೂ ಉಪಯೋಗವಾಗುವ ವಿಧದಲ್ಲಿ ನಮಗೆ ಉಪದೇಶ ಮಾಡಿದ್ದಾನೆ. ಇಂತಹಾ ಉಪದೇಶವನ್ನು ನಾವು ಕೇವಲ ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ಮಾಡಿ ದ್ದಾನೆ ಎಂದು ತಿಳಿಯದೆ ಶ್ರೀ ಕೃಷ್ಣ ಪರ ಮಾತ್ಮ ನಮ್ಮ ಆಚಾರ್ಯಮೂರ್ತಿಯಾದ ಶ್ರೀವೆಂಕಟೇಶ್ವರಸ್ವಾಮಿ ನಮಗೆ ಉಪದೇಶ ಮಾಡಿದ್ದಾನೆಂಬ ಭಾವನೆಯಿಂದ ನಾವು ಶ್ರವಣ ಮಾಡಿದರೆ ಶ್ರೀಕೃಷ್ಣ ಪರಮಾತ್ಮ ಶ್ರೀಮದ್ಭಾಗವದ್ಗೀತಾಮೃತವನ್ನು ಉಪದೇಶಿ ಸಿದಂತಹ ಫಲ ಪೂರ್ತಿಯಾಗಿ ನಮಗೆ ದಕ್ಕುತ್ತದೆ. ನಮಗೂ ಒಳ್ಳೆಯ ಫಲವನ್ನು ನೀಡುತ್ತದೆ. ಇದು ಪ್ರಾರ್ಥಮಿಕವಾದ ವಿಷಯ! ಈ ಭಾವನೆಯಿಂದ ನಾವು ಗೀತಾಮೃತವನ್ನು

ಚೆನ್ನಾಗಿ ಅರ್ಥ ಮಾಡಿಕೊಂಡರೆ ಭಗವ ದ್ಗೀತೆಯಲ್ಲಿ ನಾವು ನಿನ್ನೆ ದಿನ ಧೃತರಾಷ್ಟ್ರನು ಸಂಜಯನನ್ನು ಕೇಳಿದ ವಿಷಯವನ್ನು ತಿಳಿದುಕೊಂಡೆವು ಆ ಯುದ್ಧ ರಂಗದಲ್ಲಿ ಯಾರು ಯಾರು ಏನು ಮಾಡಿದರು? ಯಾವ ರೀತಿಯ ಘಟನೆಗಳು ನಡೆದುವು ಎಂದು ಧೃತರಾಷ್ಟ್ರ ಕೇಳಿದ. ಅದಕ್ಕೆ ಉತ್ತರವಾಗಿ ಸಂಜಯನು ಈ ರೀತಿ ಹೇಳಿದನು.

ದೃಷ್ಟ್ವಾತು ಪಾಂಡು ವಾನೀಕಂ ವ್ಯೂಢಂ ದುರ್ಯೋಧನಸ್ತಥಾ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್ ॥

ಎಂದು ಸಂಜಯನು ಹೇಳುತ್ತಿದ್ದಾನೆ. ಅಲ್ಲಿ ಸೇನೆಯೆಲ್ಲಾ ಸಿದ್ಧವಾಗಿ ನಿಂತಿದೆ. ಅಲ್ಲಿ ಪಾಂಡವರೆಲ್ಲಾ ಇದ್ದಾರೆ. ದುರ್ಯೋಧನ ದ್ರೋಣಾಚಾರ್ಯರ ಬಳಿ ಹೋಗಿ ಅವರೊಂದಿಗೆ ಮಾತನಾಡಲಾರಂಭಿಸಿದ್ದಾನೆ.ಅವನು ಕೇಳಿದ್ದೇನು? ಇವರು ಹೇಳಿದ್ದೇನು ಎಂದು ಒಮ್ಮೆ ನೋಡೋಣ ಎಂದು ಕೇಳಿದ ಧೃತರಾಷ್ಟ್ರ

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥

ಪಾಂಡವರು ಮತ್ತು ನನ್ನವರು ಎಲ್ಲರೂ ಸೇರಿ ಏನು ಮಾಡಿದರು?

ಎಂದು ಕೇಳಿದ ಮೊದಲು ಸಂಜಯನು ದುರ್ಯೋಧನ ಏನು ಮಾಡುತ್ತಿದ್ದಾನೋ ಅದನ್ನು ಹೇಳುತ್ತಿದ್ದಾನೆ. ಎಲ್ಲರೂ ಸೇರಿ ಯುದ್ಧ ಮಾಡಿದರು ಎಂದಾದರೂ ಹೇಳಬೇಕು. ಎಲ್ಲರೂ ಸೇರಿ ಚರ್ಚೆ ಮಾಡುತ್ತಿದ್ದಾರೆಂದು ಹೇಳಬೇಕು.ಶಂಖನಾದ ಮಾಡುತ್ತಿದ್ದಾರೆಂದುರೂ ಹೇಳಬೇಕು.ದುರ್ಯೋಧನನ ಬಗೆಗೆ ಏಕೆ ಹೇಳುತ್ತಿದ್ದಾನೆ? ಇಲ್ಲಿ ನಾವು ಸಂಜಯನ ಸಮಾಚಾರ ನೈಪುಣ್ಯವನ್ನು ಶ್ರದ್ಧೆಯಿಂದ ಅರ್ಥ ಮಾಡಿಕೊಳ್ಳಬೇಕು.ಆತ ರಾಜಸೇವಕ, ಎಚ್ಚರಿಕೆಯಿಂದ ರಾಜ ಸೇವಕ ರಾಜನ ಅಭಿಪ್ರಾಯವನ್ನು ಗಮನಿಸಿದ ರಾಜನ ಅಭಿಪ್ರಾಯವೇನು ಅಂದರೆ "ಧರ್ಮಕ್ಷೇತ್ರೇ" ಎಂದನಲ್ಲವೇ! ಅದು ಧರ್ಮಗಳನ್ನು ಅಭಿವೃದ್ಧಿಗೊಳಿಸುವ ಕ್ಷೇತ್ರ. ಮಾನವನು ಸಾಮಾನ್ಯವಾಗಿ ಯೋಚಿಸುವುದು ಬೇರೆ ! ಧರ್ಮಕ್ಷೇತ್ರದಲ್ಲಿ ಯೋಚಿಸುವುದು ಬೇರೆ! ನಾವು ಈ ರೀತಿಯ ಅನುಭವವನ್ನು ಎದುರಿಸಿರುತ್ತೇವೆ. ಯಾವುದಾದರೂ ಪುಣ್ಯ ಕ್ಷೇತ್ರಕ್ಕೆ ಹೋದಾಗ ಒಂದು ರೀತಿಯ ಒಳ್ಳೆಯ ಯೋಚನೆಗಳನ್ನು ಮಾಡುತ್ತೇವೆ.ಆ ಕ್ಷೇತ್ರದಲ್ಲಿ ಇರುವಷ್ಟು ಹೊತ್ತು ಇನ್ನೂ ಕೆಲವು ಪುಣ್ಯಕ್ಷೇತ್ರಕ್ಕೆ ಹೋಗೋಣ ಅಥವಾ ಇನ್ನೂ ಕೆಲವು ದಿನಗಳು ಅಲ್ಲೇ ಇರೋಣ ಅಥವಾ ಏನಾದರೂ ಸೇವೆಮಾಡೋಣ ಎಂದು ಭಾವಿಸುತ್ತಿರುತ್ತೇವೆ. ಈ ಸಂದರ್ಭದಲ್ಲಿ ಈ ಪಾಂಡವರು ಧರ್ಮಾತ್ಮರು ಎಂದು ಹೆಸರು ವಾಸಿಯಾಗಿರುವವರು ಅವರೇನಾದರೂ ಯುದ್ಧಬೇಡ, ಈ ಹಿಂಸೆ ಬೇಡ ಇವೆಲ್ಲಾ ಬಿಟ್ಟು ಬಿಡುತ್ತೇವೆ.ನಿಮ್ಮ ರಾಜ್ಯ ನೀವೆ ತೆಗೆದುಕೊಳ್ಳಿ ಎಂದು ನನ್ನ ಮಗನಿಗೆ ಬಿಟ್ಟು ಹೋದನೇನೋ ಅಥವಾ ಆ ಧರ್ಮ ಕ್ಷೇತ್ರಕ್ಕೆ ಹೋದ ನಂತರ ನನ್ನ ಮಗನೇ ತನ್ನ ಮನಸ್ಸನ್ನು ಬದಲಾಯಿಸಿ ಈ ಯುದ್ಧ ಬೇಡ ಅವರ ರಾಜ್ಯವನ್ನೂ ಅವರಿಗೆ ಕೊಟ್ಟು ಬಿಡೋಣ ಎಂದು ಯುದ್ಧ ಬಿಟ್ಟು ಬಂದು ಬಿಟ್ಟನೇನೋ ಎಂಬ ಭಯವೂ ಧೃತರಾಷ್ಟ್ರನಿಗೆ ಇತ್ತು. ಆದರೆ ತನ್ನ ಮಗ ಆ ರೀತಿ ಮಾಡುವವನಲ್ಲ ಎಂಬ ನಂಬಿಕೆಯು ಇದೆ. ಆದರೂ ಎಲ್ಲೋ ಮನಸ್ಸಿನ ಮೂಲೆಯಲ್ಲಿ ಒಂದು ಭಯ ಕಾಡುತಿತ್ತು.

ಇವರಿಬ್ಬರಲ್ಲಿ ಯಾರು ಏನು ಮಾಡಿದರು? ಪಾಂಡವರು ಯುದ್ಧಬಿಟ್ಟು ಹೋದರೆ? ಅಥವಾ ನಮ್ಮ ಮಕ್ಕಳೂ ಯುದ್ಧ ಬಿಟ್ಟು ರಾಜ್ಯಕ್ಕೆ ಹಿಂದಿರುಗಿಬಿಟ್ಟರೆ? ಇದು ಆತನ ಪ್ರಶ್ನೆಯ ಸಾರಾಂಶಕ್ಕೆ ಆ ಪ್ರಶ್ನೆಯ ಸಾರಂಶಕ್ಕೆ ಧರ್ಮಕ್ಷೇತ್ರೇ ಎನ್ನುವ ಪದದ ಅರ್ಥವನ್ನು ಸಂಜಯನು ಮನಗಂಡ ಅವನು ಬುದ್ಧಿವಂತ ಸೇವಕ. ಸೇವಕನಿಗೆ ಸಹಜವಾಗಿ ಆ ರಾಜ ಏನು ಹೇಳುತ್ತಿದ್ದಾನೆ ಎಂಬ ಅಭಿಪ್ರಾಯ ತಿಳಿದಿರಬೇಕು. ಆಗ ಸೇವಕನ ಧರ್ಮಸರಿಯಾದ ದಾರಿಯಲ್ಲಿ ಸಾಗುತ್ತದೆ. ಪರಿಪಾಲನ ವ್ಯವಸ್ಥೆಯು ಕೂಡಾ ಸರಿಯಾದ ಮಾರ್ಗದಲ್ಲಿ ಸಾಗುತ್ತದೆ. ಎರಡನೆಯದಾಗಿ, ಅವನು ಉತ್ತರಿಸುವಾಗ ನೀವೇನು ಗಾಬರಿಪಡಬೇಡಿ. ನಿಮ್ಮ ಮಗ ಯುದ್ಧವನ್ನು ಬಿಟ್ಟಿಲ್ಲ. ಯುದ್ಧ ಮಾಡಬೇಕೆಂಬ ಸಂಕಲ್ಪದಲ್ಲೇ ಇದ್ದಾನೆ. ಆದ್ದರಿಂದ ನೀವು ಆ ವಿಷಯದಲ್ಲಿ ಧೈರ್ಯವಾಗಿ ಇರಬಹುದು ಎಂದು ಸಾನುಕೂಲವಾದ ಅಂಶವನ್ನು ಮೊದಲು ತಿಳಿಸಿದ.ಇದು ಅವನ ಒಳ್ಳೆಯತನ ಭೀಷ್ಮಪಿತಾಮಹ ನಿರ್ಯಾಣವನ್ನು ಹೊಂದಿದ. ಈ ಸ್ಥಿತಿಯಲ್ಲಿ ಈ ವಿಷಯವನ್ನು ಮೊದಲೇ ತಿಳಸದೆ ಅವರಿಗೆ ಪ್ರಿಯವಾದ ಮಗನ ಹೆಸರು ಹೇಳಿ ಆತನನ್ನು ಸ್ವಲ್ಪ ಶಾಂತಗೊಳಿಸಿದ. ಇದು ಸಂಜಯನ ಒಳ್ಳೆಯ ಗುಣ. ಮೂರನೆಯದಾಗಿ, ರಾಜಾವಚನಮಬ್ರವೀತ್ ಎಂದು ತಿಳಿಸಿದ್ದ ಧೃತರಾಷ್ಟ್ರ ಜೀವನವೆಲ್ಲಾ ನೋವನ್ನು ಅನುಭವಿಸಿದ್ದು ದುರ್ಯೋಧನನಿಗೆ ಹೇಗೂ ರಾಜ್ಯ ಸಿಗುವುದಿಲ್ಲ ಅವನ ಪರವಾಗಿ ಯೋಧನೊಬ್ಬ ಹತನಾದನು ಆದ್ದರಿಂದ ರಾಜ್ಯಾವಿಲ್ಲದಿದ್ದರೂ ನನ್ನ ಮಾತಿನಿಂದ ರಾಜ ಎಂಬ ಶಬ್ದವನ್ನು ಕೇಳಿ ಇವನು ಸಂತೋಷಿಸುತ್ತಾನೆ ಎಂದು ತನ್ನ ಸಮಾಚಾರ ನೈಪುಣ್ಯತೆಯನ್ನು ತೋರುತ್ತಾ, ದುರ್ಯೋಧನನನ್ನು ರಾಜ ಎಂದು ಸಂಭೋದಿಸಿದ್ದ.

ರಾಜಾವಚನಮಬ್ರವೀತ್ ದೃಷ್ಟಾತ್ತು ಪಾಂಡವಾನಿಕಮ್ ವ್ಯೂಢಮ್ದುರ್ಯೋಧನಸ್ತಥಾ

'ಆಚಾರ್ಯಮುಪಸಂಗಮ್ಯ ರಾಜಾವಚನಮಬ್ರವೀತ್ ಭೀಷ್ಮ ಪಿತಾಮಹ ಸೇನಾಪತಿಯಲ್ಲವೇ? ಅವರ ಹತ್ತಿರ

ಹೋಗದೆ ದ್ರೋಣನ ಹತ್ತಿರ ಯಾಕೆ ಹೋದ? ಎಂದು ನಿಮಗೆ ಅನುಮಾನ ಬರಬಹುದು ಆದರೆ ದ್ರೋಣಾಚಾರ್ಯ ಕೂಡಾ ಅವನ ಗುರುವೆ ಅಲ್ಲವೇ? ದ್ರೋಣನ ಹತ್ತಿರ ಹೋದರೇನು? ಭೀಷ್ಮನ ಹತ್ತಿರ ಹೋದರೇನು? ಇವರು ಸೇನಾಪತಿ ಸ್ಥಾನಕ್ಕೆ ಅರ್ಹರಾದವರೇ ತಾನೇ ಆದ್ದರಿಂದ ದ್ರೋಣಾಚಾರ್ಯನ ಹತ್ತಿರಕ್ಕೆ ಹೋದ ಎಂದು ಸಂಜಯ ಧೃತರಾಷ್ಟ್ರನಿಗೆ ಹೇಳಿದ. ಈ ವಿಷಯದಲ್ಲಿ ನಾವು ತಿಳಿದುಕೊಳ್ಳಬೇಕಾದ ಸೂಕ್ಷ್ಮ ವೇನೆಂದರೆ ನಾವು ಸಂಕಲ್ಪ ಮಾಡುವ ಮೊದಲು ಗುರು ಪ್ರಾರ್ಥನೆ, ನಂತರವೇ ದೇವರ ಪ್ರಾರ್ಥನೆ ಮಾಡುತ್ತೇವೆ. ಅಂದರೇ ಭಗವಂತನ ಪ್ರಾರ್ಥನೆಗಿಂತಲೂ ಮೊದಲು ಗುರುಗಳು! ನಂತರವೇ ಭಗವಂತ ಈಗ ನಮ್ಮ ಎದುರಿಗೆ ಕಾಣಿಸುತ್ತಿರುವವರು ಗುರುಗಳೆ ಆದ್ದರಿಂದ ಅವರು ಪರ ಮಾತ್ಮನ ರೂಪದಲ್ಲಿ ಈಗ ಕಾಣಿಸುತ್ತಿರುವುದರಿಂದ ನಾವು ಗುರು ಪ್ರಾರ್ಥನೆ ಮಾಡುತ್ತೇವೆ. ಈ ವಿಷಯವನ್ನು ಭಗವ ದ್ಗೀತೆಯೇ ನಮಗೆ ತಿಳಿಸಿಕೊಟ್ಟಿದೆ. ಯಾವ ರೀತಿ ಭಗವ ದ್ಗೀತೆಯ ಪ್ರಾರಂಭ ಶ್ಲೋಕದಲ್ಲಿ, ಧೃತರಾಷ್ಟ್ರ, "ಆಚಾರ ಮುಪಾ ಸಂಗಮ್ಯ" ಎಂದು ಹೇಳುವುದರಿಂದ ಅದು ಬಹಳ ಚಿಕ್ಕ ವಾಕ್ಯಾವಾಗಿ ಕಂಡು ಬಂದರೂ ಇದು 'ಗುರೂಪ ಸದನಂ' ಗುರೂಪಗಮನಮ್ ಎಂಬ ಹೆಸರಿನಿಂದ ಉಪ ನಿಷತ್ತಿನಲ್ಲಿ ಬಹಳ ದೊಡ್ಡ ವಿಷಯವೆಂದು ಹೇಳುತ್ತಾರೆ. ಗುರುವನ್ನು ಮೊದಲು ಆಶ್ರಯಿಸಬೇಕು. ಗುರುಗಳನ್ನು ಆಶ್ರಯಿಸಿದರೇನೆ ನಮಗೆ ತತ್ವಜ್ಞಾನ ಲಭಿಸುತ್ತದೆ ಎಂದು ಉಪನಿಷತ್ತಿನಲ್ಲಿ ಬಹಳ ಸ್ಪಷ್ಟವಾಗಿ ಬೋಧಿಸುತ್ತಾರೆ. ಆದರೇ ಕೇವಲ ಗುರುವಿನ ಬಳಿಗೆ ಹೋದರೆ ಸಾಕಾಗುವುದಿಲ್ಲ ಗುರುಗಳ ಹತ್ತಿರ ಹೋಗಿ ಏನು ಮಾಡಬೇಕು ಎಂಬ ವಿಷ ಯವೇ ಮುಖ್ಯವಾದುದು. ಆ ವಿಷಯವನ್ನೇ ಉಪನಿಷತ್ತಿನಲ್ಲಿ ಹೇಳಿದ್ದಾರೆ. ಹಾಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಬಹಳ ವಿವರವಾಗಿ ತಿಳಿಸಿದ್ದಾನೆ. ಅವೆಲ್ಲವನ್ನು ದುರ್ಯೋಧನ ಪಾಲಿಸಲಿಲ್ಲ ಆದ್ದರಿಂದ ಗುರುವಿನಿಂದ ಬೇಕಾದ ಪ್ರಯೋ ಜನ ಅವನಿಗೆ ದಕ್ಕಲಿಲ್ಲ. ದುರ್ಯೋಧನನಿಗೆ ಬೇಕಾಗಿರು ವುದೇನು? ಯುದ್ಧದಲ್ಲಿ ಅವನು ವಿಜಯವನ್ನು ಕಾಣಬೇಕಾ ಗಿತ್ತು. ಆದರೇ ಅದು ದಕ್ಕಲಿಲ್ಲ. ಗುರುವಿನ ಬಳಿಗೆ ಹೋದ ಆದರೆ ಭೀಷ್ಮಾಚಾರ್ಯನ ಬಳಿಗೆ ಹೋಗುವುದಕ್ಕಿಂತಲೂ ಮೊದಲೂ ದ್ರೋಣಾಚಾರ್ಯನ ಬಳಿಗೆ ಹೋಗದ್ದಿದ್ದರೆ ನ್ಯಾಯವಾಗಿರುತ್ತಿತ್ತು. ಅವರ ಬಳಿಗೆ ಹೋಗಿ ಗುರು ವರ್ಯಾ! ನಾನು ಯುದ್ಧದಲ್ಲಿ ಗೆಲ್ಲಬೇಕು ಅದಕ್ಕೆ ಒಂದು ಉಪಾಯವನ್ನು ಹೇಳಿ ಎಂದು ಕೇಳಿದ್ದರೆ ಅವರು ಹೇಳಿರುತ್ತಿದ್ದರು. ದ್ರೋಣನ ಬಳಿ ಇಲ್ಲದಿರುವ ಅಸ್ತ್ರಗಳೇ? ಇಲ್ಲದ ಶಸ್ತ್ರಗಳೇ? ಅವರಿಗೆ ತಿಳಿಯದ ವ್ಯೂಹಗಳೇ? ಪಾಂಡವರೆಲ್ಲರೂ ಅವರ ಶಿಷ್ಯರೇ ತಾನೇ ? ಕೌರವರು ಅವರ ಶಿಷ್ಯರೇ ತಾನೇ? ಆದರೇ ಅಲ್ಲಿಗೆ ಹೋಗಿ ಸರಿಯಾಗಿ ಗುರುವಿನ ಬಳಿ ವಿಜಯಕ್ಕೆ ಪ್ರಾರ್ಥನೆ ಮಾಡ ಲಿಲ್ಲ. ನನಗೆ ತತ್ತ್ವಜ್ಞಾನವನ್ನು ನೀಡಿರೆಂದು ಕೇಳಲಿಲ್ಲ. ಆದ್ದರಿಂದ ಗುರುವನ್ನು ಆಶ್ರಯಿಸ ಬೇಕು. ಗುರುವನ್ನು ಆಶ್ರಯಿಸಿದಾಗ ವಿನಯ ವಿಧೇಯತೆಗಳಿಂದ ನಮಗೆ ಬೇಕಾದ ಉಪಾಯವನ್ನು ಕೇಳಿ ತಿಳಿದುಕೊಂಡು, ಅವರ ಉಪದೇಶದಂತೆ ನಡೆದು ಕೊಂಡರೆ ನಮಗೆ ಜಯ ದಕ್ಕುವುದು ಸುಲಭ. ಈ ಭಾವನೆ ಬರುವುದಕ್ಕಾಗಿಯೇ 'ಆಚಾರ್ಯ ಮುಪಾಸಂಗಮ್ಯ' ಎಂಬ ಉಪನಿಷದ್ವಾಕ್ಯವನ್ನು ಶ್ರೀಕೃಷ್ಣನು ಇಲ್ಲಿ ತಿಳಿಸಿದ್ದಾನೆ. ಈ ಶ್ರೀಮದ್ಭಗವದ್ಗೀತೆಯನ್ನು ನಾವು 'ಗೀತಾಮೃತಂ' ಎಂದು ಭಾವಿಸುತ್ತೇವೆ. ಅದರ ಪ್ರತಿಯೊಂದು ಮಾತಿನಲ್ಲೂ ನಮ್ಮ ಬದುಕಿಗೆ ಬೇಕಾಗುವ ಪ್ರಧಾನವಾದ ಅಂಶಗಳನ್ನು ಭಗವಂತ ಹುದುಗಿಸಿಟ್ಟಿದ್ದಾನೆ. ಅವುಗಳಲ್ಲಿ ಮುಖ್ಯವಾದ ಅಂಶವನ್ನು ನಾವು ನೋಡೋಣ. ಮಾನವ ಜನ್ಮಕ್ಕೆ ಸಾರ್ಥಕತೆಯನ್ನುಂಟು ಮಾಡುವ ಅಂಶವೂ ಪ್ರತಿ ಶ್ಲೋಕದಲ್ಲೂ, ಪ್ರತಿವಾಕ್ಯದಲ್ಲೂ, ಪ್ರತಿ ಪದದಲ್ಲೂ, ಪ್ರತಿ ಅಕ್ಷರದಲ್ಲೂ ಇದೆ. ಅದಕ್ಕೆ ಇದನ್ನು ಗೀತಾಮೃತ ಎಂದು ಕರೆಯುತ್ತೇವೆ. ಅಂತಹ ಗೀತಾಮೃತವನ್ನು 'ಆಚಾ ರ್ಯೋಪಸದನಮ್ ಗುರೂಪಸದನಮ್ ಎಂಬ ಪದದಿಂದ ಇಲ್ಲಿ ಪ್ರಾರಂಭಿಸಿದ್ದಾರೆ. ಈ ಗುರುವು, ಗುರೂಪ ಸದನಮ್ ಎಂಬುದರಿಂದ ದುರ್ಯೋಧನ ಯಾವ ರೀತಿ ಪ್ರಯೋಜನವನ್ನು ಹೊಂದಿದ ಎಂದು ತಿಳಿಯೋಣ. ಯಾವ ರೀತಿ ಗುರುಶಿಷ್ಯರ ಸಂಭಾಷಣೆ ನಡೆಯಿತು ಎನ್ನುವುದನ್ನು ತಿಳಿದುಕೊಳ್ಳೋಣ ಬನ್ನಿ..

"ಕೃಷ್ಣಮ್ ವಂದೇ ಜಗದ್ಗುರುಮ್"

(ಸಶೇಷ)



**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**



ಧಾರಾವಾಹಿ- 3

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಹಿಂದಿನ ಸಂಚಿಕೆಯಿಂದ

ಶ್ರೀಮನ್ನಾಥಮುನಿಗಳ ಕಾಲಕ್ಕೆ ಪ್ರಬಂಧಗಳೆಲ್ಲಾ ಹೇಳ ಹೆಸರಿಲ್ಲದೆ ಲುಪ್ತಗೊಂಡಿದ್ದವು. ಈ ಆಚಾರ್ಯರು ಕ್ರಿ.ಶ. ೯೧೮ ಕ್ಕೆ ಹಿಂದೆ ಇದ್ದವರು ಎಂದು ತಿಳಿದುಬರುತ್ತದೆ. ಶ್ರೀಮನ್ನಾಥ ಮುನಿಗಳು ಯಾರೋ ಶ್ರೀವೈಷ್ಣವರು ಹೇಳಿದ ಕೇವಲ ಹತ್ತೇ ಹತ್ತು ಪಾಶುರಗಳಿಂದ ಪ್ರಭಾವಿತರಾಗಿ ಆ ಶ್ಲೋಕಗಳು ಸಾವಿರ ಸಂಖ್ಯೆಯ ಪ್ರಬಂಧವೊಂದರ ಭಾಗವೆಂಬುದಾಗಿ ಅರಿತು, ಅಂತಹ ಅಭೂತ ಪೂರ್ವವಾದ ಪಾಶುರಗಳು ಇನ್ನೂ ಹಲವು ಇರುವುದರ ಸುಳಿವನ್ನು ಕಂಡುಕೊಂಡು, ಅದನ್ನೇ ಪಟ್ಟಾಗಿ ಸಾಧಿಸಿ,ಸಂಶೋಧನೆ,ಅಧ್ಯಯನಗಳನ್ನು ನಡೆಸಿ,ಕಾಲ ಗರ್ಭದಲ್ಲಿ ಅಡಗಿಹೋಗಿದ್ದ 'ತಿರುವಾಯ್ಮೊಳಿ' ಎನ್ನುವ ದಿವ್ಯರತ್ನ ವನ್ನು ಪ್ರಜ್ವಲಿಸುವಂತೆ ಮಾಡಿದರು. ಇದಲ್ಲದೆ ಇವರ ಸತತ ಪ್ರಯತ್ನದ ಫಲವಾಗಿ ಮತ್ತೊ ಹನ್ನೊಂದು ಆಳ್ವಾರುಗಳೂ, ಅವರ ಕೃತಿಗಳೂ ಶ್ರೀವೈಷ್ಣವ ಪ್ರಪಂಚಕ್ಕೆ ಲಭ್ಯವಾದುವು. ಆಳ್ವಾರುಗಳ ಸಂಖ್ಯೆ ಹನ್ನೆರಡೇ,ಅವರ ಪ್ರಬಂಧಗಳ ಸಂಖ್ಯೆ ನಾಲ್ಕು ಸಾವಿರವೇ ಎನ್ನುವುದನ್ನು ಈ ನಾಥಮುನಿಗಳ ಕಾಲಕ್ಕೇ ನಿರ್ಧಾರಗೊಳಿಸಿರುವುದು. ಅವರ ಮುಂದಿನವರಾದ ಯಾಮುನರೋ, ರಾಮಾನುಜರೋ ಹೊಸ ಆಳ್ವಾರುಗಳನ್ನಾಗಲೀ, ಪ್ರಬಂಧಗಳನ್ನಾಗಲೀ ಈ ಪಟ್ಟಿಗೆ ಸೇರಿಸದೇ ಇರುವುದರಿಂದಲೇ ಸಿದ್ಧಗೊಳ್ಳುತ್ತದೆ. ಹಾಗೇನಾದರೂ ಬೇರೆ ಆಳ್ವಾರುಗಳನ್ನೋ, ಪ್ರಬಂಧಗಳನ್ನೋ ನಾಥಮುನಿಗಳ ನಂತರದವರು ಕಂಡುಹಿಡಿದಿದ್ದರೆ ಹಾಗೆ ವಿವರಗಳು ಪ್ರಮಾಣ ಗ್ರಂಥಗಳಲ್ಲಿ ವಿಶದೀಕರಿಸಲ್ಪಡುತ್ತಿದ್ದುವು. ಈ ತರಹ ಯಾವುದೂ ನಡೆಯದೇ ಇರುವುದೇ ಆಳ್ವಾರಗಳೂ, ಅವರ ಪ್ರಬಂಧಗಳೂ ನಾಥ ಮುನಿಗಳ ಕಾಲಕ್ಕೇ "ಇದಮಿತ್ಥಂ" ಎಂದು ನಿರ್ಧಾರಿತ ಗೊಂಡಿರುವುದಕ್ಕೆ ನಿದರ್ಶನವಾಗಿದೆ.

ಯಾಮುನರ ವಿಚಾರವನ್ನು ಈ ಮೇಲೆಯೇ ಶ್ರೀ ಕೆ.ಕೆ.ಎ.ವೆಂಕಟಾಚಾರಿಯವರು ವಿವರಿಸಿದ್ದಾರೆ. ಇನ್ನು ಅವರು ಬಿಟ್ಟಿರಬಹುದಾದ ಒಂದಂಶವನ್ನು ಇಲ್ಲಿ ಪ್ರಸ್ತಾಪಿಸಿದನೆಂದರೆ ಅದು ತಪ್ಪಾಗಲಾರದು. ಯಾಮುನಾಚಾರ್ಯರ ಸ್ತೋತ್ರರತ್ನದಲ್ಲಿ ಕುಲಶೇಖರಆಳ್ವಾರ್ ಅವರ ಪಾಶುರದ ಛಾಯೆಯಂತೆಯೇ ತೋರುವ ಅರ್ಥ ಶ್ಲೋಕವನ್ನು ವೆಂಕಟಾಚಾರಿಯವರು ತಿಳಿಸಿದರು.ಇದೇ ರೀತಿ ಇನ್ನೊಂದು ಶ್ಲೋಕವು ಮೊದಲಾಳ್ವಾರ್ ಗಳಲ್ಲೊಬ್ಬರಾದ ಪೊಯ್ಗಯ್ ಆಳ್ವಾರ್ ಅವರ ಪಾಶುರದ ಅನುವಾದದಂತೆ ಕಂಡು ಬರುತ್ತದೆ. ಅದೇ "ನಿವಾಸಶಯ್ಯಾಸನ

ಪಾದುಕಾಂಶುಕೋ” ಎನ್ನುವ ಸ್ತೋತ್ರ ರತ್ನದ ಶ್ಲೋಕ. ಇದರಿಂದ ಯಾಮುನಾಚಾರ್ಯರಿಗೆ ಕುಲಶೇಖರ್, ನಮ್ಮಾಳ್ವಾರ್,ಪೊಯ್ಗಯ್ ಆಳ್ವಾರ್ ಇವರುಗಳ ಸಾಹಿತ್ಯ ಪರಿಚಯವಿದ್ದಂತಾಯಿತು. ಇವರ ಸ್ತೋತ್ರರತ್ನದಲ್ಲಿ ಮತ್ತಾವ ಶ್ಲೋಕಗಳು, ಮತ್ತಾವ ಆಳ್ವಾರ್ ಪಾಶುರಗಳ ಛಾಯೆಯಂತೆ ತೋರುತ್ತವೆ ಎನ್ನುವುದು ಅಧ್ಯಯನ ಯೋಗ್ಯವಾದ ವಿಚಾರ.

ಶ್ರೀಪರಾಶರ ಭಟ್ಟರ್ ಎಂಬುವವರು ರಾಮಾನುಜರನ್ನು ಕುರಿತು ತಿರುವಾಯ್ಮೊಳಿಯ ತನಿಯನ್ (ಪ್ರಶಂಸಾ ಪದ್ಯ) ಒಂದರಲ್ಲಿ ಇಂತೆನ್ನುತ್ತಾರೆ.

ಆನ್‌ತಮಿ ಮಟ್ರೈಗಳಾಯಿರಮುಂ - ಈನ್
ಮುದಟ್ರಾಯ್ ಶಡಗೋಪನ್ - ಮೋಯಿಂಬಾಲ್‌ವಳರ್ತ್ತ
ಇದತ್ತಾಯಿ ಇರಾಮಾನುಶನ್.

ಶಠಗೋಪರೆಂದೆನಿಸಲ್ಪಡುವ ನಮ್ಮಾಳ್ವಾರ್ ತಿರುವಾಯ್ಮೊಳಿ ಪ್ರಬಂಧಕ್ಕೆ ಜನ್ಮ ನೀಡಿದ ತಾಯಿಯಂತಾದರೆ ರಾಮಾನುಜರು ಅದನ್ನು ಬೆಳೆಸಿಪ್ರವರ್ಧಮಾನವಾಗಿ ಮಾಡಿದರು ಎಂದರೆ ರಾಮಾನುಜರಿಗೆ ನಮ್ಮಾಳ್ವಾರ್ ಮತ್ತು ಅವರ ಪ್ರಬಂಧದ ಬಗ್ಗೆ ಎಷ್ಟೊಂದು ವಾತ್ಸಲ್ಯ, ಗೌರವ, ಪ್ರೀತಿ ಇದ್ದಿತೆಂಬುದರ ಅರಿವಾಗುತ್ತದೆ.ಯಾಮುನಾಚಾರ್ಯರ ಇಚ್ಛೆಯನ್ನು ಪೂರ್ತಿ ಮಾಡಲು ಈ ತಿರುವಾಯ್ಮೊಳಿ ಪ್ರಬಂಧವನ್ನು ಪೂರ್ತಿ ಕಲಿತು, ಅರ್ಥಮಾಡಿಕೊಂಡು ಅದನ್ನು ಜನಪ್ರಿಯ ಮಾಡಲು ಶ್ರಮಿಸಿ, ಪ್ರಚಾರ ಮಾಡಿರುವ ಅವರ ದೀರ್ಘ ತಪಸ್ಸಿನ ಪರಿಚಯವಾಗುತ್ತದೆ.

ಇದರ ಹಿನ್ನೆಲೆಯಲ್ಲಿನ ವಿಚಾರ ತಿಳಿದುಕೊಂಡರೆ ನಮ್ಮ ವಾದಕ್ಕೆ ಹೆಚ್ಚು ಪುಷ್ಟಿ ದೊರಕಿದಂತಾಗುತ್ತದೆ. ಶ್ರೀಯಾಮುನರು ತಾವರಿತಿದ್ದ ಅಪಾರ ಜ್ಞಾನಸಂಪತ್ತನ್ನು ತಮ್ಮ ಉತ್ತರಾಧಿಕಾರಿಗೆ ಸಂಪೂರ್ಣವಾಗಿ ತಿಳಿಸಿಕೊಡಲು ಐದು ಜನ ಶಿಷ್ಯಂದಿರನ್ನು ತಯಾರು ಮಾಡಿದ್ದರೆಂದು ತಿಳಿದು ಬರುತ್ತದೆ. ಈ ಅಪಾರವಾದ ಜ್ಞಾನಭಂಡಾರವು ನಷ್ಟವಾಗಕೂಡದೆಂದು ಅವರು ಒಬ್ಬೊಬ್ಬರನ್ನೂ ಒಂದೊಂದು ಶಾಖೆಯಲ್ಲಿ ಪ್ರವೀಣರನ್ನಾಗಿ ಮಾಡಿ ತಾವೇ ಆಯ್ಕೆ ಮಾಡಿದ ಅತ್ಯಂತ ಬುದ್ಧಿಶಾಲಿಯೆಂದು ಅವರಿಂದ ಪರಿಗಣಿಸಲ್ಪಟ್ಟು ರಾಮಾನುಜರಿಗೆ ಆ ಐದು ಜನ ಶಿಷ್ಯರ ಮೂಲಕ ಅವರರಿತಿದ್ದ ಸಕಲ ವಿಷಯಗಳನ್ನೂ ಉಪದೇಶ ಮಾಡಿಸಿದರೆಂಬುದಾಗಿ ಇತಿಹಾಸ! ಇದರಿಂದಲೇ ರಾಮಾನುಜರಿಗೆ “ಪಂಚಾಚಾರ್ಯ ಸಮಾಶ್ರಿತಃ ಎಂಬುದಾಗಿ ಹೆಸರು ಬಂದದ್ದು.

ಯಾಮುನರು ಶಿಷ್ಯರಾಗಿದ್ದ ಮಹಾಪೂರ್ಣರೆನ್ನುವರು ಪ್ರಬಂಧಗಳನ್ನು ರಾಮಾನುಜರಿಗೆ ಉಪದೇಶಿಸಿದರಂತೆ, ಇದಕ್ಕಾಗಿ ರಾಮಾನುಜರು ಇದ್ದ ಎಡೆಗೇ ಬಂದು ಅವರ ಮನೆಯಲ್ಲಿಯೇ ಬಿಡಾರ ಹೂಡಿ ಅವರು ಈ ಎಲ್ಲಾ ಪ್ರಬಂಧಗಳನ್ನೂ,ಅವುಗಳ ಸ್ವಾರಸ್ಯಾಂಶಗಳನ್ನೂ ಅರೆದು ಕುಡಿಸಿದರು ಎಂದು ರಾಮಾನುಜರ ಇತಿಹಾಸ ಸಾರುತ್ತದೆ. ರಾಮಾನುಜರಿಗೆ ಈ ಆಚಾರ್ಯರ ಮೇಲೆ ಎಷ್ಟೊಂದು ವಿಶ್ವಾಸ ಏರ್ಪಟ್ಟಿತ್ತೆಂದರೆ ರಾಮಾನುಜರ ಹೆಂಡತಿಯು ಈ ಆಚಾರ್ಯ ದಂಪತಿಗಳು ಸಂಪ್ರದಾಯದಲ್ಲಿ ತಮಗಿಂತ ಕೀಳೆಂದು ಕಂಡುಕೊಂಡು ಒಮ್ಮೆ ಅವಮಾನಪಡಿಸಲು, ಅವರುಗಳು ಅಪಮಾನ ಪಟ್ಟುಕೊಂಡು ಹೊರಟು ಹೋದರಂತೆ. ಇದರಿಂದ ರಾಮಾನುಜರು ಹೆಂಡತಿಯ ಮೇಲೆ ಕೋಪಿಸಿಕೊಂಡು, ಇತರ ಕಾರಣಗಳೂ ಸಿಕ್ಕಿದ್ದರಿಂದ ಸನ್ಯಾಸಾಶ್ರಮ ಸ್ವೀಕರಿಸಿದರಂತೆ! ಅಂದರೆ ಅವರಿಗೆ ಪ್ರಬಂಧ ಹೇಳಿದ ಆಚಾರ್ಯರ ಮೇಲೂ, ಅಂತಹ ಬೆಲೆಯುಳ್ಳ ಪ್ರಬಂಧಗಳ ಮೇಲೂ, ಅವುಗಳನ್ನು ರಚಿಸಿದ ಆಳ್ವಾರುಗಳ ಮೇಲೂ ಎಷ್ಟೊಂದು ಅಭಿಮಾನವಿದ್ದಿತು. ಅವರ ಅಧ್ಯಯನ ಎಷ್ಟು ಗಾಢವಾಗಿ ನಡೆದಿತ್ತು ಎನ್ನುವ ವಿಚಾರವೆಲ್ಲಾ ತಿಳಿಯುತ್ತದೆ.



(ಸಶೇಷ)

# ಶ್ರವಣ ನಕ್ಷತ್ರೋತ್ಸವ

***ಶ್ರೀವೆಂಕಟೇಶ್ವರ ಸ್ವಾಮಿಯವರ ಅವತಾರ ನಕ್ಷತ್ರ ಶ್ರವಣ. ಶ್ರವಣದ ದಿನದಂದು ಬೆಳಗ್ಗೆ ಭೋಗ ಶ್ರೀನಿವಾಸ ಮೂರ್ತಿ ಹಾಗೂ ದೇವಿಯರೊಂದಿಗೆ ಶ್ರೀ ಮಲೆಯಪ್ಪ ಸ್ವಾಮಿಗೆ ಅಭಿಷೇಕ ನಡೆಯುತ್ತದೆ. ಎಲ್ಲಾ ಸೇವೆಗಳು ಆದನಂತರ ಆ ಸಾಯಂಕಾಲ ಶ್ರೀ ಮಲೆಯಪ್ಪಸ್ವಾಮಿ ಸಹಸ್ರ ದೀಪಾಲಂಕಾರ ಸೇವೆಯಲ್ಲಿ ಪ್ರತಿದಿನದಂತೆಯೇ ಪಾಲ್ಗೊಂಡು ನಂತರ ಪುರವೀಧಿಯಲ್ಲಿ ಮೆರವಣಿಗೆ ಪಡೆದು ದೇವಾಲಯದೊಳಗೆ ಪ್ರವೇಶಿಸುತ್ತಾರೆ.***

***ತಿರುಮಲೆಯಲ್ಲಿ ಶ್ರವಣ ನಕ್ಷತ್ರಕ್ಕೆ ಕೆಲ ತಿಂಗಳಿನಲ್ಲಿ ವಿಶೇಷವಾಗಿ ಉತ್ಸವಗಳು ನಡೆಸುತ್ತಾರೆ.***

***ಪ್ರತಿ ಕನ್ಯಾಮಾಸದಲ್ಲಿ ಶ್ರವಣದಲ್ಲಿ ಮುಗಿಯುವಂತೆ ಬ್ರಹ್ಮೋತ್ಸವಗಳು ನಡೆಯುತ್ತವೆ. ಕಾರ್ತಿಕ ಮಾಸದಲ್ಲಿ ಶ್ರವಣದಂದು ಶ್ರೀ ಸ್ವಾಮಿಯವರಿಗೆ ಪುಷ್ಪಯಾಗೋತ್ಸವ ನಿರ್ವಹಿಸುತ್ತಾರೆ.***

# ತಿರುಮಲೆ - ಕಾಲಮಾನಾಚರಣೆಗಳು

- ಮೂಲ . ಡಾ|| ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

(ಹಿಂದಿನ ಸಂಚಿಕೆಯಿಂದ)

“ಅದೌ ಕೃತಯುಗೇ ಜಂಬೂದ್ವೀಪೇ ಭರತವರ್ಷೇ
ಗಂಗಾಯಾ ದಕ್ಷಿಣೇ ಭಾಗೇ ಯೋಜನಾನಾಂ ಶತದ್ವಯೇ,
ಸಪ್ತ ಯೋಜನ ಮಾತ್ರೇಣ ಪೂರ್ವಾಂಭೋದೇಸ್ತು ಪಶ್ಚಿಮೇ
ಮಾಸೇ ಭಾದ್ರಪದೇ ವಿಷ್ಣುತಿಥ್ಯಾಂ ವಿಷ್ಣು ಸಮನ್ವಿತೇ,
ಸಿದ್ಧಯೋಗೇ ಸೋಮ ವಾರೇ ಗಿರೌ ನಾರಾಯಣಾಹ್ವಯೇ.
ಸ್ವಾಮಿ ಪುಷ್ಕರಿಣಿತೀರೇ ಪಶ್ಚಿಮೇ ಭೂತ್ಯಪಶ್ಚಿಮೇ.
ಬೃಂದಾರಕಾಣಾಂ ಬೃಂದೇಸ್ತು ಪ್ರಾರ್ಥಿತೋ ಲೋಕರಕ್ಷಕಃ
ಆವಿರ್ಭೂವ ಭಗವಾನ್ ಶ್ರೀನಿವಾಸಃ ಪರಃಪುಮಾನ್

(ಮೊದಲು ಕೃತಯುಗದಲ್ಲಿ ಜಂಬೂ ದ್ವೀಪದ ಭರತವರ್ಷದಲ್ಲಿರುವ ಗಂಗಾನದಿಗೆ ದಕ್ಷಿಣ ಭಾಗದಲ್ಲಿರುವ ಎರಡೂ ನೂರು ಯೋಜನೆಯ ದೂರದಲ್ಲಿ ಪೂರ್ವ ಸಮುದ್ರಕ್ಕೆ ಏಳು ಯೋಜನೆಯ ದೂರಕ್ಕೆ ಪಶ್ಚಿಮದಿಕ್ಕಿನಲ್ಲಿ ಭಾದ್ರಪದ ಮಾಸದಲ್ಲಿ ಶ್ರವಣಾ ನಕ್ಷತ್ರಯುಕ್ತವಾದ ದ್ವಾದಶಿ ತಿಥಿಯಂದು ಸೋಮವಾರ ಸಿದ್ಧಿ ಯೋಗದಲ್ಲಿ ನಾರಾಯಣಾದ್ರಿಯೆಂಬ ಬೆಟ್ಟದ ಮೇಲೆ (ಶ್ರೀನಿವಾಸನ ಆವಾಸಸ್ಥಾನವಾದ ಬೆಟ್ಟಕ್ಕೆ ಇದು ಇನ್ನೋಂದು ಹೆಸರು) ಸಂವತ್ಸರಾದ್ಯಂತ್ಯ ಸಮೃದ್ಧವಾದ ಸ್ವಾಮಿ ಪುಷ್ಕರಿಣಿಯ ಪಶ್ಚಿಮಕ್ಕೆ ಲೋಕ ರಕ್ಷಕನಾಗಿ ಪುರುಷೋತ್ತಮನಾದ ಶ್ರೀನಿವಾಸ ಭಗವಂತನು ದೇವತಾವೃಂದದಿಂದ ಸ್ತುತ್ಯನಾಗಿ ಆವಿರ್ಭೂತನಾದನು.)

ಎಂದು ಪದ್ಮಪುರಾಣದ ಮೂವತ್ತೂರನೇ ಅಧ್ಯಾಯದ ಕೊನೆಯ ಭಾಗದಲ್ಲಿ ಯಥಾ ರೀತಿ ಶ್ರೀನಿವಾಸ ಸ್ವಾಮಿಯ ಅವತಾರವು ಸೋಮವಾರ ಆಗುವುದೆಂದು ಭಗವದನುಗ್ರಹ - (ಅನುಮತಿ) ಸೇರ್ಪಡಲು ನಾಸಿಕಾಗ್ರ ಮೂಲದ ಅರ್ಧಚಂದ್ರಾಕಾರದ ತಿರುನಾಮವನ್ನು ಧರಿಸಿ ದಿವ್ಯಪಾಲಕ ಭಾಗದ ರೇಖಾದ್ವಯರೂಪ ಮುತ್ತಿನ ತಿರುನಾಮವನ್ನು,ದಿವ್ಯನಯನಾರವಿಂದಗಳಿಗೆ ಶೀತಲ ದ್ರವ್ಯ ವಿಶೇಷಗಳಿಂದ ಕೂಡಿದ ಕಾಡಿಗೆಯನ್ನು ಧರಿಸಿ ಮಿಕ್ಕ ದಿನವೆಲ್ಲಾ ಎಲ್ಲಾ ಭಕ್ತರಿಗೂ ಸ್ವಾಮಿಯ ದರ್ಶನ ಭಾಗ್ಯವನ್ನು ಒದಗಿಸಲಾಯಿತು.

ಶೂರಪುರುಷನು ತನ್ನ ಶೌರ್ಯಾಯುಧಗಳನ್ನು ಧರಿಸುವ ಮೊದಲು ಚಂದನ ಕುಸುಮಗಳನ್ನು ಸಮರ್ಪಿಸಿ, ನಂತರವೇ ತಾನು ಅವುಗಳನ್ನು ಸ್ವೀಕರಿಸಿದ ಕುರುಹಾಗಿ ವೇಂಕಟಾಚಲಪತಿಯು ತದಿಗೆಯಂದು ತ್ರಿಸಂಧ್ಯಾಕಾಲದಂದು ಹೂಮಾಲೆಯನ್ನು ಸಮರ್ಪಿಸುವಾಗ ತನ್ನ ದಿಗ್ವಿಜಯಕ್ಕೆ ಪ್ರಧಾನ ಸಾಧನೆಗಳಾದ ಸ್ವರ್ಣೋಪೇತ ಶಂಖ- ಚಕ್ರಗಳಿಗೆ ಹೂವಿಗೆ ಹಾರವನ್ನು ಸಮರ್ಪಿಸಿದ ನಂತರವೇ ಶ್ರೀವಕ್ಷಃಸ್ಥಳ ಲಕ್ಷ್ಮೀ ದಿವ್ಯ ಕಿರೀಟ ಮೊದಲಾದ ದಿವ್ಯಾಯವಗಳಿಗೆ ಶ್ರೀಹಾರವನ್ನು ಸಮರ್ಪಿಸತಕ್ಕದ್ದು. ಶ್ರೀ ವೇಂಕಟೇಶ್ವರನಿಗೆ ಅಭಿಷೇಕ ಮಾಡುವ ಸಮಯದಲ್ಲಿ ಪ್ರತಿ ಶುಕ್ರವಾರದಂದು “ಕ್ಷಣ ಕಾಲವೂ ಸಹಾ ನಿನ್ನನಗಲಿ ಇರಲಾರೆನು” ಎಂದು ನಿತ್ಯ ವಿನಿಯೋಗಿನಿಯಾಗಿ ವಕ್ಷಃಸ್ಥಳದ ಬಲಭಾಗದಲ್ಲಿ ವಾಸಿಸುತ್ತಿರುವ ಲಲಾನೆಯಾದ ಅಲರ್ಮೇಲ್‌ಮಂಗಾದೇವಿ ವಕ್ಷದಿಂದ ಇಳಿವ ಕ್ಷಣಕಾಲದ ವಿಯೋಗವೂ ಕೂಡಾ ಸಹಿಸಲಾರ



ಳೆಂದು ಆಕೆಯ ಸ್ವಭಾವವನ್ನು ರಾಮಾನುಜಾಚಾರ್ಯರು ಚಿಂತಿಸಿ,ಆಕೆಯ ಅಪರಾವತಾರ ಗಳಾದ ಆಕೆಯ ಪ್ರಿಯ ಸಖಿಯಾದ ಭೂದೇವಾಂಶ ಸಂಭೂತಳಾದ ಪೆರಿಯಾಳ್ವಾರ್‌ಗೆ ಏಕಮಾತ್ರ ಪುತ್ರಿಯಾದ ಗೋದಾದೇವಿ ತುಳಸಿ ಪರಿಮಳಗಳೊಂದಿಗೆ ಜನಿಸಿದವಳಾಗಿ ಭಗವತ್ಪ್ರೇಮದಿಂದಲೇ ಅವತರಿಸಿದವಳೆಂದೂ, ಮೊದಲ ದಿನದಿಂದಲೂ ಭಗವಂತನ ಅನುಭೂತಿಗಾಗಿ ಆಸೆಪಡುತ್ತಿರುವಳೆಂದೂ, ಅದು ಲಭಿ ಸಲು ಆತನನ್ನು ಹೊಂದಲು ನೂರಾರು ಉಪಾಯ ವಿಶೇಷಗಳನ್ನು ಕೈಗೊಳ್ಳುತ್ತಿರುವಳೆಂದೂ ದೇವನ ಸನ್ನಿಧಿಗೆ ಸಂದೇಶ ಕಳುಹಿಸಲಾಗಿ ಈ ಸ್ವಾಮಿಯು ಆಕೆಯ ಸಲುವಾಗಿ ಗಮನ ಶಮನಗಳನ್ನು ತೊರೆದು ಕಡೆಗೆ ಈ ದಿವ್ಯಕ್ಷೇತ್ರಕ್ಕೆ ಯೋಗ್ಯಳಾದವಳೆಂಬ ವಿಷಯ ತಿಳಿದು ಆನಂದಗೊಂಡು - ಈ ರೀತಿಯ ವಿರಹದುರಿಯನ್ನು ಆಕೆ ಅನುಭವಿಸಿದ್ದಾಗಿ 'ನಾಚ್ಚಿಯಾರ್ ತಿರುಮೊಳಿ' ಎಂಬ ದ್ರಾವಿಡ ಪ್ರಬಂಧದಲ್ಲಿ ವರ್ಣಿತಗೊಂಡಿದೆ.ಶ್ರೀವೇಂಕಟೇಶ್ವರ ಸ್ವಾಮಿಯು ಪುರುಷಸೂಕ್ತವೇ ಮೊದಲಾದ ಸೂಕ್ತಗಳ ಪಾರಾಯಣದೊಂದಿಗೆ ಅಭಿಷೇಕವನ್ನು ಸ್ವೀಕರಿಸಿದ ನಂತರ ಅಲರ್‌ಮೇಲ್ ಮಂಗಾದೇವಿ ಅಭಿಷೇಕವನ್ನು ಸ್ವೀಕರಿಸಿದಳೆಂಬ ಅನುಸಂಧಾನದಿಂದ ಈ ಪದ್ಧತಿ ವಿಧಿಸಲಾಯಿತು.

ತಿರುಮಲೆ ಸಂಸ್ಥಾನವು ಬೆಟ್ಟ - ಅರಣ್ಯಗಳಿಂದ ಕೂಡಿದ್ದ ಕಾರಣಕ್ಕೆ ಅದನ್ನು ವಿಸ್ತರಿಸಿ ಕಟ್ಟಡಕ್ಕೆ ಯೋಗ್ಯವಾಗಿರದ ಕಾರಣಕ್ಕೆ ಅನಾದಿ ಕಾಲದ ಧ್ರುವಕುರಾರ (ಚಂಡಿವಾಳನ್ ) ಎಂಬ ಭಕ್ತನೊಬ್ಬನು ದೇವಾಲಯದ ಪಶ್ಚಿಮ ದಿಕ್ಕಿರುವ ಪ್ರಾಕಾರದ ಪಕ್ಕಕ್ಕೆ ಒಂದು ಬೀದಿಯನ್ನು ನಿರ್ಮಿಸಿ, ಅಂದಿನ ಕೆಲಸಗಾರರಿಗಾಗಿ ಮಾತ್ರವೇ ನಿತ್ಯವಾಸಿಸಲು ನಿವೇಶನಗಳನ್ನು ಕಟ್ಟುವ ಏರ್ಪಾಟು ಮಾಡಿದ್ದಾನೆ ಆ ಕಾಲದ ದೇಶಾಧಿಪತಿಗಳಾದ ವಿಷ್ಣು ಭಕ್ತರು ಸ್ವಾಮಿಯ ಉತ್ಸವಗಳನ್ನು ಜರುಗಿಸಲು ತೇರುಬೀದಿಗಳನ್ನು ನಿರ್ಮಿಸುವಷ್ಟು ಸಮರ್ಥವಿರದ ಕಾರಣ

"ದೇವಸ್ಥಾನಸ್ಯ ಪರಿತಃ ವೀಧಿ ಕಾಕರಕ್ಷಣಾಮೇ
ಸಮೀಪೇ ವಾ ಪುರಿಂ ಕೃತ್ವಾ ತತ್ರ ದೇವ್ಪೋತ್ಸವಂಚರೇತ್"

(ದೇವಸ್ಥಾನದ ಸುತ್ತೂ ಬೀದಿಗಳನ್ನು ನಿರ್ಮಿಸಲು ಅವಕಾಶವಿರದ ಕಾರಣ ಸಮೀಪದಲ್ಲಿ ವಠಾರವನ್ನು ನಿರ್ಮಿಸಿ ಅಲ್ಲಿ ದೇವರ ಉತ್ಸವಗಳನ್ನು ಅನುಷ್ಠಾನಗೊಳಿಸತಕ್ಕದ್ದು.)

(- ಸಶೇಷ)

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

## ಮಾಡಬೇಕಾದವು :

☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.
ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

## ಮಾಡಬಾರದವು :

☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

## ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

✗ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
✗ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
✗ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
✗ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
✗ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
✗ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
✗ ಜಂತುವಧೆ ನಿಷೇಧ.
✗ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
✗ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
✗ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.

**ನೀತಿ ಕಥೆ**

# ಶಿಲ್ಪಿಯ ನ್ಯಾಯ ಬೋಧನೆ

-ಶ್ರೀಮತಿ. ಸುಧಾ ಮಧುಸೂದನ್

ಅದೊಂದು ಊರು. ಅಲ್ಲಿ ಒಬ್ಬ ಪ್ರಸಿದ್ಧ ಶಿಲ್ಪಿ ಇದ್ದನು. ಅವನು ಮೂರು ಗೊಂಬೆಗಳನ್ನು ಕೆತ್ತನೆ ಮಾಡಿದನು. ಅವುಗಳನ್ನು ಮಾರಾಟಕ್ಕೆ ಇಟ್ಟನು. ಆ ಊರಿನ ರಾಜನಿಗೆ ಇವನ ಮೂರು ಗೊಂಬೆಗಳು ಬಹಳ ಇಷ್ಟವಾಯಿತು. ಮೂರು ಬೊಂಬೆಗಳೂ ಒಂದೇ ರೀತಿಯಾಗಿವೆ ಯಾವುದೇ ವ್ಯತ್ಯಾಸವಿರಲಿಲ್ಲ. ಆದರೆ ಅದರ ಬೆಲೆಯಲ್ಲಿ ವ್ಯತ್ಯಾಸವಿತ್ತು ಮೊದಲನೆಯ ಗೊಂಬೆ ಬೆಲೆ - 500 ನಾಣ್ಯಗಳು ಎರಡನೆಯದು 100 ನಾಣ್ಯಗಳು ಹಾಗೂ ಮೂರನೆಯ ಗೊಂಬೆಗೆ 10 ನ್ಯಾಣಗಳು.

ರಾಜನು ಆಶ್ಚರ್ಯದಿಂದ ಶಿಲ್ಪಿಯನ್ನು ಕೇಳಿದನು "ಅಯ್ಯಾ ಶಿಲ್ಪಿಗಳೇ... ಎಲ್ಲಾ ಗೊಂಬೆಗಳೂ ಒಂದೇ ರೀತಿಯಾಗಿದ್ದರೂ ಅದರ ಬೆಲೆಯಲ್ಲಿ ವ್ಯಾತ್ಯಾಸವೇಕೆ?" ಎಂದು

ಅದಕ್ಕೆ ಶಿಲ್ಪಿಯು ಒಂದು ಗೊಂಬೆಯನ್ನು ಕೈಯಲ್ಲಿ ಎತ್ತಿಕೊಂಡು ಅದರ ಎಡಕಿವಿಯಲ್ಲಿ ಒಂದು ಕಡ್ಡಿಯನ್ನು ತೂರಿಸಿದನು. ಅದು ಬಲಗಿವಿಯಿಂದ ಹೊರಗೆ ಬಂತು ಅದಕ್ಕೆ ರಾಜಾ ಇದಕ್ಕೆ 10 ಚಿನ್ನದ ನಾಣ್ಯಗಳು ಎಂದನು.

ಅಂದರೆ ಈ ಬೊಂಬೆಯು ತನ್ನ ಒಂದು ಕಿವಿಯಲ್ಲಿ ಕೇಳಿದನ್ನು ಇನ್ನೊಂದು ಕಿವಿಯಲ್ಲಿ ಬಿಟ್ಟು ಬಿಡುವುದು. ಅಂದರೆ ತಲೆಯಲ್ಲಿ ಏನನ್ನು ಉಳಿಸಿಕೊಳ್ಳದೆಯೇ ಎಲ್ಲವನ್ನು ಬಿಟ್ಟು ಬಿಡುವುದು.ಯಾವುದೇ ಉಪಯುಕ್ತ ವಿಷಯವನ್ನೂ ಸಹ ತಲೆಯಲ್ಲಿ ಇಟ್ಟುಕೊಳ್ಳುವುದಿಲ್ಲ.ಅದಕ್ಕೆ ಇದು ಸಾಮಾನ್ಯ ಬೊಂಬೆ ಎಂದನು.

ಇನ್ನೊಂದು ಬೊಂಬೆಯನ್ನು ಶಿಲ್ಪಿಯು ಕೈಗೆ ಎತ್ತಿಕೊಂಡು ಅದರ ಕಿವಿಯಲ್ಲಿ ಕಡ್ಡಿಯನ್ನು ತೋರಿಸಿದಾಗ ಆ ಕಡ್ಡಿಯು ಬಾಯಿಯಿಂದ ಹೊರಗೆ ಬಂದಿತು. ಅದಕ್ಕೆ ಶಿಲ್ಪಿ "ಅಯ್ಯಾ ಮಹಾರಾಜ ಈ ಬೊಂಬೆಯೋ ಮಧ್ಯಮಬೊಂಬೆ." ಇದು ಸಹ ಮನಸ್ಸಿನಲ್ಲಿ ಎಲ್ಲವನ್ನೂ ಉಳಿಸಿಕೊಳ್ಳುವುದಿಲ್ಲ. ಯಾವುದೇ ವಿಷಯವನ್ನು ಕೇಳಿದರು ತನಗೆ ಯಾವುದು ಬೇಕೋ ಅದನ್ನು ಇಟ್ಟುಕೊಂಡು ಮಿಕ್ಕದ್ದನ್ನು ಬಿಟ್ಟು ಬಿಡುವುದು. ಅದಕ್ಕೆ ಇದರ ಬೆಲೆ - 100 ಚಿನ್ನದ ನಾಣ್ಯಗಳು.

ಇನ್ನು ಶಿಲ್ಪಿಯು ಇನ್ನೊಂದು ಬೊಂಬೆಗೂ ಅದೇ ರೀತಿಯಾಗಿ ಕಿವಿಯಲ್ಲಿ ಕಡ್ಡಿಯನ್ನು ತೂರಿಸಿದನು. ಆದರೆ ಆ ಕಡ್ಡಿಯು ಯಾವ ಒಂದು ಭಾಗದಿಂದಲೂ ಹೊರಗೆ ಬರಲಿಲ್ಲ. ಆಗ ಶಿಲ್ಪಿಯೂ "ಎಲೈ ರಾಜನ್ ಇದು ಉತ್ತಮ ಬೊಂಬೆ ಇದು ತಾನು ಯಾವುದೇ ಕೇಳಿದರು ಮನನ ಮಾಡಿ ತನ್ನ ಮನಸ್ಸಿನಲ್ಲಿ ಇಟ್ಟುಕೊಳ್ಳುವುದು. ತಾನು ಕೇಳಿದ ಒಳ್ಳೆಯ ವಿಷಯವನ್ನು ತನ್ನ ನಿಜ ಜೀವನದಲ್ಲಿ ಅಳವಡಿಸಿಕೊಳ್ಳುವುದು" ಎಂದನು.

ಮಿಕ್ಕ ಬೇಡದ ವಿಷಯವನ್ನು ಅಲ್ಲಿಯೇ ಇರಿಸುವುದು. ಅದನ್ನು ಹೊರಗೆ ಹಾಕುವುದಿಲ್ಲ. ಹೀಗೆ ಹೊರಗೆ ಹೇಳುವುದರಿಂದ ಅದರಿಂದ ವಿಪರೀತವಾಗುವುದು ಎಂದು ತಾನೇ ಅದನ್ನು ತನ್ನ ಮನಸ್ಸಿನ ಮೂಲೆಯಲ್ಲಿ ಎಸೆದು ಸಂತೋಷವಾಗಿ ಇರುವುದು. ಅದಕ್ಕೆ ಈ ಬೊಂಬೆಯು ಉತ್ತಮ ಬೊಂಬೆ ಹಾಗೂ ಇದರ ಬೆಲೆಯು 500 ಚಿನ್ನದ ನಾಣ್ಯಗಳು ಎಂದು ಹೇಳಿದನು.

ಶಿಲ್ಪಿಯ ಈ ನುಡಿಗಳನ್ನು ಕೇಳಿ ರಾಜನು ಸಂತೋಷದಿಂದ ಶಿಲ್ಪಿಗೆ ಯಥೇಚ್ಛವಾಗಿ ಧನಕನಕಗಳನ್ನು ಕೊಟ್ಟು ಸನ್ಮಾನ ಮಾಡಿದನು.

ಮಕ್ಕಳೇ ನೀವೇ ಹೇಳಿ ನೀವು ಯಾವ ಬೊಂಬೆಯ ತರಹ ಇರಬೇಕೆಂದು ಬಯಸುವಿರಿ?




ಚಿತ್ರಕಥೆ

# ಬಾಲ ಹನುಮಂತ

ಕಥೆ: ತೆಲುಗು ಮೂಲ: ಡಿ.ಶ್ರೀನಿವಾಸದೀಕ್ಷಿತರು
ಅನುವಾದ: ಸೂರ್ಯವಂಶಿ
ಚಿತ್ರಗಳು: ಕೆ.ತುಲಸೀ ಪ್ರಸಾದ್




ಲೋಕಗಳೆಲ್ಲಾ ಅಲ್ಲಾಡಿ ಹೋಗಿವೆ. ದೇವತೆಗಳೆಲ್ಲರೂ ಹೋಗಿ ಬ್ರಹ್ಮನನ್ನು ಪ್ರಾರ್ಥಿಸಿದ್ದಾರೆ.
ವಿಧಾತಾ ನೀವೇ ನಮ್ಮನ್ನು ಕಾಪಾಡಬೇಕು.
ಎಲ್ಲರೂ ವಾಯುವಿನ ಗುಹೆಗೆ ನುಗಿದ್ದಾರೆ. ಬ್ರಹ್ಮ ವಾಯುವಿನೊಂದಿಗೆ
“ಮಗನೇ! ನಿನ್ನ ಸಂಚಾರವನ್ನು ಹೀಗೆ ನಿಲ್ಲಿಸಿದರೆ ಸೃಷ್ಟಿಗೆ ಪ್ರಮಾದಕರ”
“ಮತ್ತೆ ನಮ್ಮ ಆಂಜನೇಯನ ಸಂಗತಿಯೇನು?”
ತನ್ನ ಅಮೃತ ಸ್ಪರ್ಶದಿಂದ ಆಂಜನೇಯನನ್ನು ನೇವರಿಸಿ ಮೊದಲ ಸ್ಥಿತಿಗೆ ತಂದಿದ್ದಾನೆ ಬ್ರಹ್ಮ
“ ನನ್ನ ಹಣ್ಣೆಲ್ಲಿ?”
“ನನ್ನ ಬ್ರಹ್ಮಾಸ್ತ್ರ ನಿನ್ನ ಮೇಲೆ ಕೆಲಸ ಮಾಡದು ಇದು ನನ್ನ ವರವು”
ದವಡೆಯ ಮೇಲೆ ಬ್ರಹ್ಮಾಸ್ತ್ರದಿಂದ ಹೊಡೆತ ತಿಂದ ಆ ಬಾಲಕನು ಹನುಮಂತನೆಂಬ ಹೆಸರಿನಿಂದ ಕೀರ್ತಿ ಹೊಂದುತ್ತಾನೆ ಎಂದಿದ್ದಾನೆ ಬ್ರಹ್ಮ.
“ದೇವತೆಗಳ ಅಸ್ತ್ರ - ಶಸ್ತ್ರಗಳಾವು ಈತನ ಮೇಲೆ ಕೆಲಸ ಮಾಡಲಾರವು
“ತಥಾಸ್ತು”
ವಾಯುದೇವನು ಶಾಂತನಾಗಿದ್ದಾನೆ. ಲೋಕಗಳೆಲ್ಲಾ ಸ್ವಲ್ಪಮಟ್ಟಿಗೆ ನಿಟ್ಟುಸಿರು ಬಿಟ್ಟಿವೆ.
“ಅಮ್ಮಯ್ಯಾ! ಬದುಕಿಕೊಂಡೆವು”
ಅಂಜನೇಯು ತನ್ನ ಮಗನನ್ನೆತ್ತಿಕೊಂಡು ಮುದ್ದಾಡಿ
“ಮಗು ಹನುಮಂತನೇ ಚಿರಕಾಲ ಬಾಳು”
ಸರ್ವೇ ಜನಾಃ ಸುಖಿನೋ ಭವಂತು”
ಸಮಾಪ್ತಿ

**ರಸಪ್ರಶ್ನೆಗಳು :**

# ಕ್ವಿಜ್

1. ಹಿಂದೂ ಸಂಪ್ರದಾಯದ ಪ್ರಕಾರ ಎಷ್ಟು ನಕ್ಷತ್ರಗಳಿವೆ?

1. 27 2. 29

3. 18 4. 12

2. ಶ್ರೀರಾಮನ ಜನ್ಮ ನಕ್ಷತ್ರ ಯಾವುದು?

1. ಅಶ್ವಿನಿ 2. ಆಶ್ಲೇಷ

3. ಪುನರ್ವಸು 4. ಅನುರಾಧ

3. ಶ್ರೀಕೃಷ್ಣನ ಜನ್ಮ ನಕ್ಷತ್ರ ಯಾವುದು?

1. ರೋಹಿಣಿ 2. ಭರಣಿ

3. ಪುಷ್ಯಮಿ 4. ಕೃತಿಕಾ

4. ಶ್ರೀವೆಂಕಟೇಶ್ವರ ಸ್ವಾಮಿಯ ನಕ್ಷತ್ರ ಯಾವುದು?

1. ಉತ್ತರ 2. ಶ್ರವಣ

3. ಮಖ 4. ಪುಬ್ಬ

5. ಶ್ರೀನರಸಿಂಹಸ್ವಾಮಿಯ ನಕ್ಷತ್ರ ಯಾವುದು?

1. ಸ್ವಾತಿ 2. ಚಿತ್ತ

3. ಪುಬ್ಬ 4. ರೋಹಿಣಿ

6. ಸಪ್ತರ್ಷಿ ಮಂಡಲದಲ್ಲಿ ಎಷ್ಟು ನಕ್ಷತ್ರಗಳಿವೆ?

1. 5 2. 4

3. 7 4. 8

7. ಸಪ್ತರ್ಷಿ ಮಂಡಲದಲ್ಲಿ ಯಾವ ನಕ್ಷತ್ರದೊಂದಿಗೆ ಅರುಂಧತಿ ನಕ್ಷತ್ರವನ್ನು ಕಾಣಬಹುದು?


1. ವಸಿಷ್ಠ 2. ಅತ್ರಿ

3. ಗೌತಮ 4. ಅಗಸ್ತ್ಯ

ಉತ್ತರಗಳು:
1) 1 2) 3 3) 1 4) 2 5) 1 6) 3 7) 1

# ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Edited and Published on behalf of T.T.Devasthanams by **Prof. K.Rajagopalan**, Phd., Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.

# ಅಪ್ಪಲಾಯಗುಂಟ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು 2021 ಜೂನ್ 19 ರಿಂದ 27 ರ ವರೆಗೆ



**19-06-2021 ಶನಿವಾರ**

ಹಗಲು: ಧ್ವಜಾರೋಹಣ - ರಾತ್ರಿ: ದೊಡ್ಡಶೇಷವಾಹನ.

**20-06-2021 ಭಾನುವಾರ**

ಹಗಲು: ಚಿಕ್ಕಶೇಷವಾಹನ - ರಾತ್ರಿ: ಹಂಸವಾಹನ.

**21-06-2021 ಸೋಮವಾರ**

ಹಗಲು : ಸಿಂಹವಾಹನ - ರಾತ್ರಿ: ಮುತ್ತಿನಚಪ್ಪರವಾಹನ.

**22-06-2021 ಮಂಗಳವಾರ**

ಹಗಲು: ಕಲ್ಪವೃಕ್ಷವಾಹನ - ರಾತ್ರಿ: ಸರ್ವಭೂಪಾಲವಾಹನ

**23-06-2021 ಬುಧವಾರ**

ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ - ರಾತ್ರಿ: ಗರುಡವಾಹನ.

**24-06-2021 ಗುರುವಾರ**

ಹಗಲು: ಹನುಮದ್ವಾಹನ - ರಾತ್ರಿ: ಗಜವಾಹನ.

**25-06-2021 ಶುಕ್ರವಾರ**

ಹಗಲು: ಸೂರ್ಯಪ್ರಭವಾಹನ - ರಾತ್ರಿ: ಚಂದ್ರಪ್ರಭವಾಹನ.

**26-06-2021 ಶನಿವಾರ**

ಹಗಲು: ರಥೋತ್ಸವ - ರಾತ್ರಿ: ಅಶ್ವವಾಹನ.

**27-06-2021 ಭಾನುವಾರ**

ಹಗಲು: ಚಕ್ರಸ್ನಾನ - ರಾತ್ರಿ: ಧ್ವಜಾವರೋಹಣ.



ಜಾಪಾಲಿ ಆಂಜನೇಯಸ್ವಾಮಿ (ತಿರುಮಲೆ)